ನೀತಿ ಪದ್ಯಸಂಗ್ರಹ

ದಕ್ಷಿಣ ಕನ್ನಡಾ ಜಿಲ್ಲಾ
ಗ್ರಾಮೋದ್ಧಾರಕ ಸಂಘದವರಿಂದ ಸಂಗ್ರಹಿಸಿ
ಪ್ರಕಟಿಸಲ್ಪಟ್ಟಿತು.

1938.

ಮಾರುತಿ ಛಾಪಖಾನೆ, ಕಾರ್ಕಳ.

ಬೆಲೆ: 0—2—0.

ಮುನ್ನುಡಿ.

"ಸದ್ಯದಲ್ಲಿ ಅನೇಕ ಕಾರಣಗಳಿಂದ ಅಭ್ಯುದಯದಲ್ಲಿ ಭಂಗವನ್ನು ಹೊಂದಿರುವ ನಮ್ಮ ಜನಾಂಗವು ಮತ್ತೆ ಶ್ರೇಯಸ್ಸನ್ನು ಪಡೆಯಬೇಕಾದರೆ ಹಿಂದೆ ನಿಂತುಹೋದ ಕಾರ್ಯಗಳೆಲ್ಲವನ್ನೂ ಮತ್ತೆ ಕೈಗೊಳ್ಳಬೇಕು. ಹಿಂದೆ ಇದ್ದ ಧರ್ಮಜ್ಞತೆಯನ್ನು ಮತ್ತೆ ಜನರಲ್ಲಿ ತರಬೇಕು; ಹಿಂದಿನಂತೆ ಜೀವನದಲ್ಲಿ ಶ್ರದ್ಧೆಯಿಂದ ನಡೆಯುವುದನ್ನು ಕಲಿಸಬೇಕು; ಹಿಂದಿನಂತೆ ಪಂಡಿತರು ಮತ್ತು ಜ್ಞಾನಿಗಳ ಉನ್ನತ ವಿಜ್ಞಾನವನ್ನು ಸಾಮಾನ್ಯ ಜನರ ಸಾಮಾನ್ಯ ಜ್ಞಾನದಲ್ಲಿ ಐಕ್ಯಮಾಡಬೇಕು. ಹಿಂದೆ ಜನರಿಗೆ ದೇವರು ಇರುವನೇ ಎಂಬ ಸಂಶಯವಿರಲಿಲ್ಲ. ಮರಣಾನಂತರ ಪಾಪಕ್ಕೆ ನರಕದಲ್ಲಿ ಶಿಕ್ಷೆ ಆಗುವುದೆಂಬ ಭಾವನೆ ಇತ್ತು, ಪಾಪವೆಂದರೆ ಭೀತಿ ಇತ್ತು, ಧರ್ಮಕ್ಕೆ ಕೊನೆಯಲ್ಲಿ ಪ್ರತಿಫಲವುಂಟು ಎಂಬ ನಂಬಿಕೆಇತ್ತು, ಧರ್ಮದಲ್ಲಿ ಆಸಕ್ತಿ ಇತ್ತು. ಈಗ ಅನೇಕ ಕಾರಣಗಳಿಂದ ದೇವರು ಸರ್ವಶಕ್ತನೂ ಸರ್ವವ್ಯಾಪಿಯೂ ಆದ ನಾಯಕನು, ಅವನು ಧರ್ಮಕ್ಕೆ ಸ್ವರ್ಗವನ್ನೂ ಪಾಪಕ್ಕೆ ನರಕವನ್ನೂ ಕೊಡುವನು ಎಂಬ ಭಾವನೆಯು ಶಿಥಿಲವಾಗಿದೆ. ಸ್ವರ್ಗದ ಅಪೇಕ್ಷೆಯಿಂದಲಾಗಲಿ ಅಪೇಕ್ಷೆಯಿಂದ ಅಲ್ಲದೆ ಆಗಲಿ ಜನರು ಧರ್ಮದಲ್ಲಿ ನಡೆಯಬೇಕಾದದ್ದು ಮುಖ್ಯ. ಸ್ವರ್ಗದಲ್ಲಿ ನಂಬಿಕೆ ಇಲ್ಲದವರಾದರೂ ಪ್ರಾಜ್ಞರಾದರೆ ಬೇರೆಯ ಕಾರಣಗಳಿಂದ ಧರ್ಮದಲ್ಲಿ ನಡಿಯುವರು. ನರಕವಿಲ್ಲವೆಂದು ಧೃಢವಾಗಿ ತಿಳಿದವರು ಪ್ರಾಜ್ಞರಾದರೆ ನರಕದ ಭಯವಿಲ್ಲದಿದ್ದರೂ ಪಾಪವನ್ನುಮಾಡರು. ಇವರ ನಡತೆಗೆ ಸಾಕಾದ ಕಾರಣಗಳಿವೆ. ಸ್ವರ್ಗನರಕಗಳ ವಿನಾ ಬೇರೆಯಾದ ಈ ಕಾರಣಗಳು ಜನರಿಗೆ ಈಗ ತಿಳಿಯಬೇಕಾಗಿದೆ. ಯೋಚನಾಪರರಾದ ಕೆಲವರು ಮಾತ್ರ ಈ ವಿಶಯಗಳನ್ನು ತಿಳಕೊಂಡರೆ ಜನಾಂಗದ ಏಳಿಗೆಗೆ ಸಾಕಾಗುವುದಿಲ್ಲ. ಹೀಗೆ ಜನರಲ್ಲಿ ನಷ್ಟವಾಗುತ್ತ ಬಂದಿರುವ ಧರ್ಮಪಕ್ಷಪಾತವೂ, ಪಾಪಭೀತಿಯೂ ಮತ್ತೆ ಹುಟ್ಟುವಂತೆ ಮಾಡುವುದಕ್ಕೆ ನಮ್ಮಲ್ಲಿನ ವಿದ್ಯಾವಂತರು ಹಿಂದಿನ ಸಂಪ್ರದಾಯವನ್ನು ಸಜೀವವಾಗಿ ಮಾಡಬೇಕು. ಈಗ ನಮ್ಮ ಜನರಲ್ಲಿ ಪ್ರೌಢವಿದ್ಯೆಯನ್ನು ಕಲಿತ

ವರಲ್ಲಿ ಅನೇಕರು ಇಂಗ್ಲಿಷಭಾಷೆಯನ್ನು ಮಾತ್ರ ಚೆನ್ನಾಗಿ ಬಲ್ಲರು, ದೇಶ ಭಾಷೆಗಳನ್ನು ಕಾಣರು. ಈ ನವೀನ ವಿದ್ಯಾಸಂಪಾದನೆಯಲ್ಲಿ ಜನ ಸಾಮಾನ್ಯದ ಜೀವನಸ್ವಭಾವವನ್ನು ಅರಿಯಲು ಅವಕಾಶವಿಲ್ಲದೆ ವಿದ್ಯಾವಂತರಿಗೂ, ಸಾಮಾನ್ಯರಿಗೂ ಭಾವನಾಪ್ರಪಂಚವು ಬೇರೆ ಬೇರೆಯಾಗಿ ಹೋಗಿದೆ. ಜನದ ಜೀವನವು ಚೆನ್ನಾಗಿ ಬೆಳೆಯಬೇಕಾದರೆ ಅದು ಒಂದು ವ್ಯಕ್ತಿಯಂತೆ ಇದ್ದು ಅದರ ಒಂದೊಂದು ಭಾಗವೂ ತಾನು ಮಾಡುವ ಕಾರ್ಯದಿಂದ ತಾನು ಬದುಕುವುದಲ್ಲದೆ ಇತರ ಭಾಗಗಳಿಗೂ ಪ್ರಯೋಜನವಾಗುವಂತೆ ಪ್ರವರ್ತಿಸ ಬೇಕು. ಇತರ ಭಾಗಗಳಿಗೆ ಸಹಾಯವಾಗದಂತೆ ತನ್ನ ವ್ಯಕ್ತಿಯನ್ನು ಕುರಿತು ಮಾತ್ರ ಆಸಕ್ತವಾಗಿರುವ ಭಾಗವು ಜನರಲ್ಲಿ ಸೇರಲಾರದು. ಇದು ಜನಾಂಗಕ್ಕೆ ಮಾತ್ರವಲ್ಲದೆ ಅಂಥ ಭಾಗಕ್ಕೂ ಹಾನಿಕರವಾದದ್ದು. ಈಗ ನಮ್ಮ ವಿದ್ಯಾವಂತರು ಇದನ್ನು ನೆನಪಿಗೆ ತೆಗೆದುಕೊಳ್ಳಬೇಕಾಗಿದೆ. ಜನಾಂಗದ ಏಳಿಗೆಯಲ್ಲಿ ಉದ್ಯುಕ್ತರಾದ ಎಲ್ಲರೂ ಈ ವಿಷಯಗಳನ್ನು ಪರ್ಯಾಲೋಚಿಸಿ ಜನಾಂಗದ ತಿಳಿವಿನಮಟ್ಟವನ್ನು ಹೆಚ್ಚಿಸಿ ಜನರಲ್ಲಿ ಧರ್ಮ ಜ್ಞಾನವೂ ಪಾಪಭೀತಿಯೂ ಮತ್ತೆ ಸರ್ವಸಾಮಾನ್ಯವಾಗುವಂತೆ ಮಾಡಬೇಕಾಗಿದೆ. ಒಂದೊಂದು ಜೀವನವೂ ಯತ್ನಯುಕ್ತವಾಗಬೇಕು. ಈ ಮೂಲಕ ಜನಾಂಗದ ಜೀವನವು ಉತ್ತಮವಾಗಬೇಕು ಎನ್ನುವುದಕ್ಕಿಂತ ಭಕ್ತರಿಗಾಗಲಿ ಲೋಕಹಿತೈಷಿಗಳಿಗಾಗಲಿ ಬೇರೆಯೊಂದು ದೊಡ್ಡಲಕ್ಷ್ಯವಿಲ್ಲ. ಈ ಲಕ್ಷ್ಯದಿಂದ ಸಾಮಾನ್ಯದ ತಿಳಿವನ್ನುಹೆಚ್ಚಿಸುವವನು ಅನುಸರಿಸುವುದಕ್ಕೆದಾಸರ ಪದ್ಧತಿಯಷ್ಟು ಅನುಕೂಲವಾದ ಬೇರೆಯೊಂದು ಪದ್ಧತಿಯಿಲ್ಲ.”

ಶ್ರೀಮಾನ್ ಅಯ್ಯಂಗಾರರು ಅವರ ‘ವಿಮರ್ಶೆ’ ಎಂಬ ಪುಸ್ತಕದ ಪ್ರಥಮ ಭಾಗದ ಎರಡನೇ ವಿಷಯವಾಗಿ ಬರೆದ ಮೇಲಣ ವಿಚಾರಗಳು ಬಹು ಗಹನವಾದುವುಗಳು. ಜನಾಂಗದ ಆರ್ಥಿಕ ಸ್ಥಿತಿಯು ಜನರ ನೈತಿಕ ಅಭಿವೃದ್ಧಿಯ ಮೇಲೆ ಹೊಂದಿಉಂಟು ಎಂಬುದನ್ನು ಯಾರೂ ಮರೆಯಲಾಗದು. ಈ ದೃಷ್ಟಿಯಿಂದ ಈ ಗ್ರಂಥದಲ್ಲಿ ದಾಸರು ತಮ್ಮ ಹಾಡುಗಳ ಮೂಲಕ ಕೊಟ್ಟಿರುವ ಉಪದೇಶವನ್ನು ನಮ್ಮ ಪಾಠ

ಕರು ಸ್ವೀಕರಿಸಿ ಅದರಂತೆ ತಮ್ಮ ಜೀವನವನ್ನು ಮಾರ್ಪಡಿಸಿಕೊಂಡರೆ ಈ ಗ್ರಂಥ ರಚನೆಯ ಸಾರ್ಥಕತೆಯು ಕೈಗೂಡಿದಂತಾಯಿತು.

ಕಾರ್ಕಳ,
ತಾ. 21—1—'38.

ದಕ್ಷಿಣ ಕನ್ನಡ ಜಿಲ್ಲಾ ಗ್ರಾಮೋದ್ಧಾರಕ ಸಂಘ.

ಅನುಕ್ರಮಣಿಕೆ.

1. ಈಶಸ್ತವನ.

ಪಿತಾಸಿ ಲೋಕಸ್ಯ ಚರಾಚರಸ್ಯ
ತ್ವಮಸ್ಯ ಪೂಜ್ಯಶ್ಚ ಗುರುರ್ಗರಿಯಾನ್
ನತ್ವತ್ಸಮೋಽಸ್ತ್ಯಭ್ಯಧಿಕೋಕುತೋನ್ಯೋ
ಲೋಕತ್ರಯೇಽ ಅಪ್ರತಿಮ ಪ್ರಭಾವಃ
ತಸ್ಮಾತ್ ಪ್ರಣಮ್ಯ ಪ್ರಣಿಧಾಯ ಕಾಯಮ್
ಪ್ರಸಾದಯೆತ್ವಾಮ್ ಅಹಮೀಶ ಮೀಡ್ಯಮ್
ಪಿತೇವ ಪುತ್ರಸ್ಯ ಸಖೇವ ಸಖ್ಯುಃ
ಪ್ರಿಯಃ ಪ್ರಿಯಾಯಾರ್ಹಸಿ ದೇವ ಸೋಢುಮ್.

ಗೀತಾ 11 ನೇ ಅಧ್ಯಾಯ 44 ನೇ ಶ್ಲೋಕ.

2. ಮಾತೃಭೂಮಿಸ್ತವನ.

॥ ರಾಗ—ಮೋಹನ ॥

ಆವಿನದು ನೊರೆವಾಲನೊಲ್ಲೆನು । ದೇವಲೋಕದ ಸುಧೆಯನೊಲ್ಲೆನು । ದೇವಿ ನಿನ್ನಯ ನಾಮದದ್ಭುತರುಚಿಯನರಿತಿಹೆನು ॥ ಪಾವನಳೆ ನಿನ್ನಂಘ್ರಿಕಮಲವ । ಸೇವಿಸಲು ದೊರೆತಿಹುದು ತಾಯೇ । ಶ್ರೀವರನ ಕೃಪೆಯಿಂದ ಮತ್ತಿನ್ನೇನು ಬೇಡೆನಗೆ ॥ ೧ ॥ ಬರಲಿ ಬ್ರಾಹ್ಮಣರಲ್ಲಿ ಜಲ್ಮವು । ಬರಲಿ ಮಾದಿಗರಲ್ಲಿ ಇಲ್ಲವೆ । ಇರದು ಚಿಂತೆಯು ತಾಯೆ ನಿನ್ನುದರದೊಳು ಜನಿಸುವುದೇ ॥ ೨ ॥ ಪರಮ ಭಾಗ್ಯವು ನೆಂಬುದರಿಯೆನೆ । ಮರೆಯದಲೆ ಪ್ರತಿಜನ್ಮದೊಳು ಶ್ರೀ । ಧರನು ದಯದಿಂದೆನಗೆ ನಿನ್ನೊಳು ಕೊಡಲಿ ಜನ್ಮವನೂ ॥ ೩ ॥ ಇರಲೆನಗೆ ಕರಕನ್ನವುಣ್ಣಲು । ಬರಿಯ ನೆಲವಿರಲೆನಗೆ ಮಲಗಲು । ಹರಕು ಬಟ್ಟೆಗಳೆನ್ನ ಮೈಯನು ಮುಚ್ಚಲಿರಲೆನಗೆ । ಮುರುಕು ಗುಡಿಸಲವಿರಲಿ ಚಾಟಗೆ । ಸಿರಿಯರಸ ಮತ್ತೇನು ಬೇಡೆನು । ಭರತಭೂಮಿಯೊಳಿರುವುದೇ ಎನಗೊಂದು ಸುಖವಿಹುದು ॥ ೪ ॥ ಧನವ ಬೇಡೆನು ನಿನಗೆ ನಾರಾಯಣನೆ । ಸನ್ಮಾನವನು ವಿದ್ವಜ್ಜನರ ಸಭೆಯೊಳು ಬೇಡೆನೈನಾ ಬೇಡೆ ಕೀರ್ತಿಯನು ॥ ಕನಸು ಮನಸಿನಲಿರಲಿ ಕರುಣಾಘನನೆ ಧ್ಯಾನವು ಜನ್ಮಭೂಮಿಯ । ತನುವು ಸವಿಯುತಲಿರಲಿ ಹಗಲಿರುಳವಳ ಸೇವೆಯಲೀ ॥ ೫ ॥

೩. ದೇಹಪರವಾದ ಹಾಡುಗಳು.

1. ತನುವ ನಂಬಲು ಬೇಡವೋ । ಓ ಜೀವವೇ । ತನುವ ನಂಬಲು ಬೇಡವೋ ॥ ಅನುವಾಗಿ ನಿನ್ನ ದಾಗಿ । ಕೆಲಕಾಲ ತೋರ್ಪುದು ॥ ಅನುವಿಲ್ಲ ದಾಗ ಈ ತನುವೇ ನಿನಗೆ ವೈರಿ ॥ ೧ ॥ ಜರೆಯು ಮರಣದಿಂದ ಭರಿತವಾ ಗಿಹ ಕಾಯಾ । ಸ್ಥಿರವೆಂದು ನಂಬಿನೀ ಮರುಳಾಗಬೇಡವೋ ॥ ೨ ॥ ಧನ ಧಾನ್ಯ ಪಶುಪತ್ನಿ । ತನ್ನದೆಂದು ತಿಳಿದು ನೀ ॥ ಮನುಮಥನೈಯನ ನೆನೆ ಯದೆ ಮನವೇ ॥ ೩ ॥ ಶರಣೆಂದವರಕ್ಕಾವ । ಗರುಡವಾಹನದೇವಾ । ಪುರಂದರ ವಿಠಲನ ಸ್ಮರಿಸದೆ ಮನವೇ ॥ ೪ ॥

॥ ರಾಗ ಶಂಕರಾಭರಣ ॥

2. ರಾಮರಾಮೆನ್ನಿರೋ ॥ ಇಂಥಾ ಸ್ವಾಮಿಯ ನಾಮವ ಮರೆಯ ದಿರೋ ॥ ತುಂಬಿದ ಪಟ್ಟಣಕ್ಕೊಂಭತ್ತು ಬಾಗಿಲು । ಸಂಭ್ರಮದರಸುಗಳೈದು ಮಂದಿ ॥ ಡಂಭಕತನದಿಂದ ಕಾಯುವ ಜೀವವ । ನಂಬಿನೆಚ್ಚಿನೀವು ಕೆಡಬೇ ಡಿರೋ ॥ ೧ ॥ ನೆಲೆಯು ಇಲ್ಲದ ಕಾಯಾ ಎಲುವಿನಹಂದರ । ಬಲಿದು ಸುತ್ತಿದ ಚರ್ಮದ ಹೊದಿಕೆಯು॥ ಮಲಮೂತ್ರಂಗಳು ಕೀವುಕ್ರಿಮಿಗಳುಳ್ಳ। ಬರಿಯ ತೊಗಲ ಮೆಚ್ಚಿ ಕೆಡಬೇಡಿರೋ ॥ ೨ ॥ ಹರಬ್ರಹ್ಮಸುರರಿಂದವಂದಿತ ನಾಗಿಪ್ಪ । ಹರಿಸರ್ವೋತ್ತಮನೆಂದೆನ್ನಿರೋ ॥ ಪುರಂದರ ವಿಠಲನ ಚರಣವ ಭಜಿಸಿರೋ । ದುರಿತ ಭಯಗಳೆಲ್ಲಾ ಪರಿಹಾರವು ॥ ೩ ॥

॥ ಪದ ॥

3. ಸಂದಿತಯ್ಯಾ। ಪ್ರಾಯವು। ಸಂದಿತಯ್ಯಾ ॥ ಪ ॥ ಒಂದು ದಿನವೂ ಸುಖವು ಕಾಣೆ। ಕುಂದಿಹೋದೆ ಕಷ್ಟದಿಂದ । ಬಂಧನವನು ಬಿಡಿಸು ಯೆನ್ನ। ತಂದೆ ನೀನೆ ರಕ್ಷಿಸಯ್ಯಾ ॥ ಅ. ಪ. ॥ ತಂದೆಯುದರದಿ ಮೂರು ತಿಂಗಳು। ಸಂದುಹೋಯಿತು ತಿಳಿಯದೇ ॥ ಬಂದೆನವಮಾಸದೊಳು ಗರ್ಭದಿ । ನಿಂದು ತಾಯಿಯ ಗರ್ಭದಿ ॥ ಕುಂದಿತಾಯುವು ಒಂದು ವರುಷಾ । ಇಂದಿರೇಶನೇ ಕೇಳು ದುಃಖವಾ ॥ ಬಂಧನದೊಳಗೆ ನಿಂದೆ ಅನುದಿನ । ಮುಂದೆ ಮೋಕ್ಷದ ಮಾರ್ಗ ಕಾಣದೇ ॥ ೧ ॥ ಕತ್ತಲೆಯೊಳಿರಲಾರೆ ಎನುತಲಿ। ಹೊತ್ತೆಹರಕೆಯ ನಿನ್ನೊಳೂ॥ ನಿತ್ಯದಲಿ ಮಲಮೂತ್ರ ಬಾಲ್ಯದಿ । ಹೊತ್ತು ಕಳೆದೆನು ಎನ್ನೊ

ಳೂ ॥ ಮತ್ತೆ ಹದಿನಾರನೆಯ ಪ್ರಾಯದಿ । ಉಕ್ಕಿ ನಡೆದೆನು ಧರೆಯೊಳು ॥ ಹತ್ತಿ ಸಂಸಾರದ ಮಾಯೆಗಾ। ಸಿಕ್ಕಿದೆನು ಭವ ಬಲೆಯೊಳು ॥ ೨ ॥ ಎಡೆಬಿಡದೆ ಅನುದಿನದಿ ಪಾಪದ । ಕಡಲೊಳಗೆ ನಾ ಬಿದ್ದೆನೂ ॥ ದಡವಕಾಣದೆ ದುಃಖ ದೊಳು ಬೆಂ । ದೊಡಲೊಳಗೆ ನಾ ನೊಂದೆನೂ ॥ ಬಿಡದೆ ನಿನ್ನಯ ಧ್ಯಾನ ವೆನಿಪಾ । ಹಡಗವೇರಿಸು ಎಂದೆನೂ || ದೃಢದಿ ನಿನ್ನಯ ಪಾದ ಸೇರಿಸೋ । ಒಡೆಯ ಪುರಂದರ ವಿಠಲ ಕಾಯೋ ॥ ೩ ॥

॥ ರಾಗ—ತೋಡಿ—ತ್ರಿಪುಟತಾಳ ॥

4. ಈ ಶರೀರದ ಭ್ರಾಂತಿ ಇನ್ಯಾಕೆ ಮನವೇ ॥ ಪ ॥ ವಾಸುದೇವನ ನೆನೆದು ಸುಖಿಯಾಗೋ ಘನವೇ ॥ ಅ.ಪ. ॥ ದಂತಗಳು ಸಡಲಿದವು। ಧಾತು ಗಳು ಕುಂದಿದವು । ಕಾಂತೆಯರು ಜರಿದು ವಾಕರಿಸುವರೋ ॥ ಚಿಂತೆಇನ್ಯಾ ತಕೆ । ಬಯಲಾದ ದೇಹಕ್ಕೆ । ಇಂತೆಂದು ತಿಳಿದು ಶ್ರೀಕಾಂತ ನೆನೆಮನವೇ ॥ ೧ ॥ ಕಾಲುಜವ ಗುಂದಿದವು । ಮೇಲೆ ಯೌವನ ಪೋಗಿ ಜರೆಯು ಬಂತು ॥ ಕಾಲಕರ್ಮಂಗಳು । ಸಂಧಿಸಿದ ಸಮಯದಿ । ಬಾಲತನದಾಶೆ ಇನ್ಯಾಕೆ ಮನವೇ ॥ ೨ ॥ ನೀರಬೊಬ್ಬುಳಿಯಂತೆ । ಸ್ಥಿರವೆಂದು ಈ ದೇಹ। ಧಾರುಣಿ ಧನಸ್ತ್ರೀಗೆ ಮರುಳಾಗಬೇಡ ॥ ನೀರಜನಾಭ ಶ್ರೀ । ಪುರಂದರ ವಿಠಲನ್ನ । ಸೇರಿ ಸುಖಿಸದೆ ಸುಮ್ಮನಿರಬೇಡ ಮನವೇ ॥ ೩ ॥

4. ಮನಸ್ಸಿನ ಕುರಿತಾಗಿ ಕೀರ್ತನೆಗಳು.

॥ ರಾಗ ಖಮಾಚು ॥

1. ಮನವೇ ಧ್ಯಾನಿಸು ಬೇಗನೇ ॥ ವನಜನಾಭನ ॥ ಮನವೇಧ್ಯಾನಿಸು ಬೇಗನೇ ॥ಪ॥ ಮನವೇ ಧ್ಯಾನಿಸು ಬೇಗ । ವನಜನಾಭನನೀಗ ॥ ಧನುಜಮ ರ್ಧನ ನಮ್ಮ ಹನುಮಂತ। ಗಾತಹರಿಯಾ ॥೧॥ ಹಲವು ಜನ್ಮವ ತೊಳಲೀ॥ ಸುಳಿಯುತ ಬಂದು ನೆಲೆಯರಿಯದೆ ಬಳಲೀ ॥ ಕಳವಳಿಸುತಾ । ತಿಳುವಿಕೆ ಯಿರ್ಪ ಮನುಜ । ಜಲುಮವಪೊಂದುತ ॥ ಜಲಜನಾಭನ ಪಾದನಳಿನಾವ

ಸ್ಮರಿಸದಿರಲೇ ॥ ೨ ॥ ಸತ್ತುಹುಟ್ಟುತ ಸಾಯುತಾ । ವ್ಯರ್ಥದಿ ಜಲ್ಮ ॥ ಸಾರ್ಥಕವಿಲ್ಲದೀರುತಾ । ಅತ್ಯಾಸೆಯುಳ್ಳ ॥ ಮತ್ತೆ ಧನವು ಸತಿಸುತರನ್ನು ತ್ಯಜಿಸುತ್ತ ॥ ಮೃತ್ಯುವಶವಾಗೆ ಬರ್ಪಕೀರ್ತಿಯು ಫಳಿಸದಿರುವೇ ॥ ೩ ॥ ವರುಷವು ನೂರಿಹವು ॥ ಪರಮಾಯುವು ಇರುಳುನಿದ್ರೆಯೊಳ್ ಅರ್ಧವೂ ॥ ಜರಿಗೆ ಬಾಲ್ಯದೊಳ್ ॥ ಪಿರಿದು ಕಷ್ಟಸುಖಂಗಳ್ ಜರೆಯೊಳ್ ವ್ಯಾದಿಯಿಂ ನೀನು ॥ ಕೊರಗುತ್ತಲಿರಲಾಗ ಪೊರೆವರನೀ ಕಾಣೆ ॥ ೪ ॥ ಧನಕೆಸಹೋದರರು ನಾಲ್ವರಿಹರು ಧರ್ಮಾಗ್ನಿ ನೃಪತಸ್ಕರರೂ । ಯನುತಿಹರಲ್ಲೀ ॥ ವಿನಯದೊಳೊಂದನೇ ತನಯನವಮಾನಕೆ ॥ ಘನಕೋಪವಾಳ್ವರು ಅನಲಾನೃಪತಸ್ಕರರೂ ॥ ೫ ॥ ಪರೋಪಕಾರವೆಂಬುದು ಧರೆಯೊಳಗತಿ । ಹಿರಿದೆಂದು ಶಾಸ್ತ್ರಪೇಳ್ವುದು ॥ ಅರಿತರೀತಿಗ ಚಲಿಸದೆ ದಿನಗಳ ನಿರುತವು ಕಳೆವುತ । ಸ್ಮರಿಸದೆಯುಲಹಂಕಪುರ ಆರಸನ ನೀ ಹೇ ॥ ಮನವೇ ಧ್ಯಾನಿಸು ಬೇಗನೇ ॥ ೬ ॥

॥ ಪದ ।

2. ಎಷ್ಟು ಹೇಳಲಿ ನಾನು । ಈ ಮನವಿಗಿನ್ನೆಷ್ಟು ಪೇಳಲಿ ನಾನು ॥ಪ॥ ಶ್ರೀಗುರುರಾಮನ ಧ್ಯಾನದೊಳಗೆ ನಿತ್ಯ । ಅನುದಿನವಿರು ನೀನೂ ॥ ಪ ॥ ಭಕ್ತಿಜ್ಞಾನ ವೈರಾಗ್ಯದ ಹಾದಿಯು ಎಂದಿಗೂ ಬಿಡಬೇಡಾ । ಈ ಕಾಮಕ್ರೋಧಮದಮತ್ಸರಕೆ ನೀನೆಚ್ಚಿಸಿ ಕೆಡಬೇಡಾ ॥ ೧ ॥ ನಂತರ ಸಂಗವಿಶ್ರವಣಮನನ ನಿಜಧ್ಯಾನವು ಕಳೆಯುವರೇ ॥ ಈ ಜನನಮರಣ ಭವಪಾಶದೊಳಗೆ ನೀ ವ್ಯರ್ಥ ಬೀಳುವರೇ ॥ ೨ ॥ ಈ ಪರಿಯಲಿ ಬೋಧಿಸಿ ತನುಮನಧನರಾಘವಗರ್ಪಿಸಿದಾ ॥ ನಿತ್ಯಾನಂದನಿರಾಮಯ ಸುಖದೊಳು ತಾನೇ ತಾನಾವಾ ॥ ೩ ॥

॥ ರಾಗ—ಆನಂದಭೈರವಿ ॥

3. ಮನವೆನ್ನ ಮಾತು ಕೇಳದು ಮಂದಜ್ಞಾನದೀ ॥ ತನುವಿನಾಶೆಯು ಬಿಡಲೊಲ್ಲದು ॥ ಪ ॥ ವನಜನಾಭನೆ ನಿನ್ನ ನಾಮದ ಸ್ಮರಣೆಯು ನೆನೆಯದೆ ಕಂಡ ಕಂಡ ಕಡೆಗೆ ಎಳೆಯುತಲಿದೆ ॥ ೧ ॥ ದೇಹಸಂಬಂಧಿಗರಾದವರೈವರು ॥ ಮೋಹಪಾಶದಿ ಕಟ್ಟಿ ಎಳೆಯುವರೈ ॥ ಕಾಯ ಅನಿತ್ಯವೆಂತೆಂಬದು ಅರಿಯದೆ ॥ ಮಾಯಪ್ರಪಂಚದಿಂದಲಿ ಬದ್ಧವಾಗಿದೆ ॥ ೨ ॥ ಸಾಧು

ಸಜ್ಜನರ ಸಂಗವ ಮಾಡಿ ಪರಗತಿ ॥ ಸಾಧನವನುಮಾಡಲೊಲ್ಲದು ॥ ಕ್ರೋಧಿಕುಹಕ ದುಷ್ಟರೊಡನಾಡಿ ಕಾಲನ ಬಾಧೆಗೆ ಗುರಿಯಾಗುವಂತೆ ಮಾಡುತಲಿದೆ ॥ ೩ ॥ ಮದಗಜವ್ಯೆಯಮರೆತು ಮುಂದುಗಾಣದೆ ಉದಧಿಯೊಳಗೆ ಬಿದ್ದಂತಾದೆನೋ ॥ ಹೃದಯಕಮಲದಲ್ಲಿ ನಿಂದು ರಕ್ಷಿಸೊ ಎನ್ನ ॥ ಪದುಮಾಕ್ಷವರದ ಶ್ರೀಪುರಂದರ ವಿಠಲಾ ॥ ೪ ॥

॥ ರಾಗ ಪಂತುವರಾಳಿ ರೂಪತಾಳ ॥

4. ಚಿಂತೆಯಾತಕೋ ॥ ಬಯಲ ಭ್ರಾಂತಿಯಾತಕೋ ॥ ಕಂತುಪಿತನ ದಿವ್ಯನಾಮ ಮಂತ್ರವನ್ನು ಜಪಿಸುವವಗೆ ॥ ಅ ಪ ॥ ಕಾಲ ಕಾಲದಲ್ಲಿ ಬಿಡದೆ ವೇಳೆಯರಿತು ಕೂಗುವಂಥ । ಕೋಳಿ ತನ್ನ ಮರಿಗೆ ಮೊಲೆಹಾಲು ಕೊಟ್ಟು ಸಲಹಿತೆ ॥ ೧ ॥ ಸಡಗರದ ನಾರಿಯರು । ಹಡಿಯುವಾಗ ಸೂಲಗಿತ್ತಿ ॥ ಅಡವಿಯೊಳಗೆ ಹೆರುವ ಮೃಗವ ॥ ಬಿಡದೆ ರಕ್ಷಿಸುವರ್ಯಾರು ॥ ೨ ॥ ಹೆತ್ತತಾಯಿ ಸತ್ತುಹೋಗಲು । ಕೆಟ್ಟೆನೆಂಬರು ಲೋಕಜನರು ॥ ಮತ್ತೆ ಗುರುಗುರಿಸೆ ತಾವು ॥ ಹತ್ತರಿದ್ದು ಸಲಹುವರೇ ॥ ೩ ॥ ಪುಟ್ಟಮಣ್ಣ ಶಿಶುವ ಮಾಡಿ ॥ ಹೊಟ್ಟೆಯೊಳಗೆ ಇರಿಸಲಿಲ್ಲ ॥ ಕೊಟ್ಟದೈವ ಕೊಂಡುಹೋದರೆ ಕುಟ್ಟಿಕೊಂಡು ಅಳುವೆಯಾಕೋ ॥ ೪ ॥ ಪರದಲ್ಲಿ ಪದವಿಯುಂಟು ॥ ಇಹದಲ್ಲಿ ಸೌಖ್ಯ ಉಂಟು ॥ ಗುರುಪುರಂದರ ವಿಠಲನ್ನ ಸ್ಮರಣೆಯನ್ನು ಮರೆಯದವಗೆ ॥ ೫ ॥

(ತಿರುಕನೋರ್ವನೂರ ಮುಂದೆ) ಎಂಬಂತೆ.

5. ಮರೆಯಬೇಡ ಮನವೆ ನೀನು ಹರಿಯ ಚರಣವಾ ॥ ಅರುಣಕಿರಣ ಚರಣಕರುಣ । ಪಾತಕಪಾವನ ಮರೆಯಬೇಡ ॥ ಪ ॥ ಸಾಧುಸಜ್ಜನಸಂಗವ ಮಾಡಿ ವೇದಶಾಸ್ತ್ರ ಓದುನೀ ॥ ಮೋದದಿಂದಲಿ ವೇದಗಮ್ಯನ ಪಾದಪಂಕಜ ಧ್ಯಾನಿಸೋ ॥ ೧ ॥ ಸತಿಯುಸುತರು ಗತಿಯುಯೆಂದು । ಮತಿಯು ಕೆಟ್ಟು ತಿರುಗಬೇಡಾ ॥ ಮತಿಯು ಕೆಟ್ಟುಹೋದ ಮೇಲೆ ॥ ಸತಿಯುಸುತರು ಬರುವರೇನು ॥ ೨ ॥ ಮಾನುಷಜನ್ಮ ದುರ್ಲಭವಿದು । ಮಾಧವನ ಕೃಪೆಯಿಂದ ಬಂದುದು॥ ಹೀನಜನರ ಕೂಡಿ ನೀನು। ಹಾನಿಮಾಡಿಕೊಳಲುಬೇಡಾ ॥ ೩ ॥ ಪಂಥಪಗಡೆಯಾಡಿ ನೀನು ವ್ಯರ್ಥಕಾಲ ಕಳೆಯಬೇಡಾ । ಅಂತಕನ ದೂತರಿಗೆ ॥ ಲೇಶಕರುಣವಿಲ್ಲವೈ ॥ ೪ ॥ ಯಾಗಯಜ್ಞ ಮಾಡಲೇಕೆ ಯೋಗಿಯ

ತಿಯು ಆಗಲೇಕೆ ನಾಗಶಯನನ ನಾರದವಂದ್ಯನ ಕೂಗಿ ಭಜನೆ ಮಾಡು ಬೇಗ ॥ ೫ ॥ ಗೋಪುರದ ಬೊಂಬೆಯಂತೆ ಗ್ರಾಮಗ್ರಹ ರಕ್ಷಿಪನೆಂದು ॥ ತಾಪಪಡುತ ಹಗಲು ಇರುಳು ತಾಮಸಜನರ ಕೂಡದೆ ॥ ೬ ॥ ಹರಿಯಸ್ಮರಣೆ ಮಾತ್ರದಿಂದ ಘೋರದುರಿತವೆಲ್ಲ ನಾಶ ॥ ವರದಪುರಂದರ ವಿಠಳನ ನಿರತ ಭಜನೆ ಮಾಡು ಬೇಗ ॥ ೭ ॥

(ನೀಮಾಯೆಯೊಳಗೊ) ಎಂಬಂತೆ

6. ಚಿತ್ತಶುದ್ಧಿ ಇಲ್ಲದ ಮನುಜಜ್ಞಾನಿಯೇ ‖ ಪಾಪಹೊತ್ತು ಕಳೆಯದಂಥ ನರಮನುಜನೇ ॥ ಅ.ಪ. ॥ ಬಂಧನದೊಳಿಹ ವ್ಯಾಘ್ರ ॥ ಅದು ಬಹು ತಪಸ್ವಿಯೇ । ಸಿಂಧುವಿನೊಳಿಹನೊರೆ ಸಿತ ಕಿರಣವೇ ॥ ಅಂಧಕನು ಕಣ್ಣುಮುಚ್ಚಲು ಯೋಗಸಾಧನವೇ ॥ ಮಂದಮತಿ ಸುಮ್ಮನಿರಲದುಮೌನವೇ ॥ ೧ । ಶ್ವಾನಬೂದಿಯೊಳಿರಲು ಶಿವಭಕ್ತನೆನಬಹುದೇ ॥ ಕಾನನದೊಳಿಹ ಕಾಗೆ ವನವಾಸಿಯೇ ॥ ಗಾಣ ತಿರುಗಲುಎತ್ತು ದೇಶಯಾತ್ರಿಯೆನಬಹುದೇ ॥ ಮೀನದಾಯಕ ಬಕನ ಸ್ಥಿತಿಧ್ಯಾನವೇ ॥ ೨ ॥ ತೋಳ ಆ ಶ್ರೀಪುರಂದರ ವಿಠಳನ್ನ ಪಾದವ ॥ ಪೊಂದಿನೀ ಸುಖಿಯಾಗು ಮನವೇ ॥ ೩ ॥

(ದಾಸನ ಮಾಡಿಕೊ ಎನ್ನ) ಎಂಬಂತೆ.

7. ಮನವ ಶೋಧಿಸಬೇಕು ನಿಚ್ಚಾ । ದಿನ ದಿನದಿ ಮಾಡುವ ಪಾಪ ಪುಣ್ಯದ ವೆಚ್ಚಾ ॥ ಪ ॥ ಧರ್ಮಅಧರ್ಮ ವಿಂಗಡಿಸಿ । ಅಧರ್ಮದ ನರಗಳ ಬೇರ ಕತ್ತರಿಸಿ ‖ ನಿರ್ಮಲಾಚರಣದಿ ಬೆರಸಿ‖ ವರಬೊಮ್ಮಮೂರುತಿ ಪಾದಕಮಲವ ಭಜಿಸಿ ॥ ೧ ॥ ಮನವಖಂಡಿಸಿ ಒಮ್ಮೆಮಾಣೋ ॥ ನಿನ್ನ ತನುವ ದಂಡಿಸಿ ಪರಮಾತ್ಮನ್ನ ಕಾಣೋ ॥ ಕೊನೆಗೆ ನಿನ್ನೊಳಗೆ ನೀ ಜಾಣೋ ॥ ಮುಕ್ತಿ ನಿನಗೆ ದೂರಿಲ್ಲವು॥ ಒಂದೇ ಗೇಣೋ ॥ ೨ ॥ ಆತನವರಿಗೆ ಕೇಡಿಲ್ಲಾ॥ ಅನಪಾತಕಪತಿತ ಸಂಗವ ಮಾಡ್ವನಲ್ಲಾ॥ ನೀತಿವಂತರು ಕೇಳಿರೆಲ್ಲಾ। ನಮ ಗಾತನೆ ಗತಿ ಈವ ಪುರಂದರ ವಿಠಲಾ ॥ ೩ ॥

8. ನಾಚಿಕೆಕೊಳಬೇಡ । ಮನದಲಿ । ಯೋಚಿಸಿ ಕೆಡಬೇಡ ॥ ನೀಚವೇನೊ ಅಚ್ಯುತನೋಲಗ । ಮೆಚ್ಚಿಕೊಟ್ಟದೆ ನಿನಘೆಚ್ಚಿನ ಪದವಿಯು ॥ ಹರಿ ಹರಿ ಎಂದೊವರೋ ॥ ಹತ್ತಿದ । ಪಾಪಗಳಿಗೆ ಬೆದರೋ ॥ ನೀರಜಾಕ್ಷನಿರ್ಜ

ರಪತಿ ಕೃಷ್ಣನ । ಭಾರಿ ಭಾರಿ ಭೋರಿಡುತಲಿ ಕುಣಿಯೋ ॥ ೧ ॥ ಯಾರ ಗೊಡವೆಯೇನೋ ॥ ನರಕದ । ಬಾಧೆ ತಪ್ಪುವದೇನೊ ॥ ಸಾರಿ ಸಾರಿ ಸರ್ವೇಶನ ನಾಮವ । ಸೇರಿ ಸೇರಿ ಕೈಮುಗಿದು ಕೊಂಡಾಡೋ ॥ ೨ ॥ ಭಕ್ತಜನರ ನೋಡೋ ॥ ಭವಭಯ । ಭಂಗಗಳೀಡ್ಯಾಡೊ ॥ ಮುಕ್ತಿದಾಯಕ ಶ್ರೀಪುರಂದರ ವಿಠಳನ ಭಕ್ತಿಯಿಂದಲಿ ಪಾಡುತೆ ಕುಣಿಯೊ ॥ ೩ ॥

9. ಕೊಡುವ ಕರ್ತುº । ಬೇರೇ । ಇರುತಿರೆ । ಬಿಡು ಬಿಡು ಚಿಂತೆಯನೂ ॥ ಒಡೆಯನಾಗಿ ಮೂಜಗವನು ಪಾಲಿಪ । ಬಡವರುದ್ಧಾರಕ ಭಕ್ತರೊಡೆಯ ಹರಿ ॥ ಪ ॥ ಕಲ್ಲಿನೊಳಗೆ ಇರುವ ಕಪ್ಪೆಗೆ । ಅಲ್ಲಿ ಉದಕಕೊಡುವ । ಎಲ್ಲ ಜೀವಜಾತಿಗಳನೆ ಕಾವ । ವಲ್ಲಭ ಶ್ರೀಹರಿ ಎಲ್ಲ ತುಂಬಿರುತಿರೆ ॥ ೧ ॥ ಆನೆಗೈದುಮಣದ ಆಹಾರಾವ ತಾನೆ ನಿತ್ಯದಿ ಈವ । ದೀನರೊಡೆಯ ಶ್ರೀನಿವಾಸ ದಯಾನಿಧಿ । ಮಾನದಿಂದ ಕಾವ ಭಾನುಕೋಟಿತೇಜ ॥ ೨ ॥ ಸರಸಿಜಾಕ್ಷ ತನ್ನ । ಸೇರಿದ ನರರ ಬಿಡನು ಘನ್ನ । ಪರಮ ದಯಾನಿಧಿ । ಭಕತರ ಸಲಹುವ । ಪುರಂದರ ವಿಠಲ । ಪುಷ್ಪಶರನ ಪಿತ ॥ ೩ ॥

॥ ರಾಗ—ಕಾಂಬೋಧಿ ಝಂಪೆತಾಳ ॥

10. ಈ ಸಿರಿಯನಂಬಿ ಹಿಗ್ಗಲು ಬ್ಯಾಡ ಮನವೇ ॥ ವಾಸುದೇವನ ಭಜಿಸೊ ವರಟು ಜೀವನವೇ ॥ ಪ ॥ ನೆಂಟರೂರಿಗೆ ಹೋಗಿ ನಾಲ್ಕು ದಿನವಿದ್ದರೆ । ಎಂಟು ದಿನದಾಯಾಸ ಆಟ್ಟಬಹುದೊ ॥ ಉಂಟು ಸೌಭಾಗ್ಯವೆಂತೆಂಬೊ ಧೈರ್ಯವ ಬಿಟ್ಟು ॥ ವೈಕುಂಠವಾಸಿಯ ಭಜಿಸೋ ಜೀವನವೇ ॥ ೧ ॥ ಮಡದಿಮಕ್ಕಳು ಯೆಂಬ ಮಾಯಸಂಸಾರಕ್ಕೆ ॥ ಸಡಗರವು ತಾನೊಂದು । ಭ್ರಮಿಸಲ್ಯಾಕೆ ॥ ಬಿಡದೆ ಯಮನಾಳುಗಳು ಬಾರೆಂದು ಎಳೆವಾಗ । ಮಡದಿ ಮಕ್ಕಳು ತೊಲಗುವರೋ ಮನವೇ ॥ ೨ ॥ ಇಷ್ಟಸಂಪತ್ತನ್ನು ಬಡವರಾಕರತಂದುಕೊಟ್ಟು ಮಾಡಿದ ಪುಣ್ಯಫಲತನ್ನದೋ ॥ ಸೃಷ್ಟಿಯೊಳು ಕಾಗಿನೆಲೆಯಾದಿ ಕೇಶವನಂಘ್ರಿಯ ಮುಟ್ಟಿಮನದಲಿ ಭಜಿಸೊ ಭ್ರಷ್ಟಜೀವನವೇ ॥ ೩ ॥

ರಾಗ—ಕಾಂಬೋಧಿ ಅಟತಾಳ.

11. ಮನವೇ ಮರುಳುಪದೇನೊ ಹರಿಯಾ । ಬಹು ॥ ಜನುಮಗಳಲಿ ಬಟ್ಟಭವಣೆಗಳರಿಯಾ ॥ ಪ ॥ ವಿಷಯಚಿಂತನೆ ಮಾಡಸಲ್ಲ ॥ ಮೋಷವೃ ॥

ಷಣನಾದನು ಪೌಲೋವಿುಯನಲ್ಲಾ ॥ ಝಷಕೇತುವಿನ ವ್ಯಾಳಹೊಲ್ಲಾ। ನೀರಾಸಿಯಾಗು ಯುಮರಾಯನೆಂದೆಂದು ಕೊಲ್ಲಾ ॥ ೧ ॥ ಧನವೆ ಜೀವನ ನಂಬಿ ನಿನಗೆ। ಸುಯೋ ॥ ಧನನೋಡು ಧನದಿಂದ ಏನಾದಕೊನೆಗೆ ॥ ಅನಿ ರುದ್ಧದೇವ ನಮನಿಗೆ । ಘೋಪ ॥ ಘನವಿಜ್ಞಾನವನೆ ಸಂಪಾದಿಸು ಕೊನೆಗೆ ॥ ೨ ॥ ಹಲವು ತೀರ್ಥಗಳಲಿ ಸ್ನಾನ। ಮಾಡಿ। ಮಲಪೋಯಿತಲ್ಲದೆ ನಿರ್ಮ ಲಜ್ಞಾನ। ಫಲಿಸದು ಎಂದಿಗೂ ಹೀನ। ಬುದ್ಧಿ ॥ ಕಳೆದು ಸೇವಿಸು ಸಾಧು ಗಳನನುದಿನಾ ॥ ೩ ॥ ಹರಿದಾಸನಾಗಿ ನೀ ಬಾಳು। ಗುರು ॥ ಹಿರಿಯರ ಪಾದಕೆ ನೀ ಬೀಳು ॥ ನರರನಿಂದಾ ಸ್ತುತಿತಾಳು। ದೇಹ। ಸ್ಥಿರವಲ್ಲ ಸಂ ಸಾರ ಬಲು ಹೇಯ ಕೇಳೂ ॥ ೪ ॥ ಜಿತವಾಗಿ ಕೇಳೋ ಈ ಸೊಲ್ಲ । ಹರಿ ಕಥೆಯಲ್ಲಿ ನಿರತನಾಗಿರು ಲೋಹಕಲ್ಲ ॥ ಪ್ರತಿಮೆ ಪೂಜಿಸದೆ ಇಲ್ಲಾ ಪರಿ ॥ ಕ್ಷಿತನೆಂಬೋರಾಯ ಈ ಮಹಿಮೆಯ ಬಲ್ಲಾ ॥ ೫ ॥ ಜ್ಞಾನೇಚ್ಛಕ್ರಿಯಾ ಶಕ್ತಿತ್ರಯವ। ಸ್ಮರಿಸು ॥ ಆನಂದಪಡು ಬಯಸದಿರು ಭಯವ ॥ ಸಾನುರಾ ಗದಿ ಬೇಡುದಯವಾ ॥ ನೀಮ ॥ ಧ್ಯಾನೆಯಂದದಿ ಸಂಚರಿಸು ಬಿಡು ಭಯ ವಾ ॥ ೬ ॥ ಭಾವಕ್ರಿಯಾದ್ರವ್ಯಾದ್ವೈತಾ ॥ ನೀನು ॥ ಆವಾಗ ಚಿಂತಿಸೋ ಭೂಮ್ಯಾದಿಭೂತಾ ॥ ಜೀವಂಗಳು ಜಗನ್ನಾಥ ವಿಠಲ ॥ ಗಾವಾಸವೆಂದು ನೀ ತಿಳಿಯೋ ಸತತಾ ॥ ೭ ॥

೮. ದೇವರ ನಾಮದ ಮಹಿಮೆ.

॥ ಪದ ॥

1. ಈಗ ಮಾಡೆಲೊ ರಾಮಧ್ಯಾನವಾ ॥ಪ॥ ನೀ ಮೂಕನಾಗಿರಬೇಡಾ ಎಲೊ ಮಾನವಾ ॥ಅ.ಪ.॥ ಕಾಲನದೂತರು ಕರಿವಾಗ । ನೀ ಕಾಲಗೆಟ್ಟು ಕಣ್ಣುಬಿಡುವಾಗ। ನಾಲಿಗೆ ಸೆಳಕೊಂಡು ಜ್ಞಾನಗೆಟ್ಟಿರುವಾಗ ನೀಲವರ್ಣನ ಧ್ಯಾನ ಬರುವದೇನಯ್ಯಾ ॥ ೧ ॥ ಸತಿಸುತರೆಂಬ ಸಂದಣಿಯೊಳು। ನೀ ಮತಿ ಭ್ರಷ್ಟನಾಗದೆ ಮನದೊಳು॥ ಸತತ ಶ್ರೀಲಕ್ಷ್ಮಿಯ ಪತಿಯನ್ನು ನೆನೆದರೆ। ಸದ್ಗ ತಿಯು ಸನ್ಮಾರ್ಗ ಪಾರಂಪಗ ವೀವನೈಯ್ಯಾ ॥ ೨ ॥ ಯಮದೂತರು

ಬಂದು ಎಳೆವಾಗ । ನೀ ನರಳುತ್ತ ಹೊತ್ತು ಕಳೆವಾಗ ॥ ಶ್ರೀಗುರುಪುರಂದರ ವಿಠಲನ್ನ ನಾಮವು ಕಾಲವಾಗೊ ಸಮಯಕೆ ಬರುವುದೇನಯ್ಯಾ ॥ ೩ ॥

॥ ಪದ ॥

2. ರಾಮನಾಮ ಭಜಿಸಿದವರಿಗುಂಟೇ ಭವದಬಂಧನಾ ॥ ಪ ॥ ಕಾಮ ಹರನ ಸತಿಯು ಸದಾ ನೇಮದಿಂದ ನೆನೆವ ಶ್ರೀ ॥ಅ.ಪ.॥ ಶಿವನು ಧನ್ಯನಾದ ಯುವತಿ। ಪಾರ್ವತಿ ಪಾವನೆಯಾದಳು ॥ ರವಿಯ ಸುತನು ವರವ ಪಡೆದಾ। ಧ್ರುವನು ದಿವಿಜನೆನಿಸಿದಾ ॥ ೧ ॥ ಕರಿವರ ಪ್ರಹ್ಲಾದದ್ರೌಪದಿ । ವರವಿಭೀಷಣ ಎಲ್ಲರೂ ॥ ಹರಿಯನಾಮ ಸ್ಮರಿಸಿ ಸುಖ । ಭರಿತರಾಗಲಿಲ್ಲವೇ ॥ ೨ ॥ ಗಿರಿಜೆರಾಮ ಮಂತ್ರದಿಂದ। ಪರಮ ಮಂಗಲೆಯಾದಳೋ॥ ವರದಗೋಪಾಲ ವಿಠಲ ॥ ದುರಿತಕಾನನ ಪಾವಕಾ ॥ ೩ ॥

3. ಬಂದದೆಲ್ಲಾಬರಲಿ ಗೋವಿಂದನ ದಯೆ ನಮಗಿರಲಿ ॥ಪ॥ ಮಂದರ ಧರ ಗೋವಿಂದ ಮುಕುಂದನ ಸಂದರುಶನ ಬಂದಿದ್ದರೆ ಸಾಲದೆ ॥ಅ.ಪ.॥ ಆರು ಅರಿಯದಿರಲೆನ್ನಾ । ಮುರಾರಿಯ ಒಳಗೆ ಪ್ರಸನ್ನಾ ॥ ಘೋರದುರಿತಭವನ್ನಾ। ಭಯಹಾರಿ ಗುಣಾಂಬುಧಿಘನ್ನಾ ॥ ಶ್ರೀರಮಣನ ಶ್ರೀಚರಣ ಸೇವಕರಿಗೆ । ಕ್ರೂರ ಯಮನು ಶರಣಾಗತನಲ್ಲದೆ ॥ ೧ ॥ ಅರಗಿನ ಮನೆಯೊಳಗಂದೂ । ಪಾಂಡವರನು ಕೊಲಬೇಕೆಂದೂ ॥ ಮರುಳಕೌರವ ಕಪಟದಿಂದಿರಲು ಆಕ್ಷಣ ದಿಂದಾ ॥ ಹರಿಕೃಪೆ ಅವರಲ್ಲಿದ್ದ ಕಾರಣ । ಬಂದದುರಿತ ಭಯವು ಬಯಲಾಯಿತಲ್ಲವೇ ॥ ೨ ॥ ಸಿಂಗನ ಹೆಗಲೇರಿ ಸಾರಿ । ಕರಿಭಂಗವ್ಯಾಕೆ ಮತ್ತವಗೆ ॥ ರಂಗನ ದಯೆ ಉಳ್ಳವಗೆ । ಭವಭಂಗದ ಜಯಕೆಯು ಹಂಗೆ ॥ ಮಂಗಳ ಮಹಿಮ ಶ್ರೀಪುರಂದರವಿಠಲ। ರಂಗನ ದಯಬಂದಿದ್ದರೆ ಸಾಲದೇ॥ ೩ ॥

(ಮೂರ್ತಿಮಂತ) ಎಂಬಂತೆ.

4. ರಾಮ ರಾಮ ರಾಮ ರಾಮ ಸೀತಾರಾಮ ಎನ್ನಿರೋ ॥ಪ॥ ಪ್ರೇಮದಿಂದ ಭಜಿಸಿ ಅವನ ಮುಕ್ತಿಯನ್ನು ಪಡೆಯಿರೋ ॥ ಅ.ಪ. । ಭರದಿ ಯಮನ ಭಟರು ಬಂದು। ಹೊರಡು ಎಂದು ಮೆಟ್ಟಿತುಳಿಯೆ॥ ಕೊರಳಿಗಾತ್ಮ ಸೇರುವಾಗ। ಹರಿಯ ಧ್ಯಾನ ವೊದಗದಯ್ಯ ॥ ೧ ॥ ಇಂದ್ರಿಯಂಗಳೆಲ್ಲ ಕೂಡಿ ಬಂದು ತನುವ ಮುಸುಕುವಾಗ ॥ ಸಿಂಧುಸುತೆಯ ಪತಿಯ ಧ್ಯಾನ । ಅಂದಿ

ಗೊದಗಿ ಬಾರದಯ್ಯಾ ॥ ೨ ॥ ಶ್ವಾಸಕಾಸ ಎರಡು ಕಂಠ । ದೇಶದಲ್ಲಿ ನಳಿತ ಬಳಲಿ ॥ ವಾಸುದೇವ ಕೃಷ್ಣ ಎಂದು । ಆ ಸಮಯಕೊದಗದಯ್ಯಾ ॥ ೩ ॥ ಶೃಂಗಾರದ ದೇಹವೆಲ್ಲ । ಅಂಗವುರಿದು ಬೀಳುವಾಗ ॥ ಕಂಗಳಿಗೆ ಕೈಸೇರುವಾಗ । ರಂಗನ ಧ್ಯಾನ ಒದಗದಯ್ಯಾ ॥ ೪ ॥ ಕೆಟ್ಟ ಜನ್ಮದಲ್ಲಿ ಹುಟ್ಟಿ । ದುಷ್ಟಕರ್ಮ ಮಾಡಿ ದೇಹ ॥ ಬಿಟ್ಟು ಹೋಗುವಾಗ ಪುರಂದರ ವಿಠಲನ್ನ ನೆನೆಯಿರೋ ॥ ೫ ॥

॥ ಲೋಕಭರಿತನೋ ಕೃಷ್ಣ ॥ ಎಂಬಂತೆ.

5. ಏನು ಧನ್ಯಳೋ ಲಕುಮಿ ಇನ್ನೆಷ್ಟು ಮಾನ್ಯಳೋ ॥ಪ॥ ಸಾನುರಾಗದಿಂದ ಹರಿಯು ತಾನೆ ಸೇವೆಮಾಡುತಿಹಳೊ ॥ಅ.ಪ.॥ ಕೋಟಿ ಕೋಟಿ ಭೃತ್ಯರಿರಲು। ಹಾಟಕಾಂಬರನ ಸೇವೆ॥ ಸಾಟಿ ಇಲ್ಲದೆ ಮಾಡಿಪೂರ್ಣ। ನೋಟದಿಂದ ಸುಖಿಸುತಿಹಳು ॥ ೧ ॥ ಛತ್ರ ಚಾಮರ ವ್ಯಜನ ಪರ್ಯಂಕ। ಪಾತ್ರ ರೂಪದಲ್ಲಿ ನಿಂತು॥ ಚಿತ್ರಚರಿತನಾದ ಹರಿಯು। ನಿತ್ಯಸೇವೆ ಮಾಡುತಿಹಳು ॥ ೨ ॥ ಸರ್ವತ್ರಾದಿ ವ್ಯಾಪ್ತನಾದ । ಸರ್ವದೋಷ ರಹಿತನಾದ ॥ ಸರ್ವಾದಿವಂದ್ಯ ಪುರಂದರ ವಿಠಲನ । ಸರ್ವಕಾಲದಿ ಸೇವಿಸುವಳು ॥ ೩ ॥

॥ ರಾಗ ಕಾನಡ ॥

6. ನೀನ್ಯಾಕೊ ನಿನ್ನ ಹಂಗ್ಯಾಕೊ ರಂಗಾ ॥ಪ॥ ನಿನ್ನ ನಾಮದ ಬಲ ಒಂದಿದ್ದರೆ ಸಾಕೋ ॥ಅ.ಪ.॥ ಕರಿಮಕರಿಗೆ ಸಿಕ್ಕಿ ಹರಿ ಮೊರೆ ಇಡಲಾಗ। ಆದಿಮೂಲನೆಂಬೊ ನಾಮವೇ ಕಾಯಿತೊ ॥ ೧ ॥ ಪ್ರಹ್ಲಾದನ ಪಿತ ಬಾಧಿಸುತಿರುವಾಗ । ನರಹರಿ ಎಂಬ ನಿನ್ನ ನಾಮವೇ ಕಾಯಿತು ॥ ೨ ॥ ಭಾರಿಯ ಸಭೆಯೊಳು ಸೀರೆಯ ಸೆಳೆವಾಗ । ಕೃಷ್ಣಾ ಕೃಷ್ಣಾ ಎಂಬ ನಾಮವೇ ಕಾಯಿತು ॥ ೩ ॥ ಯಮನ ದೂತರು ಬಂದು ಅಜಮಿಳನೆಳೆವಾಗ । ನಾರಾಯಣನೆಂಬ ನಾಮವೇ ಕಾಯಿತು ॥ ೪ ॥ ನಿನ್ನ ನಾಮಕೆ ಸರಿ ಕಾಣೆನು ಜಗದೊಳು । ಘನ್ನ ಮಹಿಮ ಶ್ರೀ ಪುರಂದರ ವಿಠಲಾ ॥ ೫ ॥

॥ ರಾಗ ಧನಾಸಿ ಆದಿತಾಳ ॥

7. ಕರ್ಮ ಬಂಧನ ಛೇದನಾ। ರಘುರಾಮನ ನಾಮ ನೀನೆನೆ ಮನವೇ ॥ ಪ ॥ ಮಂತ್ರವನರಿಯೆನು ತಂತ್ರವನರಿಯೆ ಜಗ । ದಂತ್ರವನರಿಯೆನೆಂತೆನಬೇಡ ॥ ತಂತ್ರಸ್ವತಂತ್ರನ ಪರಮಪವಿತ್ರನ । ಅಂತರಂಗದಿ ನೀನೆನೆ

ಮನವೆ ॥ ೧ ॥ ಜಪವನು ಅರಿಯೆನು ತಪವನಾನರಿಯೆನು । ಉಪದೇಶವ ರಿಯೆನೆಂತೆನಬೇಡ ॥ ಅಪರ ಮಹಿಮೆಯ ಉಡುಪಿಯ ಶ್ರೀಕೃಷ್ಣನ । ಉಪಾಯದಿಂದಲಿ ನೆನೆ ಮನವೇ ॥ ೨ ॥ ಅರ್ಚಿಸಲರಿಯೆನು ಪೂಜಿಸಲರಿಯೆನು । ಮೆಚ್ಚಿಸಲರಿಯೆನೆಂತೆನ ಬೇಡ ॥ ಅಚ್ಯುತಾನಂತ ಮುಕುಂದನ ನಾಮವ । ಸ್ವೆಚ್ಛದಿಂದಲಿದೀನೆನೆ ಮನವೇ ॥೩॥ ಧ್ಯಾನವನರಿಯೆನು ಮೌನವನರಿಯೆನು। ಜ್ಞಾನವನರಿಯೆನೆಂತೆನ ಬೇಡ॥ ಜಾನಕಿವಲ್ಲಭ ರಘುನಾಥನನುಸದಾ॥ ಧ್ಯಾನದಲಿಟ್ಟು ನೀನೆನೆ ಮನವೇ ॥೪॥ ವದನದಿ ನಾರಾಯಣನೆಂಬೊ ನಾಮವ ॥ ಮುದದಿ ಮಾತಿನಲಿ ಬಿಡಬೇಡ ॥ ಪದುಮನಾಭ ಶ್ರೀ ಪುರಂದರ ವಿಠಲನ ಸದಾಕಾಲದಿ ನೀನೆನೆ ಮನವೇ ॥ ೫ ॥

ರಾಗ ಆನಂದಭೈರವಿ ॥ ಆದಿತಾಳ ॥

8. ಯಾರು ಒಲಿದರೇನು ನಮಗಿನ್ಯಾರು ಮುನಿದರೇನು ॥ ಪ ॥ ಕ್ಷೀರ ಸಾಗರಶಾಯಿಯಾದವನ ॥ ಸೇರಿದಂಥ ಹರಿದಾಸರಿಗೆ ॥ ಅ ॥ ಪ ॥ ಊರ ನಾಳುವ ಧೊರೆಗಳ್ ನಮ್ಮನು ದೂರ ಅಟ್ಟಿದರೇನು ॥ ಘೋರಾರಣ್ಯದಿ ॥ ತಿರುಗುವ ಮೃಗಗಳು ಅಡ್ಡಕಟ್ಟಿದರೇನು ॥ ಮಾರಿಹಿಂಡು ಮತ್ತೆ ಮುಸುಕಿನ ದಂಡು ಮೈಗೆ ಮುಟ್ಟಿದರೇನು ॥ ವಾರಿಜನಾಭನ ವಸುದೇವಸುತನ ಸಾರುವಂಥ ॥ ಹರಿದಾಸರಿಗೆ ॥ ೧ ॥ ಪಡೆದ ತಾಯಿ ತಂದೆ ॥ ನಮ್ಮೊಳು ಅಹಿತವ ಮಾಡಿದರೇನು ॥ ಮಡದಿ ಮಕ್ಕಳು ಮನೆಯು ನೆಂಟರು ಮುನಿಸು ಗುಟ್ಟಿದರೇನು ॥ ಒಡನಾಡುವ ಗೆಳೆಯರು ನಮ್ಮೊಳು ವೈರವ ಬೆಳೆಸಿದರೇನು॥ ಕಡಲಶಯನ ಕರುಣಾನಿಧಿ ॥ ನಮ್ಮ ಒಡಲೊಳಗಿಹ ಹರಿದಾಸರಿಗೆ ॥ ೨ ॥ ಕಾನನದೊಳರಿದಾಡುವ ಸರ್ಪವು ಕಾಲಿಗೆ ಸುತ್ತಿದರೇನು ॥ ಜೇನಿನಂದದಿ ಕೀಟ ಕ್ರಿಮಿಗಳು ಚರ್ಮಕೆ ಮುತ್ತಿದರೇನು ॥ ಭಾನುನಂದನ ಬುಧ ಮಂಗಳರಾ ಬಲವು ತಪ್ಪಿದರೇನು ॥ ದೀನದಾತ ಶ್ರೀ ಪುರಂದರ ವಿಠಲನ ಧ್ಯಾನವುಳ್ಳ ಹರಿದಾಸರಿಗೆ ॥ ೩ ॥

ರಾಗ ॥ ಶಂಕರಾಭರಣ ॥ ರೂಪಕತಾಳ

9. ಹರಿಯ ನೆನೆಯಿರೋ । ನಮ್ಮ ಹರಿಯ ನೆನೆಯಿರೋ ॥ ಪ ॥ ಬರಿಯ ಮಾತನಾಡಿ ಬಾಯ ॥ ಬರಡುಮಾಡಿ ಕೆಡಲುಬೇಡ ॥ ಅ. ಪ. ॥ ನಿತ್ಯವಲ್ಲ ಈ ಶರೀರಾ । ನಿತ್ಯವೆಂದು ನೋಡಿರಯ್ಯ ॥ ಹೊತ್ತುಕಳೆಯ

ಬೇಡಿ ಕಾಲ ॥ ಮೃತ್ಯು ಬಾಹೋದೀಗಲೇ ॥ ೧ ॥ ಕಾಮ ಕ್ರೋಧಗಳನು ತೊರೆದು ಕಾಮನಯ್ಯನ ಕಥೆಯು ಬರದು ॥ ಪ್ರೇಮದಿಂದ ಭಜಿಸಿರಯ್ಯ ॥ ಪಾಮರನಂತೆ ತಿರುಗದೆ ॥ ೨ ॥ ಹಾಳು ಹರಟೆಯಾಡಿ ಮನವ ॥ ಬೀಳು ಮಾಡಿಕೊಳ್ಳಬೇಡಿ ॥ ಏಳು ದಿನದ ಕಥೆಯು ಕೇಳಿ ॥ ಏಳಿರೋ ವೈಕುಂಠಕೇ ॥ ೩ ॥ ಮೆಟ್ಟ ಪುಣ್ಯಕ್ಷೇತ್ರವನ್ನು ॥ ಸುಟ್ಟು ಹೋಗ್ವದಯ್ಯ ಪಾದ ॥ ಮುಟ್ಟ ಭಜಿಸಿರಯ್ಯ ॥ ಪುರಂದರ ವಿಠಲನ್ನ ಚರಣವ ॥ ೪ ॥

ರಾಗ ಪೂರ್ವಿ । ಅಟತಾಳ ||

10. ನಾ ನಿನ್ನ ಧ್ಯಾನದೊಳಿರಲು ಮಿಕ್ಕ । ಮಾನವರೇನು ಮಾಡುವರು ಗೋಪಾಲಾ ॥ ಪ ॥ ಮತ್ಸರಿಸಿದರೇನು ಮಾಡಲಾಪರು ಎನ್ನ । ಅಚ್ಯುತಾನಂತನ ಕೃಪೆಯಿರಲು ॥ ನಿಚ್ಚದೊಳಗೆ ನಿನ್ನ ನಾಮವ ಜಪಿಸಲು ॥ ಕಿಚ್ಚಿಗೆ ಇರುವೆ ಮುತ್ತುವದೆ ಹೇಳೆಲೋ ರಂಗಾ । ೧ ॥ ಧಾಳಿಲಿ ಕುದುರೆ ವೈಯಾರದಿ ತಿರುಗಲು । ಧೂಳುರವಿಗೆ ತಾ ಮುಸುಕುವದೆ । ತಾಳಿದವರಿಗೆ ವಿರುದ್ಧ ಲೋಕದೊಳುಂಟೆ । ಗಾಳಿಗೆ ಗಿರಿ ನಡುಗುವುದೆ ಪೇಳೆಲೊ ರಂಗ ॥ ೨ ॥ ಕನ್ನಡಿಯೊಳಗಣ ಗಂಟ ಕಂಡು ಕಳ್ಳ । ಕನ್ನವಿಕ್ಕಲವನವಶವಹುದೆ ॥ ನಿನ್ನನು ನಂಬಿದೆ ನೀ ಎನ್ನ ಸಲಹಯ್ಯ ॥ ಪನ್ನಗ ಶಯನ ಶ್ರೀ ಪುರಂದರ ವಿಠಲಾ ॥ ೩ ॥

6. ಪರಮಾತ್ಮನಲ್ಲಿ ಸಂಸಾರ ಬಂಧನ ವಿಮೋಚನೆ ಕುರಿತು ಪ್ರಾರ್ಥನೆ.

ರಾಗ ಧನಾಶಿ ॥ ಆದಿತಾಳ ।

1. ಹರನೇ ನಿನ್ನನು ವಲಿಸಲುಬಹುದು ॥ ನರರಿಗೊಲಿಸುವುದು ಬಹು ಕಷ್ಟ ॥ ಪ ॥ ಸರಿ ಬಂದಂತೆ ಆಡುವ ಜನರೊಳು । ಕಡೆತನಕಿರುವುದು ಬಹು ಕಷ್ಟ ॥ ಅ. ಪ. ॥ ಗುರುಹಿರಿಯರ ಸೇವೆಯೊಳಿದ್ದರೆ ಸಂ । ಸಾರಿಕ ನಿವನಲ್ಲೆಂಬುವರು ॥ ಸ್ಮರಣೆಗೆ ತಾರದೆ ಸುಮ್ಮನಿದ್ದರೆ । ಗರುವಿನಾತ

ನೆಂತೆಂಬುವರು ॥ ಹೊರಗೆ ಬಾರದೆ ಸರಸದೊಳಿದ್ದರೆ । ಮನೆಶೇರಕನೆಂತೆಂಬುವರು ॥ ಹೊರೆ ಮಾತಾಡಲು ಬ್ಯಾಬಡಿಕೆಂಬರು ॥ ಆಡದಿರಲು ಮೂಕನೆಂಬುವರು ॥ ೧॥ ಸತಿಯರ ಸಂಗಡ ಸೌಖ್ಯದೊಳಿದ್ದರೆ । ಸಲಿಗೆಕೊಟ್ಟಕೋತೆಂಬುವರು ॥ ಮತಿವಂತರಕೂಡಾಡ ಹೋದರೆ । ಮನೆಹಾಳಕನೆಂತೆಂಬುವರು ॥ ವೃತದಿ ನಾರಿಯರ ಸಂಗವ ಬಿಟ್ಟರೆ ನಪುಂಸಕನೆಂತೆಂಬುವರು ॥ ಅತಿವಿದ್ಯಾ ದಾರಿದ್ರನೆಂಬರು ॥ ಅರಿಯದಿರಲು ದಡ್ಡನೆಂಬುವರು ॥ ೨ ॥ ಮುಗುಳುನಗೆಯಲಿ ಮೋಹದೊಳಿದ್ದರೆ । ಮನಘಾತುಕನೆಂತೆಂಬುವರು ॥ ಸೊಗಸಿನಿಂದ ಕೈ ಹೊಡೆದು ನಕ್ಕರೆ । ಕಿಸಬಾಯಕನೆಂತೆಂಬುವರು ॥ ಒಗೆದ ವಸ್ತ್ರವನು ಶುದ್ಧದಿ ಹೊದೆಯಲು । ಸೂಳೆಗಾರನೆಂತೆಂಬುವರು ॥ ಮಿಗೆ ಮಾಸಿದರೇ ಹೇಸಿಕೆಂಬುವರು । ಹೊದೆಯದಿರಲು ಹುಚ್ಚನೆಂಬುವರು ॥ ೩ ॥ ಸುಮ್ಮನಿದ್ದರೆ ಸೇರರು ಜನರು । ಹಮ್ಮಿನಾತನೆಂತೆಂಬುವರು । ತಮ್ಮೊಳು ತಾವೇ ಖರೆಮಾತಾಡಲು ಹೆಮ್ಮಿಗಾರನೆಂತೆಂಬುವರು ॥ ಉಮ್ಮಯ ದಿಂಬಹಳನ್ನವನುಂಡರೆ। ಭೂತಪ್ರಾಣಿಯಂತೆಂಬುವರು॥ ಕಮ್ಮಿ ಉಂಡರೆ ಕಡು ಲೋಭಿ ಎಂಬರು । ಉಣ್ಣದಿರಲು ಸಣ್ಣೆಂಬುವರು ॥ ೪ ॥ ಕಡು ಹೆಮ್ಮಿದ್ದರೆ ಟೊಣ್ಣನೆಂಬುವರು ॥ ತೆಳುಪಿದ್ದರೆ ರೋಗೆಂಬುವರು । ಬಡತನ ಬಂದು ತಿರಿದುಂಡರೆ ಇವ । ಬದುಕ ಮಾಡಲಾರೆಂಬುವರು ॥ ದುಡಿದು ದುಡಿದು ಹಣವನು ಘಳಿಸಲು ಪರ ॥ ರೊಡವೆ ಸೇರಿತಿವಗೆಂಬುವರು । ಕಡೆಹಾಯದು ಮಹಾ ಕಠಿಣ ಪುರಂದರ ವಿಠಲನೆ ಕರುಣದಿ ಕಾಯೋ ಶ್ರೀ ಹರನೇ ॥ ೫ ॥

ರಾಗ ಬಿಲಹರಿ ॥ ಅಟತಾಳ ॥

2. ಕಾಯಬೇಕೆನ್ನ ಗೋಪಾಲಾ ॥ ಪ ॥ ಒಂದುಪಾಯವನರಿಯೆನು ಭಕ್ತರಪಾಲಾ ॥ಅ.ಪ.॥ ಹಲವು ಜಲ್ಮಗಳೆತ್ತಿ ಬಂದೇ। ಮಾಯಬಲವೆಂಬೊ ದರಿಯದೆ ಭವದೊಳು ನೊಂದೆ॥ ಒಲಿದು ಭಯವಾಯಿತು ಮುಂದೇ । ನೀನು ಸುಲಭನೆಂದು ಕೇಳಿ ಶರಣೆಂಬೆ ತಂದೇ ॥ ೧ ॥ ವಿತ್ತದೊಳಗೆ ಮನವಿಟ್ಟೊ। ನಿನ್ನ ಉತ್ತಮ ನಾಮದ ಸ್ಮರಣೆಯ ಬಿಟ್ಟೊ ॥ ಮತ್ತನಾಗಿ ಮನಗೆಟ್ಟು । ಇದ ಚಿತ್ತದೊಳಗೆ ತಿಳಿ ಬಲು ದಯವಿಟ್ಟು ॥ ೨ ॥ ಈ ರೀತಿ ಪಾಪಗಳೆಲ್ಲಾ । ಅನ್ಯ ನರರೇನು ಅರಿವರು ಯಮಧರ್ಮ ಬಲ್ಲಾ ॥ ನರಕಕ್ಕೆ ಒಳಗಾದೆನಲ್ಲಾ । ಸಿರಿವರ ನಾರಾಯಣ ಪುರಂದರ ವಿಠಲಾ ॥ ೩ ॥

॥ ಮೋಹನ ॥

3. ಕಾಯುಲಾರೆನು ಕೃಷ್ಣಾ ಕಂಡವರ ಬಾಗಿಲನು ॥ ನಾಯಿಕುನ್ನಿಗಳಂತೆ ಪರರ ಸೇವಿಸುತಾ ॥ ಪ ॥ ಉದಯದಲಿ ಎದ್ದು ಸಂಧ್ಯಾದಿ ವಿಧಿಗಳ ಬಿಟ್ಟು । ಪದುಮನಾಭನ ಸೇವೆಯನು ಮಾಡದೇ ॥ ಮೊದಲೆ ನಿನ್ನರ್ಚಿಸದೆ ನರರ ಸದನವ ಪೊಕ್ಕು । ಒದಗಿ ಸೇವೆಯ ಮಾಡಿ ಅವರ ಬಾಗಿಲನು ॥ ೧ ॥ ಕಲ್ಲು ಕರಗಿಸಬಹುದು । ಹುರಿಗಡಲೆಯೊಲು ಅದರ ತೈಲವನು ತೆಗೆದಾದರುಣಲುಬಹುದೂ ॥ ಒಲ್ಲಿದವರ ಮನಸು ಮೆಚ್ಚಿಸಲಾರೆ ಪ್ರತಿ । ಹಲ್ಲು ಕಿರಿ ಕಿರಿದು ಹಂಬಲಿಸಿ ಬ್ಯಾಬಿಡುತಾ ॥ ೨ ॥ ಇಂತು ನಾನಾ ಚಿಂತೆಯುಲಿ ನಿನ್ನ ನೆನೆಯದೆ । ಭ್ರಾಂತಿಯೆಂದೆಂಬ ಹೆಬ್ಬಲೆಗೆ ಸಿಲುಕಿ ॥ ಅಂತ್ಯವಾದಿಯ ಕಾಣೆ ಆರಿಕೆ ನಿನಗಿನಿತಿಲ್ಲ । ಚಿಂತೆಯನು ಬಿಡಿಸಯ್ಯ ಪುರಂದರ ವಿಠಲಾ ॥ ೩ ॥

॥ ಆನಂದ ಭೈರವಿ ॥

4. ನೀನೆ ದಯಾಳು ನಿರ್ಮಲಚಿತ್ತ ಗೋವಿಂದ । ನಿಗಮಗೋಚರ ಮುಕುಂದಾ ॥ ಪ ॥ ಜ್ಞಾನಿಗಳರಸ ನೀನಲ್ಲದೆ ಜಗದಲಿ । ಮಾನದಿಂದಲಿ ಕಾವ ದೊರೆಗಳ ನಾ ಕಾಣೇ ॥ ಅ ಪ ॥ ದಾನವಾಂತಕ ದೀನಜನ ಮಂದಾರನೆ । ಧ್ಯಾನಿಪರ ಮನದಿ ಆವಾಸನೇ ॥ ಮೌನನಾದೆನು ನಿನ್ನಾ ಧ್ಯಾನಾನಂದದಿ ಎನ್ನಾ । ಸಾನುರಾಗದಿ ಕಾಯೋ ಸನಕಾದಿವಂದ್ಯನೇ ॥ ೧ ॥ ಬಗೆಬಗೆಯಲಿ ನಿನ್ನ ಸ್ತುತಿಪೆನು ನಗಧರ । ಖಗಪತಿವಾಹನನೇ ॥ ಮಗುವಿನ ಮಾತಿದು । ನಗುತ ಕೇಳಿ ನೀನು । ಬೇಗದಿಂದಲಿ ಕಾಯೋ ಸಾಗರಶಯನನೇ ॥ ೨ ॥ ಮಂದರಧರ ಆರ । ವಿಂದಲೋಚನ ನಿನ್ನ । ಕಂದನೆಂಬೆಣಿಸೋ ಎನ್ನಾ ॥ ಸಂದೇಹವ್ಯಾಕಿನ್ನು ಸ್ವಾಮಿ ಮುಕುಂದನೇ । ಬಂದೆನ್ನ ಕಾಯೋ ಶ್ರೀ ಪುರಂದರ ವಿಠಲನೆ ॥ ೩ ॥

॥ ಮೇಲಿನ ಮಟ್ಟು ॥ ರಾಗ ॥ ಧನಾಶ್ರಿ ।

5. ತಪ್ಪುಗಳನೆಲ್ಲ ನೀ ಒಪ್ಪಿಕೊಳ್ಳೊ ನಮ್ಮಪ್ಪ ಕಾಯಬೇಕೋ । ತಿಮ್ಮಪ್ಪ ನೀನು ॥ಪ॥ ಸತಿಸುತರುಗಳಿಗೆ ಸಂಸಾರಬಲೆಗೆ । ಮತಿಹೀನನಾಗಿ ಸಿಕ್ಕಿ ಆಶೆಯಿಂದ । ಮಿತಿಗಾಣೆನಯ್ಯ ಎನ್ನ ಪಾಪಗಳಿಗೆ । ಮುಂದೆ ಗತಿಯಾವದು ಶ್ರೀಪತಿ ಪೇಳೋ ಎನಗೆ ॥ ೧ ॥ ಬಿಸಿಲು ಗಾಳಿ ಬಿರುಮಳೆ ಛಳಿ

ಯೊಳಗೆ । ದೆಸೆಗೆಟ್ಟು ದೇಶ ದೇಶವ ತಿರುಗಿದೆನೊ ॥ ಹಸಿವುತೃಷೆಗಳು ಬಹು ಬಾಧಿಸಲು । ಹುಸಿಯನಾಡಿದೆ ಹುಟ್ಟು ನಾ ಮೊದಲಾಗಿ ॥ ೨ ॥ ಸ್ನಾನ ಸಂಧ್ಯಾವಂದನನಾನರಿಯೆ ಅನ್ನ ಪಾನಂಗಳನು ಎಂದೆಂದು ಮರೆಯೆ ॥ ಹೀನ ಜನಂಗಳ ಸಂಘ ತೊರೆಯೆ ॥ ಸುಜ್ಞಾನಿಗಳ ಇತ್ತ ಬಾಯೆಂದು ಕರೆಯೆ ॥ ೩ ॥ ಗಂಗೆಯು ಗ್ರೋದಕಗಳಿಂದ ಶ್ರೀರಂಗಗೆ ಸ್ನಾನ ಮಾಡಿಸಲಿಲ್ಲ । ಹೊಂಗ್ಯಾದಿಗೆಯ ಎಸಳುಗಳಿಂದ । ಅಂಗವನರ್ಚಿಸಿದವ ನಾನಲ್ಲಾ ॥ ೪ ॥ ಗಂಧಾಕ್ಷತೆ ಇಟ್ಟು ಪುಷ್ಪಗಳಿಂದ ಒಂದು ದಳ ಶ್ರೀ ತುಳಸಿಯನು ॥ ಇಂದಿರೇಶಗೆ ನಾನರ್ಪಿಸದೆ । ಮಂದನಾಗಿ ಭವದಲಿ ತಿರುಗಿದೆನೋ ॥ ೫ ॥ ಧೂಪಾರತಿಯನು ಏಕಾರತಿಯ ನಾ । ನಾ ಪರಿವಿಧದೀ ಭಕುತಿಯಲೀ । ಗೋಪಾಲ ಕೃಷ್ಣಗೆ ನಾ ಅರ್ಪಿಸದೆ ॥ ಪಾಪಿಯಾಗಿ ಬಲು ತಿರುಗಿದೆನೋ ॥ ೬ ॥ ಸೋಪಸ್ಕಾರವ ಮಾಡಲಿಲ್ಲಾ ಒಂದು ದೀಪವಾದರೂ ನಾ ಹಚ್ಚಲಿಲ್ಲಾ । ಈ ಪರಿಯಿಂದಲಿ ದಿನಗಳ ಕಳದೆ ಆಪದ್ಬಾಂಧವ ಹರಿ ಕಾಯೋ ಎನ್ನ ॥ ೭ ॥ ಪಾಯಸಾದಿ ಪಂಚ ಭಕ್ಷ್ಯಗಳಿಂದ ಆಯುತವಾದ ಶಾಕಗಳಿಂದ ॥ ಕಾಯ ಮನಸು ವಾಕ್ಯಗಳಿಂದ ॥ ಶ್ರೀ ರಾಯ ಕೃಷ್ಣಗೆ ನಾ ಅರ್ಪಿಸಲಿಲ್ಲಾ ॥ ೮ ॥ ಅಷ್ಟ ಪಂಚ ಸಾಹಿತ್ಯದಿಂದಲೀ । ಶಿಷ್ಟವಾದ ಬಿಳಿ ಎಲೆಗಳಿಂದ । ಸೃಷ್ಟಿಗೊಡೆಯಗೆ ಅರ್ಪಿಸದೆ ಭ್ರಷ್ಟನಾಗಿ ನಾ ತಿರುಗಿದೆನೊ ॥ ೯ ॥ ಯಜ್ಞಾದಿಕ ಔಪಾಸಗಳನು ಸುಜ್ಞಾನದಿಂದಲಿ ಮಾಡಲಿಲ್ಲ । ಪ್ರಾಜ್ಞ ಜನರ ಕೂಡೆ ಒಡನಾಡದಲೇ । ಅಜ್ಞಾನದಿಂದಲಿ ನಾ ತಿರುಗಿದೆನೋ ॥ ೧೦ ॥ ಅತಿಥಿ ಅಭ್ಯಾಗತರ್ಬಂದರೆ ಮನೆಗೆ ಗತಿ ಇಲ್ಲವೆಂದು ಪುಸಿಯ ಪೇಳ್ವೆ ॥ ಯತಿಗಳ ನಿಂದಿಸಿ ಬೈದಿಹೆನೊ ಲಕ್ಷ್ಮೀಪತಿ ದೃಷ್ಟಿಲಿ ನೋಡಿ ದಯ ಮಾಡೋ ॥ ೧೧ ॥ ಕಾಮಾತುರನಾಗಿ ಕಂಡ ಕಂಡ ಕಡೆಗೆ ಗ್ರಾಮಸಿಂಹನಂತೆ ತಿರುಗಿದೆನೋ ॥ ಕಾಮಿನಿಯರಂಗ ಕಂಡು ಮೋಹಿಸುತ । ಸಾಮಜವರದ ನಿನ್ನ ಮರೆತೆನೋ ॥ ೧೨ ॥ ಮಂಗಳಾರತಿಯ ಮಾಡಲಿಲ್ಲಾ। ಜಯ ಮಂಗಳ ನೀನೆಂದು ಪಾಡಲಿಲ್ಲಾ ಕಂಗಳಿಂದ ನಾ ನೋಡಲಿಲ್ಲ । ಪಾಂಡುರಂಗ ಪೊರೆಯೆಂದು ಕರಿಯಲಿಲ್ಲಾ ॥ ೧೩ ॥ ಮಾತು ಮಾತಿಗೆ ನಿನ್ನ ಮರೆತು । ಪ್ರೀತಿಯಿಂದಲಿ ನಾ ದಿನಗಳೆದೇ ॥ ಘಾತುಕವಿದೆಂದು ತಿಳಿಯದೆಪೋದೆ॥ ಶ್ರೀ ತರುಣಿಪತಿ ನೀ ಕಾಯೋ ॥ ೧೪ ॥ ಹೇಳಲೆನ್ನವಗುಣಮಹಿಮೆ ಅಷ್ಟು ಇಷ್ಟು ಎಂತ ಎಣಿಕೆಯಿಲ್ಲ ದೃಷ್ಟಿಯಿಂದಲಿ ನೀ ದಯಮಾಡೋ ॥ ಸೃಷ್ಟಿಗೆ ಪತಿ ಶ್ರೀ ಪುರಂದರ ವಿಠಲಾ । ೧೫ ॥

6. ಹೇಗೆ ಮಾಡಬೇಕೋ ವಿಠಲ ತಂದೆ ಹೇಗೆ ಮಾಡಬೇಕೋ ॥ ಪ ॥ ಹೇಗಾದರು ದುರಿತಗಳೆನ್ನ ಕಾಡದ ಹಾಗೆ ಮಾಡಬೇಕೋ ॥ ೧ ॥ ಇಂದಿನ ನರಜನ್ಮವೋ ನಿನ್ನ ಕೃಪೆಯಿಂದ ದೊರಕಿತಲ್ಲೋ ॥ ಮುಂದೆನ್ನ ಜನನಿಯ ಗರ್ಭದಿ ಜನಿಸದ ಹಾಗೆ ಮಾಡಬೇಕೋ ॥ ೨ ॥ ನಿನ್ನನ್ನು ಬೇಡುವದೆ । ದುಷ್ಕರ್ಮದ ಹಾನಿ ಒಂದೇ ಸಾಲದೇ ॥ ಹೀನ ಮಾನವರಿಗೆ ನಾ ಕೈಜೋಡಿಸದ । ಹಾಂಗೆ ಮಾಡಬೇಕೋ ॥ ವಿಠಲತಂದೆ ॥ ೩ ॥ ಕರುಣಿಸೊ ಪುರಂದರ ವಿಠಳತಂದೆ ಮರೆಹೊಕ್ಕೆನು ಪೂರಾ । ಶರಣಾಗತ ವತ್ಸಲನೆಂಬೋ ಬಿರು ದುಳ್ಳಹಾಗೆ ಮಾಡಬೇಕೋ ॥ ೪ ॥

॥ ಪದ ॥

7. ಯಾರೂ ಬಿಟ್ಟರು ಕೈಯ ನೀ ಬಿಡದಿರು ಕಂಡ್ಯ ನಾರಾಯಣ ಸ್ವಾಮಿ ॥ ನೀ ಬಿಟ್ಟರೆ ಮುಂದಿನ್ಯಾರು ಕಾಯ್ವರ ಕಾಣೆ ನಾರಾಯಣ ಸ್ವಾಮಿ ॥ ೧ ॥ ಮುಂದೆ ನೋಡಿದರೆ ಹೆಬ್ಬಾವು ನುಂಗುತಲಿದೆ ನಾರಾಯಣ ಸ್ವಾಮಿ ॥ ಹಿಂದೆ ನೋಡಿದರೆ ಹೆಬ್ಬುಲಿ ಬ್ಯಾಬಿಡುತಿದೆ। ನಾರಾಯಣ ಸ್ವಾಮಿ ॥ ೨ ॥ ನಂಬಿ ನಾ ಪಿಡಿದರೆ ಕೊಂಬೆಲ್ಲಾ ಮುರಿದಾವು । ನಾರಾಯಣ ಸ್ವಾಮಿ ॥ ತುಂಬಿದ ಹೊಳೆಯಲ್ಲಿ ಹರಗೋಲ ಸೇರಿದೆ ನಾರಾಯಣ ಸ್ವಾಮಿ ॥ ೩ ॥ ಶಿಶುವವತಾರದಿ ಪಶುಗಳನೀ ಕಾಯ್ದೆ ನಾರಾಯಣ ಸ್ವಾಮಿ ॥ ದಶ ಅವತಾರದಿ ಚಕ್ರವ ತಾಳಿದೆ ನಾರಾಯಣ ಸ್ವಾಮಿ ॥ ೪ ॥ ವಿಷದಕಾಳಿಂಗನ ಮಡುವಧುಮುಕಿ ಬಂದೆ ನಾರಾಯಣ ಸ್ವಾಮಿ ॥ ವಸುಧೆಯೊಳಧಿಕ ಪುರಂದರ ವಿಠಲನೆ ನಾರಾಯಣ ಸ್ವಾಮಿ ॥ ೫ ॥

॥ ರಾಗ ॥

8. ಯಾರಿಗೆ ಮೊರುವೆನೊ ॥ ಗಿರಿಯರಾಯ ಯಾರೆನ್ನ ಸಲಹುವರು ಸಾರಿದ ಭಕ್ತಕಂಸಾರಿ ನಿನ್ನಯ ಪಾದವಾರಿಜವನು ತೋರಿ ಕಾರುಣ್ಯವೆನಗೀಯೋ ॥ ೧ ॥ ಕಷ್ಟಜನ್ಮದಿ ಬಂದೆನೊ । ಧಾರುಣಿಯೊಳು । ದುಃಷ್ಟರಿಂದಲಿ ನೊಂದೆನೊ । ನಿಷ್ಟುರಬೇಡವೊ ನಿನ್ನ ನಂಬಿದ ಮೇಲೆ ಸೃಷ್ಟಿಗೊಡೆಯನೆ-ಬಿಟ್ಟು ಕಳೆಯಬೇಡ ॥ ೨ ॥ ಹಿಂದೆಮಾಡಿದ ಕರ್ಮವೂ । ಈ ಭವದೋ ಮುಂದಾಗಿ ತೋರುತಿದೆ । ಇಂದಿಲ್ಲ ಗತಿಯದರಿಂದ ನೊಂದೆನು ನಾನ ನುಂದರಧರ ಗೋವಿಂದ ನೀನಲ್ಲದೆ ॥ ೩ ॥ ಹಗಲುಕತ್ತಲೆ ಸುತ್ತಿ

ಕಂಗೆಡಿಸುತ್ತ । ಹಗೆಯೊಳು ನಗಿಸುತ್ತಿದೇ । ಉಗುರಿನಸಿಗಿಗೆ ಮುಳ್ಳುಗಳೀಗ ನೆಟ್ಟವು । ಸೊಗಸು ಹಾರಿಸಿಯುದೆಥಿಗಿಲುಗೊಳಿಸುತಿದೆ ॥ ೪ ॥ ಬಾಡಿದ ಅರ ಳಿಯನೂ ಕಲ್ಲಿನ ಮೇಲೆ ಈಡಾಗಿನಾಟಿದರೆ ॥ ಬೇಡಿಕೊಂಡರೆ ತಳಿರನೂಡಿ ಬರುವುದುಂಟೆ। ರೂಢಿಗೊಡೆಯ ನೀನು ನೋಡದಿದ್ದ ಮೇಲೆ ॥ ೫ ॥ ಹಲವು ಪರಿಯು ಕಷ್ಟವಾ । ನಿನ್ನಯ ಪಾದಾಜಲಜದ ಕರುಣಾದಲೀ ಸುಲಿಗೆಗೊ ಟ್ಟೆನು ನಾನು ಸೂರೆಗಾರರಿಗೆಲ್ಲ । ವಲವಾಗು ಯೆನ್ನೊಳು ಪುರಂದರ ವಿ ಠಲಾ ॥ ೫ ॥

9. ತೇಲಿಸೋ ರಂಗಾ ಇಲ್ಲ ಮುಳುಗಿಸೋ ॥ ಪ ॥ ನಿನ್ನ ಕಾಲಿಗೆ ಬಿದ್ದೆನೊ ಪರಮ ದಯಾನಿಧೆ ॥ಪ॥ ಸತಿಸುತ ಧನದಾಶೆಯೆಂತೆಂಬೊ ಲೋ ಭಕ್ಕೆ । ಹಿತದಿಂದ ಆಶೆಗೊಂಡು ಬಡವಾದೆನೋ ॥ ಗತಿಕೊಡುವರ ಕಾಣೆ ಮತಿಯ ಪಾಲಿಸೊ ಲಕ್ಷ್ಮಿ । ಪತಿ ನಿನ್ನ ಚರಣದ ಸ್ಮರಣೆ ಸಾಕೆನಗೆ ॥ ೧ ॥ ಜರೆರೋಗ ದಾರಿದ್ರ ಕಶ್ಮಲವೆಂತೆಂಬೊ ಶರಧಿಯೊಳಗೆ ಬಿದ್ದು ಮುಳುಗಿ ದೆನೋ ॥ ಸ್ಥಿರವಿಲ್ಲ ದೇಹಕ್ಕೆ ನೆರೆನಂಬಿದೆ ನಾ ನಿನ್ನ ಕರುಣೋದಯವಿತ್ತು ಪಾಲಿಸೋ ಹರಿಯೇ॥ ದೋಷವುಳ್ಳವನಾನು ಭಾಷೆ ಪಾಲಿಪೆ ನೀನು। ಮೋಸ ಹೋದೆನು ನಾನು ಭಕ್ತರನವ ಬಿಟ್ಟ । ಶೇಷಶಯನ ಶ್ರೀ ಪುರಂದರ ವಿಠಲ ನಾ ದಾಸಸಂಗವಿತ್ತು ಪಾಲಿಸೋ ಹರಿಯೇ ॥ ೩ ॥

10. ನಾರಾಯಣ ನಿನ್ನ ನಾಮದ ಸ್ಮರಣೆಯ ಸಾರಾಮೃತವೆನ್ನ ಬಾ ಯಿಗೆ ಬರಲಿ ॥ ಪ ॥ ಆಡುವಾಗ ನಲಿದಾಡುವಾಗಲಿ । ನೋಡುತ ನಿಂದು ಮಾತಾಡುವಾಗಲಿ । ಕೇಡುತನದಿಂದ ಕೂಡಿ ಈ ಭವದೊಳು । ಮಾಡಿದ ಪಾಪವು ಓಡಿಹೋಗುವ ಹಾಗೆ ॥ ೧ ॥ ಉರಿ ಬಂದಾಗಲಿ ಛಳಿ ಬಂದಾಗಲಿ । ಗಡಗಡ ನಡುಗುತ್ತಿರುವಾಗಲಿ । ಹರಿ ನಾರಾಯಣ ದುರಿತ ನಿವಾರಣ ಇರು ಹಗಲು ನಿನ್ನ ಸ್ಮರಣೆ ಮಾಡುವಂತೆ ॥ ೨ ॥ ಕಷ್ಟವಾಗಿರಲಿ ಉತ್ಕೃಷ್ಟ ವಾಗಿರಲಿ । ಇಷ್ಟಾರ್ಥಗಳೆಲ್ಲಾ ಕೂಡಿರಲಿ । ಕೃಷ್ಣ ಕೃಷ್ಣ ಎಂಬ ಛೀಷ್ಟದ ನಾಮದ ॥ ಅಷ್ಟಾಕ್ಷರಿ ಮಂತ್ರ ಜಪಿಸುವ ಹಾಗೆ ॥ ಕನಸಿನೊಳಾಗಲಿ ಮನ ಫೊಳಾಗಲಿ। ಮನಸು ಕೆಟ್ಟಿರಲಿ ಮುನಿದಿರಲಿ । ಜನಕಜಾಪತಿ ನಿನ್ನ ನಾ ಮ ಸ್ಮರಣೆಯು ಮನಸಿನೊಳಗೆ ಒಮ್ಮೆ ನೆನೆಸುವ ಹಾಗೆ ॥ ೪ ॥ ಸಂತತ ಯು ಸಾಸಿರನಾಮವೆನ್ನ ಅಂತರಂಗದೊಳಗಿರುತಿರಲಿ ॥ ಸಂತತವರದ ಪುರಂದರ ವಿಠಲ ಎನ್ನಂತ್ಯಕಾಲದೊಳ್ ಒಮ್ಮೆ ನೆನಸುವ ಹಾಗೆ ॥ ೫ ॥

11. ದಾಸನ ಮಾಡಿಕೊ ಯೆನ್ನ। ಸ್ವಾಮಿ। ಸಾಸಿರನಾಮದ ವೆಂಕಟರ ಮಣ॥ ದುರ್ಬುದ್ಧಿಗಳನ್ನೆಲ್ಲಾ ಬಿಡಿಸೋ ॥ ನಿನ್ನ । ಕರುಣಕವಚವೆನ್ನ ಹರಣಕ್ಕೆ ತೊಡಿಸೊ ॥ ಚರಣಸೇವೆ ಎನಗೆ ಬಡಿಸೊ॥ ಅಭಯ। ಕರಪುಷ್ಪವನೆನ್ನ ಶಿರದಲ್ಲಿ ಮುಡಿಸೊ ॥ ೧ ॥ ದೃಡಭಕ್ತಿ ನಿನ್ನಲ್ಲಿ ಬೇಡಿ । ನಾ । ನಡಿಗೆರಗುವೆನಯ್ಯ ಅನುದಿನ ಪಾಡೀ ॥ ಕಡೆಗಣ್ಣಿಲೇಕೆನ್ನ ನೋಡಿ । ಬಿಡುವೆ । ಕೊಡು ನಿನ್ನ ಧ್ಯಾನವ ಮನಶುಚಿಮಾಡೀ ॥ ೨ ॥ ಮರೆಹೊಕ್ಕವರ ಕಾವಬಿರಿದೂ । ಎನ್ನ ಮರೆಯದೆ ರಕ್ಷಣೆ ಮಾಡಯ್ಯ ಪೊರೆದೂ ॥ ದುರಿತಗಳೆಲ್ಲವತರಿದೂ ಸಿರಿಪುರಂದರ ವಿಠಲ ಎನ್ನನು ಪೊರೆದೂ ॥ ೩ ॥

12. ಇಂದೂ ನಿನ್ನ ಮರೆಯ ಹೊಕ್ಕೆ ವೆಂಕಟೇಶನೇ ॥ ಎಂದಿಗಾದರೆನ್ನ ಕಾಯೊ । ಶ್ರೀನಿವಾಸನೇ ॥ ಅ ॥ ಶೇಷಗಿರಿಯ ವಾಸ ಶ್ರೀಶದೋಶರಹಿತನೇ। ಏಸೂದಿನಕೂ ನಿನ್ನ ಪಾದದಾಸನು ನಾನೇ ॥ ಕ್ಲೇಶಗೈಸದಿರು ಎನ್ನ ಸ್ವಾಮಿಯು ನೀನೇ ॥ ೧ ॥ ಕಮಲನಯನ ಕಾಮಜನಕ ಕರುಣವಾರಿಧೇ । ರಮೆಯ ನಾಳ್ವ ಕಮಲನಾಭ ಹೇ ದಯಾನಿಧೇ । ಯಮನಪುರದಿ ಶಿಕ್ಷಿಸದಿರು ಪಾರ್ಥ ಸಾರಥೆ ॥ ೨ ॥ ಉರಗಶಯನಸುರರಿಗೊಡೆಯ । ಸಿರಿಯ ರಮಣನೆ । ಶರಣ ಪಾಲ ಬಿರಿದು ತೋರಿ ಪೊರೆವದೇವನೇ ॥ ಕರುಣಿಸೆನಗೆ ಮುಕ್ತಿಯನ್ನು ಪುರಂದರ ವಿಠಲನೆ ॥ ೩ ॥

13. ನಾನೇನ ಮಾಡಿದೆನೊ । ಕೃಷ್ಣಯ್ಯ । ನೀನೆನ್ನ ಸಲಹಬೇಕೊ ॥ ಪ ॥ ಕರಿರಾಜ ತರಿಸಿದನೆ ॥ ದ್ರೌಪದಿದೇವಿ । ಬರದೋಲೆ ಕಳುಹಿದಳೇ ॥ ಹರುಷದಿಂದಲಿ ಋಷಿಪತ್ನಿಯ ಶಾಪವ । ಪರಿಹರಿಸಿದೆಯಲ್ಲೇ ಹೇ ಸ್ವಾಮಿ ॥ ೧ ॥ ರಕ್ಕಸತನುಜನಲ್ಲೇ । ಪ್ರಹ್ಲಾದ ಚಿಕ್ಕಪ್ರಾಯದ ಧ್ರುವನೂ॥ ಸಿಕ್ಕಿದ ಪಾಪ ಮಾಡಿದ ಅಜಾಮಿಳನಿನ್ನಕ್ಕರೆ ಮಗನೇ ಪೇಳೂ ಹೇ ಸ್ವಾಮಿ ॥ ೨ ॥ ಒಪ್ಪಿಡಿ ಅವಲಕ್ಕಿಯನಾ । ಕೃಷ್ಣಯ್ಯ ನಿನಗೊಪ್ಪಿಸಿದವಗೊಲಿದೇ ॥ ಒಪ್ಪೇನು ನಿನಗೆ ಶ್ರೀ ಪುರಂದರ ವಿಠಲನರಪ್ಪಂತೆ ಕಾಯಬೇಕೂ ಹೇ ಸ್ವಾಮಿ ॥ ೩ ॥

ರಾಗ—ಹರಿಕಲ್ಯಾಣಿ ಆದಿತಾಳ.

14 ಈಶ ನಿನ್ನ ಚರಣ ಭಜನೆ । ಆಸೆಯಿಂದ ಮಾಡುವೆನು ॥ ದೋಷ ರಾಶಿ ನಾಶ ಮಾಡು ॥ ಶ್ರೀಶ ಕೇಶವಾ ॥ ಪ ॥ ಶರಣು ಹೊಕ್ಕೆನಯ್ಯ। ಎನ್ನ।

ಮರಣ ಸಮಯದಲ್ಲಿ ನಿನ್ನ। ಚರಣಸ್ಮರಣೆ ಕರುಣಿಸಯ್ಯ ನಾರಾಯಣಾ ॥ ೧ ॥ ಶೋಧಿಸೆನ್ನ ಭವದ ಕಲುಷ । ಬೋಧಿಸಯ್ಯ ಜ್ಞಾನ ಎನಗೆ ॥ ಬಾಧಿಸುವ ಯಮನ ಬಾಧೆ ॥ ಬಿಡಿಸು ಮಾಧವಾ ॥ ೨ ॥ ಹಿಂದನೇಕಯೋನಿಗಳಲಿ । ಬಂದು ಬಂದುನೊಂದೆ ನಾನು ॥ ಇಂದು ಭವದ ಬಂಧ ಬಿಡಿಸು ತಂದೆ ಗೋವಿಂದಾ ॥ ೩ ॥ ಭ್ರಷ್ಟನೆನಿಸ ಬ್ಯಾಡ ಕೃಷ್ಣ । ಇಷ್ಟಮಾತ್ರ ಬೇಡಿಕೊಂಬೆ ॥ ಶಿಷ್ಟರೊಡನೆ ಇಟ್ಟು ಕಷ್ಟ ಬಿಡಿಸು ವಿಷ್ಣುವೇ ॥ ೪ ॥ ಮೊದಲು ನಿನ್ನ ಪಾದಪೂಜೆ ॥ ಮುದದಿ ಮಾಡುವೇನು ನಾನು ॥ ಹೃದಯದೊಳಗೆ ಒದಗಿಸಯ್ಯ ॥ ಮಧುಸೂದನಾ ॥ ೫ ॥ ಕವಿದುಕೊಂಡು ಇಹುವಪಾಪ। ಸವೆದು ಪೋಗುವಂತೆ ಮಾಡಿ ಜವನ ಬಾಧೆಯನ್ನು ಬಿಡಿಸೊ ತ್ರಿವಿಕ್ರಮಾ ॥ ೬ ॥ ಕಾಮಜನಕ ನಿನ್ನ ನಾಮ । ಪ್ರೇಮದಿಂದ ಪಾಡುವಂಥ । ನೇಮ ಎನಗೆ ಪಾಲಿಸಯ್ಯಾ ಸ್ವಾಮಿ ವಾಮನಾ ॥ ೭ ॥ ಮದನನಯ್ಯ ನಿನ್ನ ಮಹಿಮೆ । ವದನದಲ್ಲಿ ಇರುವಂತೆ । ಹೃದಯದಲ್ಲಿ ಸದನಮಾಡು ॥ ಮುದದಿ ಶ್ರೀಧರಾ ॥ ೮ ॥ ಹುಸಿಯನಾಡಿ ಹೊಟ್ಟೆಹೊರೆವ । ವಿಶಯದಲ್ಲಿ ರಸಿಕನೆಂದು ಹುಸಿಗೆ ಹಾಕದಿರಯ್ಯ ॥ ಹೃಷಿಕೇಶನೇ ॥ ೯ ॥ ಬಿದ್ದು ಭವದನೇಕ ಜನುಮ। ಬದ್ಧನಾಗಿ ಕಲುಷದಿಂದ । ಗೆದ್ದು ಪೋಪ ಬುದ್ಧಿ ತೋರೊ । ಪದ್ಮನಾಭನೆ ॥ ೧೦ ॥ ಕಾಮಕ್ರೋಧ ಬಿಡಿಸಿ ನಿನ್ನ ನಾಮ ಜಿಹ್ವೆಯೊಳಗೆ ನುಡಿಸು ॥ ಶ್ರೀಮಹಾನುಭಾವನಾದ ॥ ದಾಮೋದರಾ ॥ ೧೧ ॥ ಪಂಕಜಾಕ್ಷ ನೀನು ಎನ್ನ। ಮಂಕುಬುದ್ಧಿ ಬಿಡಿಸಿ ನಿನ್ನ ಕಿಂಕರನ್ನ ಮಾಡಿಕೊಳ್ಳೊ ಸಂಕರುಷಣಾ ॥ ೧೨ ॥ ಏಸು ಜನ್ಮ ಬಂದರೇನು । ದಾಸನಲ್ಲವೇನೋ ನಾನು । ಘಾಸಿಮಾಡದಿರು ಎನ್ನ ॥ ವಾಸುದೇವನೇ ॥ ೧೩ ॥ ಬುದ್ಧಿಶೂನ್ಯನಾಗಿ ಎನ್ನಾ। ಪದ್ಧಕಾರ್ಯಕುಹಕ ಮನವ ॥ ತಿದ್ದಿ ಹೃದಯ ಶುದ್ದಿಮಾಡೊ । ಪ್ರದ್ಯುಮ್ನನೇ ॥ ೧೪ ॥ ಜನನಿಜನಕ ನೀನೆ ಎಂದು ॥ ಎನುವೆನಯ್ಯ ದೀನಬಂಧು ॥ ಎನಗೆ ಮುಕ್ತಿಪಾಲಿಸಿಂದು ಅನಿರುದ್ಧನೇ ॥ ೧೫ ॥ ಹರುಷದಿಂದ ನಿನ್ನನಾಮ ಸ್ಮರಿಸುವಂತೆ ಮಾಡು ಪ್ರೇಮ । ಇರಿಸು ಚರಣದಲ್ಲಿ ಕ್ಷೇಮ ॥ ಪುರುಷೋತ್ತಮಾ ॥ ೧೬ ॥ ಸಾಧುಸಂಗ ಕೊಟ್ಟು ನಿನ್ನ । ಪಾದ ಭಜನೆ ಇತ್ತು ಎನ್ನ॥ ಭೇದ ಮಾಡಿ ನೋಡದಿರು ॥ ಅಧೋಕ್ಷಜಾ ॥ ೧೭ ॥ ಚಾರುಚರಣ ತೋರಿ ಎನಗೆ । ಪಾರಗಾಣಿಸಯ್ಯ ॥ ಕೊನೆಗೆ । ಭಾರ ಹಾಕಿರುವೆ ನಿನಗೆ । ನಾರಸಿಂಹನೇ ॥ ೧೮ ॥ ಸಂಚಿತಾರ್ಥ ಪಾಪಗಳು । ಕಿಂಚಿತಾದ ಪೀಡೆಗಳು ॥ ಮುಂಚಿತಾಗಿ ಕಳೆದು ಪೊರೆಯೋ ॥ ಸ್ವಾಮಿ ಅಚ್ಯುತಾ ॥ ೧೯ ॥ ಜ್ಞಾನಭಕ್ತಿ

ಕೊಟ್ಟು ನಿನ್ನ ಧ್ಯಾನದಲ್ಲಿ ॥ ಇಟ್ಟು ಸದಾ । ಹೀನಬುದ್ಧಿ ಬಿಡಿಸು ಮುನ್ನ । ಜನಾರ್ಧನಾ ॥ ೨೦ ॥ ಜಪತಪಾನುಷ್ಟಾನವಿಲ್ಲದೆ । ಕುಪಥಗಾಮಿಯಾದ ಎನ್ನ ಕೃಪೆಯ ಮಾಡಿ ಕ್ಷಮಿಸಬೇಕು । ಉಪೇಂದ್ರನೇ ॥ ೨೧ ॥ ಮೊರೆಯ ಇಡುವೆನಯ್ಯ ನಿನಗೆ । ಶರಧಿಶಯನ ಶುಭಮತಿಯು ॥ ಇರಿಸೊ ಭಕ್ತನೆಂದು ಪರಮ ॥ ಪುರುಷ ಶ್ರೀಹರೇ ॥ ೨೨ ॥ ಪುಟ್ಟಿಸಲು ಬ್ಯಾಡ ಇನ್ನು ॥ ಪುಟ್ಟಿಸಿ ದಕ್ಕೆ ಪಾಲಿಸಿನ್ನು ॥ ಇಷ್ಟು ಬೇಡಿಕೊಂಬೆ ನಾನು ॥ ಶ್ರೀ ಕೃಷ್ಣನೇ ॥ ೨೩ ॥ ಸತ್ಯವಾದ ನಾಮಗಳನು । ನಿತ್ಯದಲ್ಲಿ ಪಠಿಸುವರಿಗೆ । ಅರ್ತಿಯಿಂದ ಸಲ ಹುವ ॥ ಕರ್ತು ಕೇಶವಾ || ೨೪ || ಮರೆಯದಲೆ ಹರಿಯ ನಾಮ । ಬರೆದು ಓದಿ ಕೇಳುವರ್ಗೆ ॥ ಕರದು ಮುಕ್ತಿಕೊಡುವನೆಲೆ ಯಾದಿ ಕೇಶವಾ॥ ೨೫ ॥

ರಾಗ—ಕೇದಾರಗೌಳ ತ್ರಿಪುಟ ತಾಳ.

15. ನಿನಗ್ಯಾರು ಸರಿಯಿಲ್ಲ ॥ ಎನಗನ್ಯರು ಗತಿಯಿಲ್ಲ ॥ ನಿನಗೂ ನನಗೂ ನ್ಯಾಯ ಹೇಳುವರಿಲ್ಲೋ ॥ ಪ ॥ ಒಂದೇ ಗೂಡಿನಲ್ಲಿದ್ದು । ಒಂದು ಕ್ಷಣವಗಲದೇ । ಎಂದೆಂದು ನಿನ್ನನ್ನು ಪೊಂದಿರುವೇ॥ ಬಂಧ ವಿಷಯಗಳಿಗೆನ್ನ ನೊಪ್ಪಿಸುವದು ॥ ಇಂದು ನಿನಗೆ ಇದು ಉಚಿತವಲ್ಲವೊ ದೇವಾ ॥ ೧ ॥ ಪರಸತಿಗಳು ಕಲು ಪರಮ ಪಾಪಿಷ್ಟನೆಂದೂ । ಪರಿ ಪರಿ ನರಕಕ್ಕೆ ನೇಮಿಸು ವೀ ॥ ಪರಸತಿಯರೊಲುಮೆ । ನಿನಗೆ ಒಪ್ಪಿತೊ ದೇವಾ । ದೊರೆತನಕ್ಕಂಜಿ ನಾಶರಣೆಂಬೆನಲ್ಲದೇ ॥ ೨ ॥ ನಿನ್ನ ಜ್ಞಾನವನು ನಾ। ನಿನ್ನ ಪ್ರೇರಣೆಯಿಂದ। ಅನಂತಕರ್ಮವ ನಾ ಮಾಡಿದೇ ॥ ಇನ್ನಾದರೂ ಎನ್ನ। ದಯದಿಂದ ನೋಡಯ್ಯ । ಪನ್ನಗಶಯನನೆ ಪುರಂದರ ವಿಠಲ ಕೃಷ್ಣಾ ॥ ೩ ॥

ರಾಗ—ಮುಖಾರಿ ಏಕತಾಳ.

16. ತೊರೆದು ಜೀವಿಸಬಹುದೆ ಹರಿ ನಿನ್ನ ಚರಣವ । ಬರಿದೆ ಮಾತ್ಯಾಕಿನ್ನು ಅರಿತು ಪೇಳುವೆನಯ್ಯ ॥ ಪ ॥ ಕರಪಿಡಿದೆನ್ನನು ಕಾಯೋ ಕರುಣಾನಿಧೇ ॥ ಅ.ಪ. ॥ ತಂದೆತಾಯಿಯ ಬಿಟ್ಟು ತಪವು ಮಾಡಲು ಬಹುದು। ದಾಯಾದಿ ಬಂಧುಗಳ ಬಿಡಲುಬಹುದು ॥ ರಾಯ ಮುನಿದರೆ ರಾಜ್ಯವ ಬಿಡಬಹುದು । ಕಾಯಜ ಪಿತ ನಿನ್ನಡಿಯ ಬಿಡಲಾಗದು ॥ ೧ ॥ ಒಡಲುಹಸಿದರೆ ಅನ್ನವ ಬಿಡಬಹುದು । ಪಡೆದ ಕ್ಷೇತ್ರವ ಬಿಟ್ಟುಹೊರಡಲುಬಹುದು॥ ಮಡದಿ ಮಕ್ಕಳು ಕಡೆಗೆ। ತೊಲಗಿಸಿಬಿಡಬಹುದು। ಕಡಲೊಡೆಯ ನಿಮ್ಮಡಿ

ಯ ಘಳಿಗೆ ಬಿಡಲಾಗದು॥ ೨ ॥ ಪ್ರಾಣವಪರರಿಗೆ ಬೇಡಿದರೆ ಕೊಡಬಹುದು। ಮಾನಾಭಿಮಾನವ ತಗ್ಗಿಸಬಹುದು । ಪ್ರಾಣದಾಯಕನಾದ ಆದಿಕೇಶವರಾಯ । ಜಾಣ ಶ್ರೀಕೃಷ್ಣ ॥ ನಿಮ್ಮಡಿಯ ಬಿಡಲಾಗದು ॥ ೩ ॥

ರಾಗ—ಪೂರ್ವಿ ಝಂಪೆತಾಳ.

17. ನೀನೆ ಗತಿ ನೀನೆ ಮತಿ ನೀನೆ ಸ್ವಾಮಿ । ನೀನಲ್ಲದನ್ಯತ್ರ ದೈವಗಳನಾನರಿಯೆ ॥ ಪ ॥ ನಿನ್ನ ಪಾದಾರವಿಂದದ ಸೇವೆಯ ಮಾಡಿ । ನಿನ್ನ ಧ್ಯಾನದಲೀರ್ವ ಹಾಗೆ ಮಾಡು ॥ ನಿನ್ನ ದಾಸರ ಸಂಗದಿಂದ ದೂರಿಡದೆನಗೆ । ಸನ್ಮಾರ್ಗದಿರಿಸೋ ಜಗದೀಶ ಅಘನಾಶ ॥ ೧ ॥ ಕಮಲನಾಭಿಯಲಿಬೊಮ್ಮನಪುಟ್ಟಿಸಿದಿ ಹರಿಯೆ । ಕಮಲಸತಿಕೋಟಿಪ್ರಕಾಶ ಈಶ ॥ ಕಮಲಕರತಳದಿ ಅಭಯವನಿತ್ತು ಭಕತರಿಗೆ । ಕಮಲಾಕ್ಷನೆನಿಸಿದೆಯೋ ಕಮಲಾ ರಮಣಾ ॥ ೨ ॥ ಶಿಶುಪಾಲ ದಂತವಕ್ರರ ಶಿರವಛೇದಿಸಿದೆ । ಪಶುಪತಿಯ ಆಭರಣವೈರಿವಾಹನನೆ । ಅಸುರಕುಲ ಸಂಹರಿಸಿ ಭಕ್ತಜನರನು ಪೊರೆದೆ । ವಸುಧೀಶ ಪುರಂದರ ವಿಠಲರಾಯ ॥ ೩ ॥

ರಾಗ—ನೀಲಾಂಬರಿ ಅಟತಾಳ.

18. ನಿನ್ನ ಭಕುತಿಯನ್ನೀ ಬೀರೋ ॥ ಎನ್ನ ॥ ಮನ್ನಿಸಿ ಸಲಹುವಯರ್ಾರೋ ॥ ಪ ॥ ಸನ್ನುತ ಸನ್ಮಾರ್ಗ ತೋರೋ ॥ ಪ್ರ । ಸನ್ನರಕ್ಷಕ ಬೇಗಬಾರೋ ॥ ಪನ್ನಂಗಶಯನ ಲಕ್ಷ್ಮೀಶಾ ॥ ವೇದಸನ್ನುತಪಾದಾಸರ್ವೇಶಾ॥ ಇನ್ನುಬಿಡಿಸೊಮೋಹಪಾಶಾ ಪ್ರ॥ ಸನ್ನರಕ್ಷಕ ಶ್ರೀನಿವಾಸಾ ॥೧॥ ಸಾಮಜಗಾನವಿಲೋಲ ॥ ಸ್ವಾಮಿ ಭೂರಿಭಕ್ತಾಪರಾಧಿಶೀಲಾ ॥ ಭೂರಮಣಕರುಣಾಲವಾಲಾ॥ ನೀರಜಶ್ಯಾಮಗೋಪಾಲ ॥೨॥ ಗಜರಾಜ ವರದ ಪ್ರಮೇಯ ಎನ್ನ । ರಜವಹರಿಸಿಪರಿಪಾಲಿಸು ಕಾಯ ॥ ತ್ರಿಜಗರಮಣಕರುಣರಾಯಾ । ಭಜಿಸುವೆ ಪುರಂದರ ವಿಠಲರಾಯ ॥ ೩ ॥

ರಾಗ—ಕಲ್ಯಾಣಿ ಅಟತಾಳ.

19. ಇನ್ನಾದರೂದಯಬಾರದೆ । ದಾಸನಮೇಲೆ। ಇನ್ನಾದರೂ ದಯಬಾರದೆ ಪನ್ನಂಗಶಯನಪಾಲ್ಗಡಲೊಡೆಯನೆ ಕೃಷ್ಣ ॥ಪ॥ ನಾನಾದೇಶಗಳಲ್ಲಿ ನಾನಾಯೋನಿಗಳಲ್ಲಿ ನಾನಾಜೀವನಾಗಿ ಪುಟ್ಟಿಪುಟ್ಟಿ॥ ನಾನು ನನ್ನದು ಎಂದು ನರಕದೊಳಗೆಬಿದ್ದು॥ ನೀನೆಗತಿಯೆಂದು ನಂಬಿನಿಂದವನೊಳು ಇನ್ನಾದರೂ ॥೧॥

ಕಾವಮಾದಿ ಷಡ್ವರ್ಗಗಾಢಾಂಧಕಾರದಿ ಪಾವುರನಾಗಿಹ ಪಾತಕಿಯೂ॥ ಮಾ ಮನೋಹರ ನಿನ್ನ ಪ್ರೇಮದಿ ಭಜಿಸುತ್ತ । ನಾಮವೇ ಗತಿಯೆಂದು ನಂಬಿದದಾಸನೊಳ್॥ ಇನ್ನಾದರೂ ॥ ೨ ॥ ಮಾನಸವಾಚಕಕಾಯದಿಂದ ಸ । ಮ್ಮಾನದಿಂದಲಿ ನಿನ್ನ ಮರೆಹೊಕ್ಕೆನೋ ॥ ಏನು ಮಾಡುವದಕ್ಕೆ ಪ್ರಾಣವು ನಿನ್ನಯಾಧೀನವಾದ ಮೇಲೆ ಪುರಂದರ ವಿಠಲಾ ॥ ೩ ॥

ರಾಗ—ಕೇತಾರಗೌಳ ಅಟತಾಳ.

20. ತನುನಿನ್ನದು ಜೀವನನಿನ್ನದು ಸ್ವಾಮಿ॥ಪ॥ ಅನುದಿನದಲಿ ಬಹಾ ಸುಖದುಃಖ ನಿನ್ನದಯ್ಯಾ ॥ಅ.ಪ॥ ಸವಿನುಡಿವೇದಪುರಾಣ ಶಾಸ್ತ್ರಗಳಲ್ಲಿ ಕಿವಿಗೊಟ್ಟುಕೇಳುವ ಕಥೆನಿನ್ನದು । ನವ ಮೋಹನಾಂಗಿಯರ ರೂಪವ ಕಣ್ಣಲಿ ಎವೆಇಕ್ಕದೆ ನೋಡುವ ನೋಟನಿನ್ನದಯ್ಯಾ ॥ ೧ ॥ ಒಡಗೂಡಿಗಂಧ ಕಸ್ತೂರಿ ಪರಿಮಳವನ್ನೇ ಬಿಡದೆಲೇಪಿಸಿಕೊಂಬುವದು ನಿನ್ನದು ಷಡುರಸದನ್ನಕೆ ನಲಿದಾಡುವಜಿಹ್ವೆಕಡುರುಚಿಗೊಂಬುದಾರುಚಿ ನಿನ್ನದಯ್ಯಾ॥೨॥ ಮಾಯಪಾಶದಬಲೆಯೊಳುಸಿಕ್ಕಿಕೊಳ್ಳುವ ಕಾಯಪಂಚೇಂದ್ರಿಯಗತಿ ನಿನ್ನದು ॥ ಕಾಯಜ ಪಿತ ಕಾಗಿನೆಲೆಯಾದಿ ಕೇಶವ ॥ ರಾಯ ನೀನಲ್ಲದೆ ನರರ ಸ್ವತಂತ್ರವೇ ॥ ೩ ॥

ರಾಗ—ಸಾರಾಷ್ಟ್ರ ಆದಿತಾಳ.

21. ದಾಸಾದಾಸರ ದಾಸ ನಾನು ಬಿಡದೀಶ ಕಾಯ್ದುಕೊಳ್ಳೈ ॥ ಪ ॥ ಗುಟ್ಟುಮಾಡಿಕೊಂಡಿರದೆ ಕಂಡವರಿಗೆ ಕಾರ್ಪಣ್ಯ ॥ ಬಿಟ್ಟುಬಡವನಾದೆನಲ್ಲಯ್ಯ ಕೈ ॥ ಗೊಟ್ಟು ರಕ್ಷಿಸುವರಿಲ್ಲ ಜನ್ಮಜನ್ಮಂಗಳಲ್ಲಿ॥ ಪುಟ್ಟುವಂತೆಮಾಡಬ್ಯಾಡ ಮಾಧವ ಮನ್ನಿಸೋ ಎನ್ನ ॥೧॥ ಮಡದಿಮಕ್ಕಳೆಂಬ ಪಾಶಮುಮತೆ ಎನ್ನಕೊರಳುಸುತ್ತಿ॥ ಬಿಡದೆ ಸುತ್ತಿಕೊಂಡಿತಲ್ಲಯ್ಯ॥ ಪಡದದ್ರವ್ಯವೆಲ್ಲವಸ್ತು ಕ್ಷೇತ್ರಂಗಳ ಕಾಣದೆನಿತ್ಯ ॥ ನಡದು ವಿಸ್ತರಿಸಲಾರೆ ನೀಲಮೇಘಶ್ಯಾಮನಿನ್ನ ॥ ೨ ॥ ಘೋರಸಂಸಾರನೆಂದೆಂಬ ವಾರಿಧಿಯೊಳಗೆಬಿದ್ದು ॥ ಪಾರಗಾಣದವನಾಗೆನಲ್ಲಯ್ಯ ॥ ಧೀರಕರ್ತನಾದ ಬಡದಾದಿಕೇಶವೇಶ ಸರ್ವ । ಸಾರಿದೆಸಲಹೋ ಎನ್ನುದ್ಧಾರಿಮುದ್ದು ಕೃಷ್ಣ॥ ನಿನ್ನ ॥ ೩ ॥

ರಾಗ—ಕಾಂಬೋಧಿ ಅಟತಾಳ.

22. ರಕ್ಷಿಸೋ ಶ್ರೀಶಾ॥ ಶ್ರೀನಿವಾಸಾ॥ ರಕ್ಷಿಸೊಶ್ರೀಶಾ॥ಪ॥ ರಕ್ಷಿಸೆನ್ನ

ಪದ್ಮಾಕ್ಷ। ತ್ರಿಜಗಧ್ಯಕ್ಷ॥ ಸುಜನರಪಕ್ಷ॥ ಪಾಂಡವರಕ್ಷ ಕರುಣಕಟಾಕ್ಷದಲಿ ನೀರಕ್ಷಿಸುತ ಪೊರೆಪಕ್ಷಿವಾಹನರಕ್ಷಿಸೋ॥ಅ.ಪ॥ ಕೊಂಚಮತಿಯಲೀ॥ ಕುಜನರಸೇರಿ॥ ಸಂಚರಿಸುತಲೀ ॥ ದೀನನಾದೆಪಂಚ ಸ್ಮರಶರವಂಚಿಸುತಬರೆ ॥ ಚಂಚಲಾಕ್ಷಿಯರ್ ಹೊಂಚಿನೋಟದ॥ ಮಿಂಚಿಗೆನಮನ ಚಂಚಲಾಗುತೆಸಂಚಯಮನಂಜಿಕೆಗೆ ಸಿಲುಕಿದೆ ॥ ೧ ॥ ಕಿಟ್ಟಗಿಡಿದಾ ಕಬ್ಬಿಣದಂತೆ ॥ ಕೆಟ್ಟಕಿಲ್ಬಿಷದಕೂಪದಿಬಿದ್ದು॥ ದಿಟ್ಟನಿನ್ನಯ ಗುಟ್ಟುತಿಳಿಯದೆ। ಪೊಟ್ಟೆಗೋಸುಗಕೆಟ್ಟಕುಜನರ ಘಟ್ಟಯಂ ಕಾಲ್ಗಟ್ಟಿಅನುದಿನ ॥ ಪಟ್ಟೆನಾಕಂಗೆಟ್ಟೆ ಪ್ರತಿದಿನ ॥ ೨ ॥ ಶ್ರೀಕಮಲೇಶಾ ವಿಠಲನೆ ನೀನಾನೇಕಪ್ರಕಾಶಾ ಬೇಗನೆಬಂದು ॥ ಯಾಕೆತಡಯೆನ್ನವಾಕುಲಾಲಿಸಿ ಜೋಕೆಯಿಂದಲಿನೀಕರವ ಪಿಡಿದಾಕುಚೇಲನ ಸಾಕಿದಾಪರಿ ಶ್ರೀಕರನೆ ಜಗನ್ನಾಥ ವಿಠಲನೆ ॥ ೩ ॥

ರಾಗ—ಕಾಂಬೋಧಿ ಝಂಪೆತಾಳ.

23. ನಿನ್ನ ಸಂಕಲ್ಪಾನುಸಾರ ಮಾಡೋ॥ ಎನ್ನಸಾಕುವ ಧೊರೆಯಮಾನ್ಯಮಾನದನೇ ॥ ಪ ॥ ಪಾತ್ರನೆಂದೆನಿಸೋ ಇವ । ಶ್ರೋತ್ರಿಯನೆಂದೆನಿಸೋ ॥ ಬಲು ಶುಂಠನೆಂದೆನಿಸೋ । ಪುತ್ರಮಿತ್ರಾದ್ಯರಿಂ ಬಯಸಿ ಪೂಜೆಯಗೈಸೋ ॥ ಕರ್ತುನೀಜಗಕೆ ಸರ್ವತ್ರವ್ಯಾಪಕದೇವ ॥ ೧ ॥ ಜನರೊಳಗೆ ನೀನಿದ್ದು ಜನ್ಮಜನ್ಮಗಳಲಿ ॥ ಗುಣಕಾಲಕರ್ಮ ಸ್ವಭಾವಂಗಳಾ ॥ ಅನುಸರಿಸಿಪುಣ್ಯಪಾಪಂಗಳ॥ ಮಾಡಿಸಿಫಲಗಳ॥ ಉಣಿಸಿ ಮುಕ್ತರಮಾಡಿ ಪೊರವೆ ಕರುಣಾಳೋ ॥೨॥ ಯಾತಕೆನ್ನನು ಇನಿತು ದೂರಕನಮಾಡುವಿ ॥ ಧರಾತಳದೊಳನುದಿನದಿ ಮಾಯಾಪತೇ। ಭೀತಿಗೊಂಬುವನಲ್ಲ ಭಯನಿವಾರಣಜಗನ್ನಾಥವಿಠಲ ಜಯಪ್ರದನೇ ಜಗದೀಶಾ ॥ ೩ ।

ರಾಗ—ಕಲ್ಯಾಣಿ ಝಂಪೆತಾಳ.

24. ನಿನ್ನ ಆಶ್ರೈಸುವೆನಿಗಮಗೋಚರ ನಿತ್ಯ ॥ ಜೆನ್ನಬಿಡದೆ ಕಾಯೋಮನದಿಷ್ಟವೀಯೋ ॥ಪ॥ ಕುಂದಣದಆಶ್ರಯನವರತ್ನಗಳಿಗೆಲ್ಲ ಚಂದಿರನಆಶ್ರಯಚಕೋರಗೆ॥ ಕಂದರ್ಪನಾಶ್ರಯ ವಸಂತಕಾಲಕ್ಕೆ । ಗೋವಿಂದನಾಶ್ರಯ ಮರಣಕಾಲದೊಳು ॥೧॥ ಹಣ್ಣುಳ್ಳಮರಗಳು ಪಕ್ಷಿಗಳಿಗಾಶ್ರಯ॥ ಪುಣ್ಯನದಿಗಳು ಋಷಿಗಳಾಶ್ರಯವು। ಕಣ್ಣಿಲ್ಲದಾತಗೆ ಕೈಗೋಲಿನಾಶ್ರಯವು ॥ ತನ್ನಿಷ್ಟಪಡದವಗೆ ನಿನ್ನ ಆಶ್ರಯವು ॥೨॥ ಪತಿವ್ರತೆವನಿತೆಗೆ ಪತಿಯೊಂದೆ ಆಶ್ರಯವು

ಯತಿಗಳಿಗೆ ಶ್ರುತಿಪ್ರಣವದಾಶ್ರಯವು ॥ ಮತಿಯುಕ್ತನಿಗೆ ಹರಿಸ್ತುತಿಗಳೇ ಆಶ್ರಯ ॥ ಹಿತವಾದ ಪುರಂದರ ವಿಠಲನಾಶ್ರಯವು ॥ ೩ ॥

7. ಧರ್ಮ.

॥ ಪದ ॥

1. ಏನು ಇಲ್ಲದ ಎರಡು ದಿನದ ಸಂಸಾರ॥ ಜ್ಞಾನದಲಿ ದಾನಧರ್ಮವ ಮಾಡಿರೈಯ್ಯಾ ॥ಪ॥ ಹಸಿದು ಬಂದವರಿಗೆ ಅಶನವೀಯಲುಬೇಕು। ಶಿಶುವಿಗೆ ಪಾಲ್ಬೆಣ್ಣೆಯುಣಿಸಬೇಕು। ಹಸನಾದ ಭೂಮಿಯನು ಧಾರೆಯರೆಯಲುಬೇಕು । ಪುಸಿಯಾಡದಲೆ ಭಾಷೆನಡಿಸಲೇ ಬೇಕು ॥ ೧ ॥ ಕಳ್ಳತನಗಳಮಾಡಿ ಒಡಲಹೊರೆಯಲು ಬ್ಯಾಡ॥ ಕುಳ್ಳಿರ್ದಸ್ಥಳದಿ ಕುಟಿಲಕೃತ್ಯಬ್ಯಾಡ॥ ಒಳ್ಳೆಯವನಾನೆಂದು ಬಲುಹೆಮ್ಮೆಲಿರಬೇಡ ॥ ಬಾಳ್ವೆಸ್ಥಿರವೆಂದು ನೀನಂಬಿಕೆಡಬ್ಯಾಡ ॥ ೨ ॥ ದೊರೆತನವು ಬಂದಾಗ ಕೆಟ್ಟನುಡಿಯಲು ಬ್ಯಾಡ॥ ಸಿರಿಬಂದಕಾಲಕ್ಕೆ ಮರೆಯಬ್ಯಾಡ॥ ಸಿರಿವಂತನಾದರೆ ನೆಲೆಯಾದಿ ಕೇಶವನ ಚರಣ ಕಮಲಗಳ ಸೇರಿ ಸುಖಿಯಾಗು ಮನುಜಾ ॥ ೩ ॥

(ನೀಮಾಯೆಯೊಳಗೊ) ಎಂಬಂತೆ.

2. ಧರ್ಮವೇ ಜಯವೆಂಬ ದಿವ್ಯಮಂತ್ರಾ। ಮರ್ಮವನು ತಿಳಿದು ಆಚರಿಸುವದು ಕೇಳಿ ॥೧॥ ವಿಷವನುಣಿಸಿದಗೆ ಷಡ್ರಸವನುಣಿಸಲುಬೇಕು । ಅಸೂಯಪಡುವವನ ಪೋಷಿಸಲುಬೇಕು ॥ ಅಸಿಯಲಿರಿದವನ ಮಗನ್ನೆಸರಿಡಲುಬೇಕು। ಹುಸಿದುಮನೆಕೊಂಬವನಹರಸಲುಬೇಕು॥ ೨ ॥ ಎಂದಿಗೂಸೇರದವನ ಹಾಡಿಹರಸಲು ಬೇಕು । ಕೊಂದವನಗೆಳೆನತವ ಮಾಡಬೇಕು ॥ ಹಿಂದೆನಿಂದಿಸುವವನ ವಂದಿಸುತ್ತಿರಬೇಕು । ಬಂಧನದೊಳಿಟ್ಟವನ ಬಿಡಿಸಬೇಕು ॥ ೩ ॥ ಕೊಂಡೊಯ್ದು ಕೊಲಿಸುವರ ಕೊಂಡಾಡುತ್ತಿರಬೇಕು। ಕಂಡರಾಗದವನಹೊಗಳಬೇಕು ಕಂಡುಭಜಿಸಿರೋ ನೀವು ಪುರಂದರವಿಠಲನ್ನ। ಅಖಂಡಮಹಿಮೆಯನರಿತುಅರಿಯದಿರಬೇಕು ॥ ೪ ॥

॥ ಪದ ॥

3. ಧರ್ಮವೆಂಬಸಂಬಳವ ಗಳಿಸಿಕೊಳ್ಳಿರೋ ॥ಪ॥ ಪ್ರೇಮದಿಂ ಈ ದೇಹವನ್ನು ನಂಬಬೇಡಿಕಾಣಿರೋ॥ಅ.ಪ॥ ಅಟ್ಟಿಅಡುಗೆಉಣಲುಬಿಡನು।ಕೊಟ್ಟ ಸಾಲವ ಕೇಳಬಿಡನು ಪೆಟ್ಟಿಗೆಯೊಳಿದ್ದ ಚಿನ್ನವನ್ನು ತೊಟ್ಟೆನೆಂದರೆ ಯಮನು ಬಿಡನು ॥ ೧ ॥ ಆಕಳನ್ನುಕರೆಯಲಿಲ್ಲಾ । ಮಕ್ಕಳನ್ನು ಪಡೆಯಲಿಲ್ಲ ॥ ದುಃಖಗೊಂಡು ಕಣ್ಣೀರನ್ನು ಉಕ್ಕಿಸಿದರೆ ಬಿಡನುಯಮನು ॥೨॥ ಪೇಳ್ವೆನೆಂಟರಿಂಗೆ ಕರೆದು। ಬೇಳೆಬೆಲ್ಲವನ್ನುತಂದು ನಾಳೆಮಗನಮದುವೆ ಎಂದು ತಾಳುಎಂದರೆ ಯಮನುಬಿಡನು ॥ ೩ ॥ ಮಾಳಿಗೆಯಮನೆಯುಇರಲಿ । ಜಾಳಿಗೆತುಂಬಿಹೊನ್ನು ಇರಲಿ॥ ಆಳುಮಂದಿಶ್ಯಾನೆಇರಲಿ ಕಾಲನು ತಾ ಬೆನ್ನಬಿಡನು ಇದಕೊ ॥ ೪ ॥ ಆರ್ತಿಯಿಂದ ಸಂಸಾರವವ್ಯರ್ಥವಾಗಿನೆಚ್ಚಬ್ಯಾಡಿ । ಕರ್ತ ಪುರಂದರ ವಿಠಲನ ಭಕ್ತಿಯಿಂದ ಭಜಿಸಿರೋ ನೀವು ॥ ೫ ॥

4. ಬುತ್ತಿಯಕಟ್ಟೋಮನುಜಾ॥ ಹೇಮನುಜಾ॥ಪ॥ಬುತ್ತಿಯನ್ನು ಕಟ್ಟಿದರೆ ಎತ್ತಲಾದರೂಉಣ್ಣಬಹುದು॥ ಧರ್ಮವೆಂಬ ಮಡಿಕೆಯಲ್ಲಿನಿರ್ಮಲವನಗಂಗೆ ತುಂಬಿಸುಮ್ಮನದುರಿಯಹಚ್ಚಿ॥ ಒಮ್ಮಾನಕ್ಕನ್ನಬಾಗಿ ॥೧॥ ಅರಿವು ಎಂಬಾಅರಿವೆಹಾಸಿ। ಹರಿವಿಹಾಲವೊಸರತಳಿದು ಪರಮವೈರಾಗ್ಯದಿಂದಲೇ ಶ್ರೀಹರಿಗೆಸಮರ್ಪಿತವೆಂದೂ ॥೨॥ ಕರ್ತಪುರಂದರವಿಠಲನ ತತ್ವವೆಂಬಬುತ್ತಿಯನ್ನು ಹತ್ತಿರ ತಂದಿಟ್ಟುಕೊಂಡು ನಿತ್ಯಉಂಡುತೃಪ್ತಿಪಡಿರೋ ॥ ೩ ॥

5. ಧರ್ಮದೊರಕೊಂಬುವದೆಸಜ್ಜನರಿಗೆ ದುಷ್ಕರ್ಮ ಸತಿಯರುಳ್ಳ ಪುರುಷೋತ್ತಮರಿಗೆ ಧನವಿದ್ದರೇನಯ್ಯ । ಮನವಿಲ್ಲದವರಿಗೆ ಮನವಿದ್ದರೇನಯ್ಯ ಧನವಿಲ್ಲವೂ॥ ಧನವೂಮನವೂ ಎರಡುಳ್ಳ ಪುರುಷರಿಗೆ । ಅನುಕೂಲವಾದಂಥಾ ಸತಿಯಿಲ್ಲವಯ್ಯಾ॥ ೧ ॥ ನಿನ್ನ ಕಣ್ಣಮುಂದೆ ಹೋಗುವಜೀವನು । ಇನ್ನುನಿನಗೆ ನಾಚಿಕೆಯಿಲ್ಲವೂ ॥ ಎನ್ನದುತನ್ನದು ಎಂಬಭ್ರಾಂತಿಯ ಬಿಟ್ಟು। ಇನ್ನೀದೇಹವ ನಂಬಿಕೆಡಬೇಡ ಮನುಜ ॥೨॥ ಈಗಮಾಡುವಧರ್ಮ ನಾಳೆ ಎಂದೆನಬೇಡ ನೀವಾರು ನಾವಾರು ಎಲೆ ಮನುಜ । ಊಳಿಗದವರೆಂಬ ಬಟರು ಬಂದೆಳವಾಗ । ನಾಳೆ ಮಾಳ್ಪೆನೆನೆ ಬಿಡುವರೆಮನುಜ ॥ ೩ ॥ ಎಂದೆಂದು ಈಪರಿ ಅಲ್ಲಲ್ಲಿಬಳಲಿಕೆ। ಮುಂದೆಕಾಣೆನುಸಾಧನವನು ತಂದೆ ಶ್ರೀ ಪುರಂದರ ವಿಠಳರಾಯನ । ಒಂದು ಸಾರೆಯು ನೀ ನೆನೆ ಕಂಡ್ಯ ಮನುಜ ॥ ೪ ॥

8. ಜ್ಞಾನ.

ರಾಗ—ಕಾಂಬೋದಿ ಆದಿತಾಳ.

1. ನೀ ಮಾಯೆಯೊಳಗೊ ನಿನ್ನೊಳು ಮಾಯೆಯೋ॥ ನೀ ದೇಹದೊಳಗೊ ನಿನ್ನೊಳು ದೇಹವೋ ॥ ಕೃಷ್ಣಾ॥ಪ॥ ಬಯಲುಆಲಯದೊಳಗೊ ಆಲಯವುಬಯಲೊಳಗೊ । ಬಯಲುಆಲಯವೆರಡುನಯನದೊಳಗೊ ॥ ನಯನ ಬುದ್ಧಿಯ ಒಳಗೊ ಬುದ್ಧಿನಯನದಒಳಗೊ ನಯನಬುದ್ಧಿಗಳೆರಡು ನಿನ್ನೊಳಗೊ ॥ ಕೃಷ್ಣಾ ॥೧॥ ಸವಿಯುಸಕ್ಕರೆಯೊಳಗೊ ಸಕ್ಕರೆಯುಸವಿಯೊಳಗೊ॥ ಸವಿಯುಸಕ್ಕರೆ ಎರಡು ಜಿಹ್ವೆಯೊಳಗೊ॥ ಜಿಹ್ವೆಮನಸಿನ ಒಳಗೊ ಮನಸುಜಿಹ್ವೆಯ ಒಳಗೊ ಮನಸುಜಿಹ್ವೆಗಳೆರಡು ನಿನ್ನೊಳಗೊ ಕೃಷ್ಣಾ ॥ ೨ ॥ ಕುಸುಮಗಂಧದ ಒಳಗೊ ಗಂಧಕುಸುಮದ ಒಳಗೊ ॥ ಕುಸುಮಗಂಧಗಳೆರಡು ಘ್ರಾಣದೊಳಗೊ॥ ಅಸಮಭವಕಾಗಿ ಶ್ರೀನೆಲೆಯಾದಿ ಕೇಶವನೆ ಉಸುರಲೆನಗಳವಲ್ಲ ಎಲ್ಲ ನಿನ್ನೊಳಗೊ ಕೃಷ್ಣಾ ॥ ೩ ॥

(ನೋಡು ನೋಡು ಗೋಪಿ ನಿನ್ನ) ಎಂಬಂತೆ.

2. ನಾನು ನೀನು ಎನ್ನದಿರು ಹೀನಮಾನವಾ । ಜ್ಞಾನದಿಂದ ನಿನ್ನ ನೀನೆ ತಿಳಿದುನೊಡೆಲೋ॥ಪ॥ ಹೆಣ್ಣುಹೊನ್ನುಮಣ್ಣುಮೂರು ನಿನ್ನದೇನೆಲೋ॥ ಅನ್ನದಿಂದ ಬಂದ ಕಾಮ ನಿನ್ನದೇನೆಲೋ ॥ ೧ ॥ ಕರ್ಣದಿಂದ ಬರುವಘೋಷ ನಿನ್ನದೇನೆಲೋ॥ ನಿನ್ನ ಬಿಟ್ಟುಹೋಹದೇಹ ನಿನ್ನದೇನೆಲೊ ॥೨॥ ಹಲವುಜಲ್ಮ ವಲ್ಲಿಬಂದಿರುವನು ನೀನೆಲೊ ॥ ಮಲದಗರ್ಭದಲ್ಲಿ ನಿಂದಿರುವನು ನೀನೆಲೊ ॥ ಜಲದ ದಾರಿಯಲ್ಲಿ ಬಂದಿರುವನು ನೀನೆಲೊ ॥ ಕುಲವು ಜಾತಿಗೋತ್ರಗಳುಳ್ಳವನು ನೀನೆಲೊ ॥ ೩ ॥ ಕಾಲಕರ್ಮಶೀಲನೇಮ ನಿನ್ನದೇನೆಲೊ ಜಾಲವಿದ್ಯಬಯಲಮಾಯ ನಿನ್ನದೇನೆಲೋ ॥ ಕೀಲುಜಡಿದ ನರದಗೊಂಬೆ ನಿನ್ನದೇನೆಲೊ॥ ಲೋಲ ಆದಿ ಕೇಶವನ ಭಕ್ತನಾಗೆಲೋ ॥ ೪ ॥

(ಮತ್ತಾರು ಬರುವರು) ಎಂಬಂತೆ.

3. ಸ್ನಾನವಮಾಡಿರೊ ಜ್ಞಾನತೀರ್ಥದಲಿ॥ ನಾನು ನೀನೆಂಬಹಂಕಾರ ಬಿಟ್ಟು ॥ ಪ ॥ ತಂದೆತಾಯ್ಗಳ ವಂದಿಸಲೊಂದುಸ್ನಾನ ॥ ಬಂಧನವ ಬಿಡಿಸಲೊಂದು ಸ್ನಾನ ॥ ಮುಂದಣ ಮಾರ್ಗ ನೋಡುವದೊಂದು ಸ್ನಾನ ॥ ಇಂದಿರೇಶನ ಧ್ಯಾನವೇ ಗಂಗಾಸ್ನಾನ ॥ ೧ ॥ ಪರಸತಿಯ ಬಯಸದಿದ್ದರೆ ಒಂದು

ಸ್ನಾನ॥ ಪರರನಿಂದಿಸದಿರುವುದೆ ಒಂದುಸ್ನಾನ॥ ಪರರೊಡವೆಯಪಹರಿಸದೊಂದು ಸ್ನಾನ॥ ಪರತತ್ವತಿಳಿದುಕೊಂಡರೆ ಗಂಗಾಸ್ನಾನ॥ ೨ ॥ ತನ್ನೊಳು ತಾನೆ ತಿಳಿದರೊಂದು ಸ್ನಾನ॥ ಅನ್ಯಾಯನುಡಿಯದಿದ್ದರೆ ಒಂದುಸ್ನಾನ। ಅನ್ಯಾಯ ಮಾಡದಿರಲು ಒಂದು ಸ್ನಾನ । ಚೆನ್ನಾಗಿ ಹರಿಯನೆನೆಯೆಗಂಗಾಸ್ನಾನ ॥ ೩ ॥ ಸುಕ್ಷೇತ್ರದಲ್ಲಿ ಒಂದಿಸಲೊಂದುಸ್ನಾನ॥ ಉಪೇಕ್ಷೆಯ ಮಾಡದಿರುವದೊಂದು ಸ್ನಾನ ॥ ಅಕ್ಷಿದೋಷವ ಭೇದಿಸಲೊಂದು ಸ್ನಾನ ॥ ಲಕ್ಷ್ಮೀಪತಿಯ ಧ್ಯಾನವೇ ಗಂಗಾಸ್ನಾನ ॥ ೪ ॥ ವೇದಶಾಸ್ತ್ರವನೋದುವದೊಂದು ಸ್ನಾನ ಭೇದಾಭೇದವ ತಿಳಿದರೊಂದು ಸ್ನಾನ॥ ಸಾದುಸಜ್ಜನರಸಂಗತಿ ಒಂದು ಸ್ನಾನ ॥ ಪುರಂದರ ವಿಠಳನ ಧ್ಯಾನವೇ ಗಂಗಾಸ್ನಾನ ॥ ೫ ॥

4. ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವೈಯ್ಯಾ॥ ಪ ॥ ಪದುಮನಾಭನಪಾದ ಭಜನೆವಯ್ಯ ॥ ಅ॥ ಕಲ್ಲಾಗಿರಲುಬೇಕು ಕಠಿಣಭವತೊರೆಯೊಳಗೆ । ಬಿಲ್ಲಾಗಿರಲುಬೇಕು ಬಲ್ಲವರೊಳಗೆ । ಮೆಲ್ಲನೆ ಮಾಧವಗೆ ಮನವು ಮೆಚ್ಚಿಸಬೇಕು ॥ ಬೆಲ್ಲವಾಗಲುಬೇಕು ಬಂಧುಜನರೊಳಗೆ ॥೧॥ ಬುದ್ಧಿಯಲಿ ತನುಮನವ ತಿದ್ದಿಕೊಳ್ಳಲುಬೇಕು॥ ಮುದ್ದಾಗಬೇಕು ಮುನಿ ಯೋಗಿಗಳಿಗೆ ॥ ಮಧ್ವಮತಾಬ್ಧಿಯೊಳು ಮೀನಾಗಿರಲುಬೇಕು ॥ ಶುದ್ಧನಾಗಿರಬೇಕು ಶರಣತ್ರಯಗಳಲಿ ॥ ೨ ॥ ವಿಷಯಭೋಗದ ತೃಣಕೆ ಉರಿಯಾಗಿರಲುಬೇಕು ॥ ನಿಶಿಹಗಲು ಶ್ರೀ ಹರಿಯ ನೆನೆಯಬೇಕು ॥ ವಸುಧೀಶ ಪುರಂದರ ವಿಠಲರಾಯನ ಹೆಸನಾಡ ದಾಸರ ಸೇವಿಸಲುಬೇಕು ॥ ೩ ॥

ರಾಗ—ಜುಂಜೋಟಿ ಛಾಪುತಾಳ.

5. ತಾನ್ಯಾರೋದೇಹ ತಾನ್ಯಾರೋ ॥ಪ॥ ದಿವ್ಯಜ್ಞಾನದಿಂದಲಿತಿಳಿದವನೆ ಪರಮಯೋಗೀ ॥ ಅ. ಪ ॥ ಸೂತಕಾದಿ ನವಮಾಸತುಂಬಿದ ಹೃದಯ ಧಾತುವಿನಾಬಿಂದೊಡೆದು ಬೆಳದು ಬಂದು। ಪಾತಕಪೂರ್ಣಮೂರುತಿಯಾದ ತನುವೆಂದು ॥ ತಾ । ತಿಳಿದು ಬಲೆಗೆ ಸಿಕ್ಕದವ ಯೋಗೀ ॥ ೧ ॥ ಅಸ್ತಿಪಂಜರ ಚರ್ಮದಾಹೊದಿಕೆ ನರವಿನೊಳು । ವಿಸ್ತರಿಸಿಬಿಗಿದಾ ಎಲುವಿನೊಳು ಮಸ್ತ ಮಾಸದ ಬೊಂಬೆ ॥ ರಕ್ತಮಲಕೀವೆಂದು ಸ್ವಸ್ಥದಿಂ ತಿಳಿದವನೆ ಪರಮ ಯೋಗೀ ॥ ೨॥ ಘೋರತರತನುವೆಂಮತಾನು ವೊಳಸಿಕ್ಕದೇ । ಗೇರುಹಣ್ಣಿನ ಬೀಜದಂತೆ ಪೊರಟು ಮಾರಪಿತಕಾಗಿ ನೆಲೆಯಾದಿಕೇಶವನಂಘ್ರಿ । ವಾರಿಜವ ನಂಬಿದವ ಪರಮಯೋಗೀ ॥ ೩ ॥

ರಾಗ—ಶಂಕರಾಭರಣ ಝಂಪೆತಾಳ.

6. ಸಕಲವೆಲ್ಲವು ಹರಿಸೇವೆಯೆನ್ನೀ । ರುಕುಮಿಣೀ ಪತಿಯಲ್ಲ ದನ್ಯ
ವಿಲ್ಲವೆನ್ನೀ ॥ಪ॥ ನುಡಿವುವೆಲ್ಲವು ನಾರಾಯಣನ ಕೀರ್ತನೆ ಎನ್ನಿ ॥ ನಡೆವು
ದೆಲ್ಲವು ದೇವರಯಾತ್ರೆ ಎನ್ನೀ॥ ಕೊಡುವದಾನವು ಕಾಮಜನಕಗರ್ಪಿತ
ವೆನ್ನೀ । ಎಡೆಯಲಿಕ್ಕಿದನ್ನವು ಶ್ರೀಒಡೆಯನಪ್ರಸಾದವೆನ್ನೀ ॥೧॥ ಪೊಸವಸ್ತ್ರ
ಉಡುವವೇ ಹರಿಗೆಬೆಳ್ಳುಡಿಗೆಯೆನ್ನೀ॥ ಕುಸುಮಪರಿಮಳವು ಶ್ರೀಕೃಷ್ಣಗೆನ್ನೀ।
ಎಸೆವ ಆಭರಣಗಳು ಯಶೋದೆ ನಂದನಗೆನ್ನೀ । ಶಶಿಮುಖಿಯರೊಡನಾಟ
ಸೊಬಗುಗೋವಳಗೆನ್ನೀ ॥ ೨ ॥ ಆಟಪಾಟಗಳೆಲ್ಲ ಅಂತರ್ಯಾಮಿಗೆ ಎನ್ನಿ
ಕೂಟನೋಟಗಳೆಲ್ಲ ಕಂಜನಾಭಗೆ ಎನ್ನೀ। ನೀಟಾದವಸ್ತುಗಳು ಕೈಟಭಾಂತ
ಕಗೆನ್ನೀ। ಕೋಟಲೆಸಂಸಾರನಾಟಕಧರಗೆ ಎನ್ನೀ ॥೩॥ ನಿದ್ರೆಜಾಗರಸಮುದ್ರ
ಶಯನಗೆನ್ನೀ । ಭದ್ರನಿಧಿಗಜರಾಜ ವರದಗೆನ್ನೀ॥ ರೌದ್ರದಾರಿದ್ರ್ಯವು ರಾಘ
ವನಡಿಗೆನ್ನೀ ॥ ಶ್ರೀ । ಮುದ್ರೆಗಳ ಧಾರಣವು ಹರಿಯದಾಸರಿಗೆನ್ನೀ ॥ ೪ ॥
ಅಣುರೇಣುತೃಣಕಾಷ್ಟ ವಾಸಪರಿಪೂರ್ಣಗೆನ್ನೀ । ಎಣಿಸಲಾಗದಾನಂತಮಹಿ
ಮನೆನ್ನೀ ॥ ಸೆಣಸುವದೈತ್ಯರ ಗಂಡಪ್ರಚಂಡನೆನ್ನೀ ಫಣಿಶಾಯಿ ಪುರಂದರ
ವಿಠಲನೇ ಪರದೈವವೆನ್ನೀ ॥ ೫ ॥

ರಾಗ—ಕಾಂಬೋದಿ ಝಂಪೆತಾಳ.

7. ಅರಿತವರಿಗತಿಸುಲಭ ಹರಿಯಪೂಜೆ ॥ ಅರಿಯದವನಿರ್ಭಾಗ್ಯಿತರ
ಲೋಕದೊಳಗೆ। ಹೈವಾಂಡಮಂಟಪವು ಭೂಮಂಡಲವೆಪೀಠ। ಸೋಮಸೂ
ರ್ಯರೆದೀಪ ಭೂರುಹಗಳೂ ॥ ಚಾಮರಗಳತಿವಿಮಲವ್ಯೋಮ ಮಂಡಲ
ಛತ್ರ॥ ಯಾಮಾಷ್ಟಕಗಳಷ್ಟದಳ ಪದ್ಮವುಯೆಂದು ॥೧॥ ಮಳೆಯೆಮಜ್ಜನವು
ದಿಗ್ವಲಯಂಗಳ್ವಸನ॥ ಮಲಯಾದ್ರಿಜಾನ ಅವೇಗಂಧಧೂಪಾ ॥ ಇಳೆಯೊ
ಳಗೆ ಬೆಳೆದ ಧಾನ್ಯಗಳೆಲ್ಲ ನೈವೇದ್ಯ । ಥಳಥಳಿಪ ಮಿಂಚು ಕರ್ಪೂರದಾರತಿ
ಗಳೆಂದು ॥ ೨ ॥ ನಕ್ಷತ್ರಮಂಡಲವೇ ಲಕ್ಷದೀಪಾವಳಿಯು ॥ ದಕ್ಷಿಣೋತ್ತರ
ಅಯನಗಳೆ ಬನವು ವೃಕ್ಷವಲ್ಲಿಜಸುಫಲ ಪುಷ್ಪಗಳೊಳಗೆ ಲಕ್ಷ್ಮೀವಕ್ಷವ್ಯಾಪ
ಕನಾಗಿ ತಾನೇ ಭೋಗಿಪನೆಂಬೋ ॥ ೩ ॥ ಗುಡುಗುಸಪ್ತಸಮುದ್ರಸಿಡಿಲ
ಘೋಷವಾದ್ಯ॥ ಪೊಡವಿಪರಿಗೀನ ಕಪ್ಪವೆಕಾಣಿಕೆ । ಉಡುಪಭಾಸ್ಕರರ ಮಂ
ಡಲಗಳಾದರ್ಶಗಳು । ನಡವನಡಿಗರಿಗೆ ಬಿಡದೆ ನರ್ತನವೆಂದೂ ॥ ೪ ॥

ಯುಗಚತುಷ್ಟಯವೆ ಪರಿಯಂಕವಾದಗಳಬ್ಧಿ । ಬಿಗಿವ ಪಟ್ಟಿಗೆಳು ಕಂದಾಯಕಸಿಪೂ ॥ ಗಗನವೇಲ್ಲಗಟ್ಟುಸಂಕ್ರಮಣಗಳೆ ಬಡವುಗಳೂ ॥ ಭಗವಂತಗುಪಬರ್ಹಣಗಳು ಷಡೃತಗಳೆಂದೂ ॥ ೫ ॥ ನಾಗವಲ್ಲಿಗಳ ದಿವಸಗಳು ಕರಣವೇ ಕ್ರಮುಕೆ ಯೋಗಗಳೆ ಚೂರ್ಣರಾತ್ರೆಕಾಂಶೂಕ ॥ ಭೋಗವತಿಜಲವೆ ಗಂಡೂಷಣೋದಕ ॥ ಶುದ್ಧ ಸಾಗರವೆ ಪಾದೋದಕವು ವಿರಾಡ್ರೂಪಗೇ ॥೬॥ ಶಾಶಕುಂಭೋದರಾಂಡಾಂತಸ್ಥರೂಪಸಂ । ಪ್ರೀತಿಯಿಂದಲಿ ಯಜಿಸಿವೋದಿಪ ನರಾ ॥ ವೀತಶೋಕರವನಾಡಿ ಸಂತೈಸುತಿಹ ಜಗ ॥ ನ್ನಾಥ ವಿಠಲ ಒಲಿದು ಸರ್ವಕಾಲದಲೀ ॥ ೭ ॥

9. ಸಂಸಾರ ಕಷ್ಟ ವರ್ಣನೆ.

ರಾಗ—ಪೂರ್ವಿ ಆದಿತಾಳ.

1. ಅನುಗಾಲವು ಚಿಂತೆ ಜೀವಕ್ಕೆ ॥ ತನ್ನ ಮನವು ಮಾಧವನೊಳು ಇರಿಸುವತನಕಾ ॥ಪ॥ ಸತಿಯಿದ್ದರು ಚಿಂತೆ । ಇಲ್ಲಿದಿದ್ದರುಚಿಂತೆ । ಮತಿಹೀನೆಕುರೂಪಿಯಾದರು ಚಿಂತೆಯೂ ॥ ಪೃಥಿವಿಯೊಳಗೆ ಸತಿಕಡುಚೆಲ್ವೆಯಾದರೆ। ಮಿತಿನೊದಲಿಲ್ಲದ ಕಾಯುವ ಚಿಂತೆ ॥ ೧ ॥ ಮಕ್ಕಳಿದ್ದರು ಚಿಂತೆ। ಮಕ್ಕಳಿಲ್ಲದ ಚಿಂತೆ ಒಕ್ಕಾಳು ಹೊನ್ನು ಕೂಡುವ ಚಿಂತೆಯು॥ ಅಕ್ಕರೆದಿಂದಲೆ ಹಿಂಡುತುರುಗಳಕಾದರು ಕಕ್ಕುಲಿತೆಯು ಬಿಟ್ಟುಹೋಗುವ ಚಿಂತೆ ॥ ೨ ॥ ಬಡವನಾದರು ಚಿಂತೆ ಬಲಿದನಾದರು ಚಿಂತೆ । ಹಿಡಿಹೊನ್ನು ಕೈಯೊಳಾದರು ಚಿಂತೆಯೂ ॥ ಪೊಡವಿಯೊಳಗೆ ನಮ್ಮ ಪುರಂದರ ವಿಠಲನ ಬಿಡದೆ ಧ್ಯಾನಿಸಿದರೆ ಚಿಂತೆ ನಿಶ್ಚಿಂತೆ ॥ ೩ ॥

2. ವ್ಯರ್ಥವಾಯಿತೆ ಜನುಮ । ವ್ಯರ್ಥವಾಯಿತೆ ॥ ಅತ್ತಲಿಲ್ಲಾ ಇತ್ತಲಿಲ್ಲಾ ಅರ್ಥಮಾನಿ ಹಾನಿಯಾಗಿ ॥ಪ॥ ಕುರುಡನರುವೆಯನ್ನು ಹೊಸಿಯುಕರವು ಮೆದ್ದತರದಂತೆ ॥ ಪರರಕಾಡಿ ತಂದ ಧನವು ॥ ಪುತ್ರಮಿತ್ರರಿಗಿತ್ತು ॥೧॥ ತರುಣಿಯರಿಗೆ ಹಿತವಿಲ್ಲಾ॥ ತರಳಾರಿಗೆ ಮರುಕವಿಲ್ಲಾ ॥ ಬರದು ಬರದು ವರಲಿವರಲಿ ॥ ಅರಸುಮರಿಯದ ಬಿಟ್ಟಿಮಾಡಿ ॥೨॥ ಊರ ಊರ ತಿರುಗಿ

ತಿರುಗಿ ॥ ದಾರಿಯನ್ನು ನಡೆದುನಡೆದು ॥ ಶರೀರವು ಸೊರಗಿಕರಗಿ॥ ಘೋರನರಕ ಸಾಧನೆಮಾಡಿ ॥ ೩ ॥ ನಾರಿಮಗು ಮುದ್ದಾಡಿದರೆ ॥ ಜಾರೆನೋಡಿ ನಗುವಂತೆ । ಘೋರಸಂಸಾರನೆಚ್ಚಿ ॥ ಸೀರುಕಡದು ನೋಡಿದಂತೆ ॥೪॥ ನರಜನ್ಮದಲ್ಲಿ ಬಂದು ಧರೆಯಮ್ಯಾಲೆ ಪುಟ್ಟಿಬೆಳೆದು ॥ ವರದಪುರಂದರ ವಿಠಲನ್ನ ಸ್ಮರಣೆಯನ್ನು ಮಾಡದೆ ॥ ೫ ॥

3. ಹರಿಯನೆನೆಯದ ನರಜನ್ಮವ್ಯಾಕೆ ॥ ಹರಿಯ ಕೊಂಡಾಡದ ನಾಲಿಗೆಯಾಕೇ ॥ಪ॥ ವೇದವನೋದದ ವಿಪ್ರತಾನ್ಯಾಕೆ ॥ ಕಾದಲರಿಯದ ಕ್ಷತ್ರಿಯನ್ಯಾಕೆ ॥ ಕ್ರೋಧವ ಬಿಡದ ಸನ್ಯಾಸಿತ್ವಯಾಕೇ ॥ ಆದಾರವಿಲ್ಲದ ಅನ್ನಿತಾನ್ನ ಯಾಕೇ ॥ ೧ ॥ ಸತ್ಯಶೌಚವಿಲ್ಲದ ಆಚಾರವ್ಯಾಕೇ ನಿತ್ಯನೇಮವಿಲ್ಲದ ಜಪತಪವ್ಯಾಕೆ ॥ ಆರ್ತಿಲಿಮಾಡದ ಹರಿಪೂಜೆಯಾಕೆ॥ ಉತ್ತಮ ಹಿರಿಯರಿಲ್ಲದ ಸಭೆಯಾಕೆ ॥ ೨ ॥ ಮಾತಾಪಿತರ ಪೊರೆಯದ ಮಕ್ಕಳ್ಯಾಕೆ । ಮಾತು ಕೇಳದ ಸೊಸೆಗೊಡವೆ ತಾನ್ಯಾಕೆ ॥ ನೀತಿನೇರಿಲ್ಲದ ಕೂಟ ತಾನ್ಯಾಕೆ॥ ಅನಾಥನಾದ ಮೇಲೆ ಕೋಪವು ಯಾಕೆ ॥ ೩ ॥ ಅಳಿದು ಅಳಿದು ಹೋಗುವ ಮಕ್ಕಳ್ಯಕೆ । ತಿಳಿಸಿಬುದ್ಧಿಯ ಪೇಳದ ಗುರು ಯಾಕೆ ॥ ನಳಿನನಾಭ ಶ್ರೀ ಪುರಂದರ ವಿಠಲನ ಚಲುವ ಮೂರುತಿಯನೋಡದ ಕಣ್ಣುಳ್ಯಾಕೆ ॥ ೪ ॥

(ಸಾಕು ಸಾಕಿನ್ನು ಸಂಸಾರ) ಎಂಬಂತೆ.

4. ಯಾರೇನ ಮಾಡುವರು ತಾ ಪಾಪಿಯಾದರೆ ॥ ಊರೆಲ್ಲ ನೆಂಟರು ಉಣಬಡಿಸುವರ ಕಾಣೆ ॥ ಪ ॥ ಬಾಯಾರಿಹೋದರೆ ಜಲಬತ್ತಿಹೋಗುವದು ತಾಯಿಸೋದರರೆಂದು ಹಾರೈಸಲು । ಆಯಾಸದಿಂದಲಿ ಕಣ್ಣಿಗೆತೋರದೆ ॥ ಮಾಯದಿಂದಲಿ ದೂರ ನಡೆಯುವರು ಜಗದಿ ॥ ೧ ॥ ಹಸಿದು ನೆಂಟರಮನೆಗೆಕುಶಲದಿ ಪೋದರೆ ಹಸಿವು ಅರಿತು ಬಡಿಸುವವರ ಕಾಣೆ । ರಸಕಬ್ಬುಎಂದು ತಾ ಮೆಲ್ಲಹೋದರೆ ಇನ್ನು । ವಿಷವಾಗಿ ತೋರುತಿದೆ ಪ್ರಾರಬ್ಧ ಬಲದಿಂದ ॥ ೨ ॥ ಗಿಡದನೆರಳು ಎಂದು ಅಡಿಗೆ ಹೋದರೆ ಮರವು ಘಡಗಡನೆ ಉರಿದು ಕೆಂಡಗಳುಗುಳ್ವವು॥ ಮಡದಿಮಕ್ಕಳು ಎನ್ನ ರಕ್ಷಿಪರು ಎಂದರೆ॥ ಹಿಡಿದುಬಂಧಿಪರು ತವೊಡಲು ಗತಿ ಏನೆಂದು ॥ ೩ ॥ ಕಷ್ಟವನು ಪಡಲಾರೆ ಕಾನನದೊಳಿರಲಾರೆ ॥ ನಿಷ್ಠುರ ಬಂದ ಕಡೆ ನಿಲ್ಲಲಾರೆ ॥ ಕಷ್ಟಪಡು ಮಗು ಎಂದುಎನ್ನ ಜನನಿಯು ಹೆತ್ತು ॥ ನಿಷ್ಠುರದಿಂದಲಿ ಎನ್ನ ಎರೆದಳೋ ಏನೋ ॥ ೪ ॥

ಮನಕೆ ಬಾರದ ಹೆಣ್ಣು ಮನೆಗೆ ಹಬ್ಬಿದಬಳ್ಳಿ॥ ಗುಣವಿಲ್ಲದ ಮನುಜನ ಸಂಗ ಸಮವೂ ॥ ಹಣೆಯ ಬರಹದ ವಶದಿ ದಣಿಯುತ್ತಿದ್ದರು ಮುಂದೆ॥ ಬಿನಗುಭ ವಬಿಡಿಸೆ । ಪುರಂದವಿಠಲ ಎನ್ನಿರೊ ॥ ೫ ॥

5. ಬರಿದೆ ಹೋಯಿತು ಹೊತ್ತು ॥ ನರಜನ್ಮ ಸ್ಥಿರವೆಂದು ನಾನಿದ್ದೆ ದೇವಾ ॥ ಆಶೆಯೆಂಬುದು ಎನ್ನ ಕ್ಲೇಶಬಡಿಸುತಿದೆ ಘಾಸಿಯಾದೆನೋ ಹರಿಯೇ । ವಾಸುದೇವ ನಿಮ್ಮ ಧ್ಯಾನವ ಮಾಡದೆ ನಾಶವಾಯಿತು ಜನ್ಮಮೋಸ ಹೋದೆ ಹರಿಯೇ ॥ ೧ ॥ ಸತಿಸುತರಿವರಿಂದ ಅತಿ ಭ್ರಾಂತಿಗೊಳಗಾಗಿ । ಮತಿಹೀನನಾದೆಚ್ಯುತಿದೂರನೆ ॥ ಸತತನಿರಂತರ ವಿಶಯಲಂಪಟನಾದೆ ಗತಿಗೆಡಿಸುತಿದೆ ಮನಸು । ಹರಿಸರ್ವೋತ್ತಮನೆ ॥ ೨ ॥ ಪರರಸೇವೆಯ ಮಾಡಿ । ಪರರನೆ ಕೊಂಡಾಡಿ । ಮರುಳುತನದಲಿ ನಾನು ಮತಿಹೀನನಾಗಿದ್ದೆ ॥ ಕರುಣದಿಂದಲಿ ಎನ್ನ ಮರೆಯದೆ ಸಲಹಯ್ಯಾ ॥ ಗುರು ಪುರಂದರ ವಿಠಲನೆರೆನಂಬಿದೇನೋ ॥ ೩ ॥

ಮೇಲಿನ ಮಟ್ಟು.

6. ಒಂದಲ್ಲ ಎರಡಲ್ಲನೊಂದ ಜೀವಕೆದುಃಖ ॥ ಒಂದೊಂದು ಕ್ಷಣಕೆ ಅನಂತದುಃಖ ॥ ಪ ॥ ಬಸುರಿನೊಳಗೆ ದುಃಖ ಶಿಶುತನದಲಿ ದುಃಖ ॥ ಎಸೆವ ಕೌಮಾರ ಯೌವನ ದುಃಖವೂ ॥ ವಶವಲ್ಲದ ದುಃಖ ವಾರ್ಧಿಕದ ದುಃಖ॥ ಸತಿಸುತ ಮಿತ್ರರು ಕಾಡುವ ದುಃಖ ॥ ೧ ॥ ಅಷ್ಟಭೋಗದ ದುಃಖ ಆರರಿಗಳ ದುಃಖ ॥ ಕಷ್ಟದಾರಿದ್ರ್ಯಕಾಡುವ ದುಃಖವೂ ॥ ಮೃಷ್ಟಾನ್ನ ಇಲ್ಲದೆ ಮಿಡುಕುವ ದುಃಖ ॥ ದುಷ್ಟರಿಂದ ನುಡಿಕೇಳುವ ದುಃಖ ॥ ೨ ॥ ತನಗಿಂತಲಧಿಕರನನುಸರಿಸುವ ದುಃಖ ॥ ತನಗಿಂತ ಬಡವರನು ಕಾಡುವ ದುಃಖ ॥ ತನಸರಿಯರ ಮಾತು ಕೇಳುವ ದುಃಖ ॥ ತನವರು ತನಗಿನ್ನು ಆಗದ ದುಃಖ ॥ ೩ ॥ ಗತಿನೀನೆಯೆಂದು ಹಂಗಿನ ಕೂಳಿನ ದುಃಖ ॥ ಪ್ರತಿಉಪಕಾರ ಮಾಡದ ದುಃಖ ॥ ಶ್ರುತಿವಚನಗಳಿಲ್ಲದೆ ಇಹವಲಿ ದುಃಖ ॥ ಅತಿ ಸ್ನೇಹದವರನ್ನು ಬಿಡುವದು ದುಃಖ ॥ ೪ ॥ ಇಂತಿಹ ಸುಖದುಃಖ ದೇಹಗೇಹವೇ ಸಾಕು ಶಂಕರನೊಡೆಯ ಶ್ರೀಹರಿಯೇ ಕಾಯೋ ॥ ಸಂತತ ಸಿರಿಪುರಂದರ ವಿಠಲಲಕ್ಷ್ಮೀಕಾಂತನ ನೆನೆದು ನಿಶ್ಚಿಂತನಾಗು ಮನವೇ ॥ ೫ ॥

7. ಏನು ಮಾಡಿದರೇನುಭವ ಹಿಂಗದು ॥ ದಾನವಾಂತಕ ನಿನ್ನ ದಯವಾಗದನಕಾ ॥ ಪ ॥ ಅರುಣೋದಯದಲೆದ್ದು ॥ ಅತಿಸ್ನಾನಗಳಮಾಡಿ ಬೆರಳೆಣಿಸಿದೆ ॥ ಆದರ ನಿಜವರಿಯದೆ ಚರಣಸಾಷ್ಟಾಂಗವನು ಮಾಡಿನಾದಣಿದೆನೊ ಹರಿ ನಿನ್ನ ಕರುಣಾಕಟಾಕ್ಷವಾಗದನಕಾ ॥ ೧ ॥ ಶೃತಿಶಾಸ್ತ್ರಪೌರಾಣಗಳನೋದಿ ಬೆಂಡಾದೆ । ಗತಿಯಪಡೆವೆನೆಂದು । ಕಾಯದಂಡಿಸಿದೆನೊ ॥ ರತಿಪತಿಪಿತ ನಿನ್ನ ದಯವಾಗದನಕಾ ॥ ೨ ॥ ಧ್ಯಾನವನು ಮಾಡಿದೆನು ಮೌನವನು ತಾಳಿದೆನು ॥ ಮಹಾನುಪುರುಷಾರ್ಥಕೆ ಮನವನಿಕ್ಕಿ ॥ ಅನಾಥಬಂಧು ಶ್ರೀಪುರಂದರಾವಿಠಲನ್ನಾ ॥ ಧ್ಯಾನಿಸುವರೊಡಗೂಡಿ ನೆಲೆಗಾಣದನಕಾ ॥ ೩ ॥

॥ ಪದ ॥

8. ಏನು ಬಂದ್ಯೋಜೀವವೇ ವ್ಯರ್ಥವಾಗಿ ಜ್ಞಾನದಿಂದಲಿ ತಿಳಿದು ಪರಗತಿಯನುಕೂಡು ॥ ಪ ॥ ದಾನವಮಾಡಲಿಲ್ಲಾ ಧರ್ಮವಮಾಡಲಿಲ್ಲಾ ॥ ದೀನನುಡಿಗಳಿಲ್ಲಾ ದಾಕ್ಷಿಣ್ಯವಿಲ್ಲಾ॥ ಜ್ಞಾನಿದಾಸಜನರಾಸಂಘದೊಳಿರಲಿಲ್ಲ ಮನನಿರ್ಮಲದಿಕ್ಷಣವು ಇರಲಿಲ್ಲಾ ॥ ೧ ॥ ಸತಿಪುರುಷರಾಗಿ ಸಂತೋಷದಿಂದಿರಲಿಲ್ಲ ॥ ಯತಿಯಾಗಿ ತೀರ್ಥಯಾತ್ರೆಮಾಡಲಿಲ್ಲ॥ ಶ್ರುತಿಪುರಾಣಗಳನ್ನು ಕಿವಿಗೊಟ್ಟು ಕೇಳಲಿಲ್ಲಾ ॥ ವೃತಕಾಲಬಂದು ದಿನವ್ಯರ್ಥಹೋಯ್ತಲ್ಲಾ ॥ ೨ ॥ ಉಂಡುಟ್ಟುಸುಖವಿಲ್ಲಾ ಕಾಯಪರಿಣಾಮವಿಲ್ಲ ॥ ಕೊಂಡುಕೊಟ್ಟು ಪರಸೇವೆ ಬಿಡಲಿಲ್ಲಾ ॥ ದಂದುಗಸಂಸಾರ ಮಾಯಪಾಶಕೊಳಗಾದಿ ತಂದೆ ಪುರಂದರ ವಿಠಲನನೆನೆಕಂಡ್ಯಾ ॥ ೩ ॥

9. ಏನು ಗತಿಯೋ ಎನಗೆ ಎಲೋ ಶ್ರೀಹರಿಯೋ ॥ ಪ ॥ ನಾನಿನ್ನ ನೆನೆಯದೆ ಮೋಸಹೋದೆನಲ್ಲೊ॥ಅ.ಪ॥ ಅಂಕದಲ್ಲಾಡುವ ಶಿಶುವಿನಾ ಮುದ್ದಾದ ಇಂಪಿನಾನುಡಿಗಳನು ಕೇಳುತಲಿನಾ ॥ ಕಿಂಕಿಣಿ ಧ್ವನಿಯಿಂದ ಕಿವಿಗೊಟ್ಟುಕೇಳುವಾ ॥ ಮಂಕಾದ ಹರಿಣನಂತಾದೆನಲ್ಲೋ ಹರೀ ॥ ೧ ॥ ತೊಡೆಕುಚಗುಹ್ಯಸೌಂದರ್ಯಕೊಂಡಾಡುತ॥ಮಡದಿಯ ಅಂಗಸಂಗವಮಾಡುತಾ॥ ಒಡಲಕಿಚ್ಚಿಗೆಪೋಗಿ ಬಡಿಗಲ್ಲಕೆಡಹಿಕೊಂ॥ ಡಡಗಿದ ಮೂಷಿಕನಂತಾದೆನಲ್ಲೋ ॥೨॥ ಪರವನಿತೆಯರ ಲಾವಣ್ಯಲೋಚನದಿಗೋ॥ ಚರಿಸಲು ಅವಳ ಕೂಟಕ್ಕೆ ಪೆರತು ॥ ಉರಿವಕಿಚ್ಚನುಹಿತವೆಂದು ಬಂದದರೊಳು ॥ ಎರಗಿದಾ ಪತಂಗದಂತಾದೆನಲ್ಲೊಹರೀ ॥ ೩ ॥ ನಲೆನಿಜವೃತ್ತಿಯಾ ಜರಿದುಪರಾನ್ನವಾ ॥ ನಲಿ

ದುಂಡುಹೊಟ್ಟೆಯೂ ಹೊರೆಯುತಲೀ ॥ ಬಲೆಯಾತುದಿಯಲಿದ್ದ ಮಾಂಸಕ್ಕೆ ಮೋಹದಿ ॥ ಸಿಲುಕಿದಾ ಮೀನಿನಂತಾದೆನಲ್ಲೋ ಹರಿ ॥ ೪ ॥ ಲಂಪಟನಾಗಿ ನಾರಿಯರ ಮುಖಾಬ್ಜದಾ ॥ ಇಂಪಾನುಕಣ್ಣಿಂದ ನಾನೋಡುತಾ ॥ ಸಂಪಿಗೆ ಅರಳಿನಾಮೇಲೆರಗಿ ಇರುವಂಥಾ ॥ ಸಂಪಾಳಿಆಳಿಗಳಂತಾದೆನಲ್ಲೋ ಹರೀ ॥ ೫ ॥ ಇಂತು ಪಂಚೇಂದ್ರಿಯಂಗಳು ಒಳಹೊರಗೆ ॥ ಸಂತತ ಎನ್ನನುಎಳವುತಿರೆ ॥ ಸಂತೈಸಲಾಗದೆ ಸ್ಮರನವರೊಶವಾದ ॥ ಕಾಂತೆಯರರಸನಾನಾದೆನಲ್ಲೋ ಹರೀ ॥ ೬ ॥ ಮಂದನು ನಾನು ಮದನನಗೆಲಿದುಪಂಚ ॥ ಇಂದ್ರಿಯಂಗಳ ಜಯಿಸಲಾರೇ ॥ ತಂದೆ ಶ್ರೀ ಪುರಂದರ ವಿಠಲನೀನೊಲಿದೊಡೆ ಹಿಂದಿನಾಭವಬಂಧ ಬಾರದಲ್ಲೋ ಹರೀ ॥ ೭ ॥

10. ಏಕೆನ್ನೊಳಿಂತು ಕೃಪೆಯಿಲ್ಲ ಹರಿಯೋ ॥ ಸಾಕುಮಾಡದೆ ಕಾಯೋ ಭವದಿ ಬಳಲಿದೆನು ॥ ಪ ॥ ಕಂದರ್ಪಬಾಧೆಯಿಂ ಮಾನಿನಿಯ ರೊಶವಾಗಿ ॥ ಮಂದಮತಿಯಿಂದ ಬಲುಮರುಳಾದೆನು ॥ ಸಂದಿತ್ತೈಯೌವನವು ಬುದ್ಧಿಬಂದಿತು ಈಗ ॥ ಸಂದೇಹಬಡದೆ ನೀ ಕರುಣಿಸೈ ಎನ್ನ ॥ ೧ ॥ ಹೆಂಡತಿಯು ಕಡೆಗಣ್ಣಿನಿಂದ ನೋಡುವಳೀಗ ॥ ಹಿಂಡುಮಕ್ಕಳು ಎನ್ನತಿನ್ನುತಿಹರೋ॥ ಮುಂಡಮೋಚಿದೆ ನಾನು ಇನ್ನಾರು ಗತಿ ಎನಗೆ ॥ ಪುಂಡರೀಕಾಕ್ಷನೀ ಪಾಲಿಸೈ ತಂದೇ ॥ ೨ ॥ ಅಟ್ಟ ಮೇಲೊಲೆಯುರಿಯುವಂತೆ ಹರಿ ಎನಗೀಗ॥ ಕೆಟ್ಟಮೋಲೆಮತಿಯು ಬಂದಿತಯ್ಯ ॥ ನೆಟ್ಟನೆ ಪುರಂದರ ವಿಠಲನೆ ಕೈಬಿಡದೆ ॥ ದೃಷ್ಟಿಯಲಿ ನೋಡಿ ಪರಿಪಾಲಿಸೈ ಎನ್ನ ॥ ೩ ॥

ರಾಗ—ಮುಖಾರಿ ಝಂಪೆ ತಾಳ.

11. ಭಂಡನಾದೆನು ನಾನೀ ಸಂಸಾರದಿ ॥ ಕಂಡು ಕಾಣದ ಹಾಗೆ ಇರಬಹುದೆ ಹರಿ ॥ ಪ ॥ ಕಂಡಕಲ್ಲುಗಳಿಗೆ ಕೈಮುಗಿದು ಸಾಕಾದೆ॥ ದಿಂಡೆಗಾರರ ಮನೆಗೆ ಬಲುತಿರುಗಿದೆ ॥ ಶುಂಡಾಲನಂತೆನ್ನ ॥ ಮತಿಮಂದವಾಯಿತೈ॥ ಪುಂಡರೀಕಾಕ್ಷ ನೀ ಕರುಣಿಸೈಬೇಗ ॥೧॥ ನಾನಾ ವ್ರತಂಗಳನು ನಾಮಾಡಿ ಬಳಲಿದೆನು ॥ ಏನಾದರೂ ಫಲವಕಾಣದಾದೇ॥ ಆ ನಾಡು ಈ ನಾಡು ಸುತ್ತಿಬಲುಮರುಳಾದೆ ॥ ಇನ್ನಾದರೂ ಕೃಪೆಯ ಮಾಡಯ್ಯಹರಿಯೇ ॥ ೨ ॥ ಬುದ್ಧಿಹೀನರ ಮಾತು ಕೇಳಿನಾ ಮೋಸಹೋದೆ ॥ ಶುದ್ಧಿಯಿಲ್ಲದೆ ಮನವು ಕೆಟ್ಟು

ಹೋಯ್ತು ॥ ಮಧ್ವನುತ ಶ್ರೀ ಪುರಂದರ ವಿಠಲತತ್ವದ ॥ ಸಿದ್ಧಿಯನು ದಯ ಗೈದು ॥ ಉಳುಹುನೀತಂದೆ ॥ ೩ ॥

ರಾಗ—ಮುಖಾರಿ ಝಂಪೆತಾಳ.

12. ಎಂತಹುದೊ ನಿನ್ನಯ ಭಕುತಿ ಎನಗೆ॥ ಶ್ರೀಕಾಂತ ನಿನ್ನಯಬಲು ಮೆಯಿಲ್ಲದ ಮೂಢಾತ್ಮನಿಗೆ ॥ ಪ ॥ ಹಿಂದೆ ಮಾಡಿದ ಸುಕೃತಫಲವು ಮೊದಲಿನಿತಿಲ್ಲ ॥ ಇಂದು ಬಂದೆಡೆ ಒಳ್ಳೇ ಮತಿಯ ಕೊಡಲಿಲ್ಲ ॥ ಸಂದವಯಸನು ತಿಳಿಯೊ ಕುಂದುತಿದೆ ಎನ್ನ ಮನ । ದಂಧಕಾರವ ಬಿಡಿಸಿ ಹೊಂದಿಸು ಜ್ಞಾನವನು ॥ ೧ ॥ ವೇದಶಾಸ್ತ್ರವು ಶಬ್ದ ತರ್ಕ ಮೀಮಾಂಸಗಳ । ಓದಿದವನಲ್ಲ ॥ ನಿನ್ನಯ ಭಕುತಿಗಧಿಕ ॥ ವಾದ ಇನ್ನೊಂದನುಸುರುವೆನಾಮುನ್ನ ಸಂ ॥ ವಾದಿಸುವ ಭಕುತಿ ಇನ್ನೆಂತಿಹುದೊ ದೇವಾ ॥೨॥ ಹುಟ್ಟಿದವೊದಲುಗೊಂಡು ಇಂದು ಪರಿಯಂತರವು॥ ಭ್ರಷ್ಟನಾಗಿ ಪರರ ಸೇವೆಲಿಹೆನು ॥ ಇಷ್ಟಲ್ಲದಿನ್ನೆನಗೆತೃಪ್ತಿ ಇನ್ನೆಂಥಹುದೀ ಕಷ್ಟಶರೀರದೊಳು ತೊಳಲಲಾರೆನು ಹರಿಯೇ ॥೩॥ ನರಜನ್ಮವೆಂಬ ಪಾತಕದ ಪಂಜರದೊಳಗೆ ॥ ಸ್ಥಿರ ಅಹಂಕೃತಿ ಜೀವನವ ॥ ನಿರ್ವಿಸಿ॥ ವರಮಾತಪಿತರಲಿನಾಗ್ರಜಾನುಜರೆಂಬ॥ ಉರಿಕಾಲುಕ್ಷಯಯೆಂಬ ಸರಿಗಳ ವಂದಿಸುವೆನು ॥೪॥ ಇನಿತುಪರಿಯಲಿ ನಾನು ॥ ಹಲುಬಿದೆ ನೀನು ॥ ಸುಮ್ಮನಿದ್ದಡೆ॥ ಬಹು ಅಪಕೀರ್ತಿಯು ॥ ನಿನ್ನ ದಾಸಗೊಲಿದು ಕೊಡು ಮನದಿಷ್ಟ ॥ ಕನಕಾಡಿಯೊಳು ನೆಲಸಿದಾದಿ ಕೇಶವ ವೆಂಕಟ ॥ ೫ ॥

ರಾಗ—ಧನಾಸಿ ಅಟತಾಳ.

13. ಯಮದೂತರಿನ್ನೇನು ಮಾಡುವರು ಪೇಳೆಲೋ ॥ ರಮೆಯರಸರಘುನಾಥ ನಿನ್ನ ವರಿಗೆ ಈ ಪರಿ ॥ಅ.ಪ॥ ಮಂಡಲದೊಳಗೊಬ್ಬ ಜಾರಸ್ತ್ರೀಯಳು ತನ್ನ ॥ ಗಂಡನರಿಕೆಯಿಂದ ವ್ಯಭಿಚಾರಗೈಯೆ ॥ ಮಂಡಲಸತಿಶೋಧಿಸಿ ಹಿಡಿದೆಳತಂದು ॥ ದಂಡುಮಾಡಿದರೆ ಜಿವರುವಳೆ ಕೇಳೆಲೋ ಹರಿ ॥ ೧ ॥ ಕಳವು ಮಾಡುತ ಗ್ರಾಮದೊಡೆಯಗೊಪ್ಪಿಸಿಕೊಟ್ಟ ॥ ಕಳಭಂಟ ॥ ತನ್ನ ಸುಖಗೊಳಲು ಆವನು ॥ ಕಳವು ಮಾಡಿದನೆಂದು ಹಿಡತಂದು ಗ್ರಾಮದೊಳು ತಳವಾರೇನು ಮಾಡುವರು ಕೇಳೆಲೋ ಹರಿ ॥೨॥ ಮನವಚನದಲ್ಲಿ ಮಾಡಿದ ಪುಣ್ಯಪಾಪಗಳ ನಿನಗರ್ಪಿಸುವೆ ॥ ಕಾಲಾಕಾಲದಲಿ॥ ಘನಕೃಷ್ಣಾಂಬುಧಿಕಾಗಿ ನೆಲೆಯಾದಿ ಕೇಶವ । ಎನಗೊಬ್ಬರೇನು ಮಾಡುವರು ಕೇಳೆಲೋಹರಿ ॥ ೩ ॥

ರಾಗ—ಮುಖಾರಿ ಝುಂಪೆತಾಳ.

14. ಸಾಕು ಸಾಕಿನ್ನು ಸಂಸಾರ ಸುಖವು ॥ಪ॥ ಶ್ರೀಕಾಂತನೀನೊಲಿದು ಕರುಣಿಸೈ ಕೃಷ್ಣ ॥ಅ.ಪ॥ ಉದಿಸಿದವು ಪಂಚಭೂತಗಳಿಂದ ಔಷಧವು॥ ಉದಿಸಿದವು ಔಷಧಗಳಿಂದನ್ನವು ॥ ಉದಿಸಿದವು ಅನ್ನದಿಂ ಶುಕ್ಲ ಶೋಣಿತವೆರಡು ಉದಿಸಿದವು ಸತಿಪುರಷರೀರ್ವರೊಳು ಹರಿಯೇ । ೧ ॥ ಸತಿಪುರುಷರೊಂದಾಗಿ ರತಿಕ್ರೀಡೆಗಳ ಮಾಡೆ ॥ ಪತನವಾದಿಂದ್ರಿಯುವ ಹೊಲೆದೇಹದಿ । ಋತು ಉದರದೊಳೆರಡು ಏಕದಲಿ ಸಂಧಿಸಲು ॥ ಗತಿಸಿದದು ಒಂದು ಮಾಸ ಈರ್ವರೊಳು ಹರಿಯೇ ॥ ೨ ॥ ಮಾಸವೆರಡರಲಿ ಶಿರ ॥ ಮಾಸ ಮೂರರೊಳಂಗ । ಮಾಸ ನಾಲ್ಕರಲಿ ಚರ್ಮದ ಹೊದ್ದಿಕೆ ॥ ಮಾಸವೈದಾರರಲಿ ನಖರೋಮರಂಧ್ರಗಳು ॥ ಮಾಸವೇಳರಲಿ ಹಸಿವುತೃಷೆ ಶ್ರೀಹರಿಯೇ ॥ ೩ ॥ ತಿಂಗಳೆಂಟರಲಿ ಪೂರ್ವಾನುಭವ ಕರ್ಮಗಳು । ಅಂಗವೆಲ್ಲವ ತಿಳಿದು ಅರಿಕೆಯಿಂದಾ॥ ಅಂಗನೆಯುರುದರಕಿನ್ನೆಂದಿಗೂ ಬಾರೆನೆಂದು । ಹಿಂಗದಲೆ ಧ್ಯಾನಿಸುತ ಕಳೆದೆನೋ ದಿನವಾ ॥ ೪ ॥ ಇನಿತು ನವಮಾಸ ಮಲ ಮೂತ್ರದಾ ಗರ್ಭದಲಿ । ಸಿಲುಕಿರಲು ನರಕದಾಯಾಸದೊಳಗೆ ॥ ಘನ ಮಾರುತನ ಯೋಗದಿಂ ಆರುಹಲಲ್ಲಿಗೆ । ಜನಿಸಿದೆನು ಮೃತಭಾವದಲಿ ಬಂದು ನೊಂದೆ ॥ ೫ ॥ ಧರೆಯಮೇಲುದಿಸಿ ಬಹು ವಿಷ್ಣುಮಾಯಕೆ ಸಿಲುಕಿ ಪರವಶದೊಳಿರಲು ಬೇಸರದಿ ವೇಗಾ ॥ ಭರದಿ ಕಣ್ದೆರೆದು ಘೋಳಿಟ್ಟು ಪ್ರಪಂಚವನು ಸ್ಥಿರವೆಂದು ನಂಬಿ ನಾ ಮರುಳಾದೆ ಹರಿಯೇ ॥ ೬ ॥ ಶಿಶುತನದೊಳಿರಲು ನೊಣ ಮುಸುಕಲದರಿಂದಳಲು । ಹಸಿದನಿವನೆಂದು ಸ್ತನವನೆ ಕೊಡುವರು॥ ಹಸಿವ್‌ತೃಷೆಗಳಿಂದಳಲು ಹಾಡಿ ತೂಗುತಲಿಹರು । ಪಶುವಂತೆ ಶಿಶುತನದೊಳಿರಲಾರೆ ಕೃಷ್ಣ ॥ ೭ ॥ ಬಾಲ್ಯದಲಿ ಕೆಲವುದಿನ ಬರಿದೆ ಹೋಯಿತು ಹೊತ್ತು । ಮೇಲೆ ಅಳುತಲಿ ವಿದ್ಯೆಗಳನು ಕಲಿತು ॥ ಮೇಲೆ ಯೌವನ ಬರಲು ತನು ಮೂಲವನು ಮರೆತು । ಬಾಲೆಯರ ಬಯಸಿ ನಾ ಮರುಳಾದೆನಯ್ಯ ॥ ೮ ॥ ಜ್ವರದಮೇಲತಿಸಾರ ಬಂದೊದಗುವಂದದಲಿ । ನಿರುತ ಕಾಮ ಕ್ರೋಧ ವಿಶಯಂಗಳಲ್ಲೀ ॥ ತರುಣಿಯರಿಗೊಡವೆ ಭಂಗಾರ ಬೇಕೆಂದೆನುತ । ಪರಸೇವೆಯೊಳು ನಾ ಕಡುನೊಂದೆನಯ್ಯ ॥ ೯ ॥ ದಿಟ್ಟತನದಲಿ ಘಳಿಸಿ ತರುವಾಗ ಸತಿಸುತರು । ಕಟ್ಟಕಾಯ್ವರು ತನುವು ಬಿಟ್ಟಬಳಿಕಾ ॥ ಕುಟ್ಟಿಕೊಂಡಳುತ ಘೋಳಿಡುತ ಬಹುಬಾಧೆಯಲಿ । ಮುಟ್ಟರಂಜುತ ದೂರ

ದಿಟ್ಟು ಸುಡುವರೋ ॥ ೧೦ ॥ ದೇವನೇ ನಾನಿನ್ನು ಯೋನಿಮಾರ್ಗದ ಒಳಗೆ ಈ ವಿಧದಿ ಭವಣೆಬಿಡಲಾರೆ ಬಹಳ । ಕಾವಕರುಣಿಯೆ ನಮ್ಮ ಪುರಂದರ ವಿಠಲನೆ । ಭಾವಭಕುತಿಯ ಕೊಟ್ಟು ರಕ್ಷಿಸೋ ಹರಿಯೇ ॥ ೧೧ ॥ ಸಾಕು ಸಾಕಿನ್ನು ಸಂಸಾರಸುಖವು ॥

ರಾಗ ಆನಂದ ಭೈರವಿ ಅಟತಾಳ.

15. ಹ್ಯಾಗೆ ಉದ್ಧಾರ ಮಾಡ್ಯಾನು । ಶ್ರೀ ಹರಿ । ಹೀಗೆ ದಿನಗಳೆಂದಳೆದವನು ॥ ಪ ॥ ರಾಗದಿಂದಲಿ ಭಾಗವತರಿಗೆ । ಬಾಗದೆ ಶಿರ ಹೋಗುವಾತನ ॥ ಅ.ಪ ॥ ಅರುಣ ಉದಯದೊಳೆದ್ದು । ಹರಿಯ ನೆನೆಯದೆ ಗೊಡ್ಡು ॥ ಹರಟೆಗೆ ಹೊತ್ತು ಏರಿಸಿದವನ । ಶ್ರೀ ತುಳಸಿಗೆ ನೀರೆರೆದು ನಿರಂತರ । ವೃತ್ತಿಗೆ ಫಣಿಯಲಿ ಧರಿಸಿದವನ । ಮರೆತು ಪ್ರಾತಃಸ್ನಾನ ಮಾಡದೆ ಮನೆ ಮನೆ ತೆರನಾಗಿ ಬೆಸಗೊಂಡು ತಿಂಬುವನ । ವರ ಮಧ್ವಶಾಸ್ತ್ರದಲಿ ನಿಲಿಸವೆ ಬುದ್ಧಿಯ । ನಿರುತದಿ ಮತಿಹೀನನಾದವನ ॥ ೧ ॥ ಗುರುಹಿರಿಯರ ಸೇವೆ ಜರಿದು ನಿರಂತರ ॥ ಪರನಿಂದೆ ಮಾಡಿ ನಗುತಿಪ್ಪನ । ಪರಹೆಣ್ಣು ಪರ ಹೊನ್ನು ಕರಗತವಾಯ್ತೆಂದು । ಪರಲೋಕಭಯ ಬಿಟ್ಟು ತಿರುಗುವನ। ತರುಣಿಮಕ್ಕಳೆಂದು ವರಭಾಸದಲಿ ಬಂದು ॥ ಪರದ್ರವ್ಯದಿಂದ ವಂಚನೆಕ್ಷುದ್ರಮಾಳ್ಪನ ॥ ೨ ॥ ಉಡಲಿಲ್ಲ ಉಣಲಿಲ್ಲ ಮಾಡಿಲ್ಲ ಹರಿಸೇವೆ । ಕೂಡಿಲ್ಲಸಾಧುಸಜ್ಜನರೊಡನೆ । ಕೊಡಲಿಲ್ಲ ದಾನ ಪಡಲಿಲ್ಲ ಪುಣ್ಯ ॥ ಕಡುಮೂರ್ಖ ವಿಷಯಲಾಲಿತನಾಗಿ । ಒಡೆಯ ಪುರಂದರ ವಿಠಲನ್ನ ಚರಣಕೆ । ಅಡಿಗಳಿಗೆರಗದೆ ಕಡೆಗೆ ಕೆಟ್ಟಂತೆಲ್ಲ ॥ ಹ್ಯಾಗೆ ಉದ್ಧಾರ ಮಾಡ್ಯಾನು ॥ ೩ ॥

ರಾಗ ಕಾಂಬೋಧಿ ಝಂಪೆತಾಳ

16. ಎಂತು ನೋಡಿದರು ಚಿಂತೆ । ಈ ಒಡಲು ನಿ । ಶ್ಚಿಂತರಾಗಿಹರೊಬ್ಬರನು ಕಾಣೆ ॥ ಪ ॥ ಬ್ರಹ್ಮನಿಗೆ ಶಿರಹೋಗಿ ಬಾಡಿಬಳಲುವ ಚಿಂತೆ । ಮುನ್ನ ಮಾರುತಿಗೆ ಕಪಿಯಾದ ಚಿಂತೆ । ಮನ್ಮಥಗೆ ತನುಸುಟ್ಟು ಬೂದಿಯಾಗಿಹ ಚಿಂತೆ । ಕಣ್ಣು ಮೂರುಳ್ಳವಗೆ ತಿರಿದುಂಬ ಚಿಂತೆ ॥ ೧ ॥ ಕಾಮಧೇನುವಿಗೆ ಕರದೊಯ್ವರೆಂಬ ಚಿಂತೆ । ಕಾಮಿನಿಯರಿಗೆ ಒಡವೆವಸ್ತ್ರ ಚಿಂತೆ । ಸೀಮೆಯಾಳುವ ಧೊರೆಗೆ ಪರಧೊರೆಗಳ ಚಿಂತೆ । ಪಾಮರನರಗೆ ಬರಹ ಬರದಿರುವ ಚಿಂತೆ ॥ ೨ ॥ ಧರ್ಮಾತ್ಮರೆಲ್ಲರಿಗೆ ದೀನಜನರಾಚಿಂತೆ ॥ ಕರ್ಮಾತ್ಮ

ರೆಲ್ಲರಿಗೆ ಕೆಡುವ ಚಿಂತೆ॥ ವರ್ಣಬೆಳಸುವರಿಗೆ ವೈರಿಕೊಲ್ಲುವಚಿಂತೆ॥ ಬ್ರಾಹ್ಮಣಗೆ ಸತತ ವೃಷ್ಟಾನ್ನಚಿಂತೆ ॥ ೩ ॥ ಭಕ್ತರಿಗೆ ಗುರುವಿನೊಳು ಮುಕ್ತಿಬೇಡುವಚಿಂತೆ ॥ ಮುಕ್ತರಿಗೆ ಪರಮಾತ್ಮ ದೊರೆವ ಚಿಂತೆ ॥ ಯುಕ್ತಿಬಲ್ಲವಗೆ ವಿವೇಕ ಆಡುವಚಿಂತೆ । ವಿರಕ್ತನಾದವಗೆ ಕಾಮುಸುಡುವ ಚಿಂತೆ ॥೪॥ ಕ್ಷುದ್ರ ರಕ್ಕಸರಿಗೆಲ್ಲರನು ತಿನ್ನುವ ಚಿಂತೆ । ನಿದ್ರೆಬಾರದವನಿಗೆ ರಾತ್ರಿಚಿಂತೆ ॥ ಕದ್ದು ತರಲ್ಹೋದವಗೆ ಕೋಳಿಕೂಗುವ ಚಿಂತೆ॥ ಮುದ್ದು ಪುರಂದರ ವಿಠಲನೊಬ್ಬನೇ ನಿಶ್ಚಿಂತ ॥ ೫ ॥ ಎಂತು ನೋಡಿದರು ಚಿಂತೆ ॥

ರಾಗ—ಪಂತುವರಾಳಿ ಆದಿತಾಳ.

17. ಆದದ್ದೆಲ್ಲ ಒಳಿತೇ ಆಯಿತು ॥ ಪ ॥ ನಮ್ಮ ಶ್ರೀಧರನ್ನ ಸೇವೆಗೆ ॥ ಸಾಧನ ಸಂಪತ್ತಾಯಿತು ॥ಅ.ಪ॥ ದಂಡಿಗೆ ಬೆತ್ತ ಹಿಡಿಯುವದಕ್ಕೆ॥ ಮುಂಡೆ ಮಾಚಿನಾಚುತಿದ್ದೆ॥ ಹೆಂಡತಿಸಂತತಿ ಸಾವಿರವಾಗಲು ॥ ದಂಡಿಗೆಬೆತ್ತಹಿಡಿಸಿದಳಯ್ಯಾ ॥ ೧ ॥ ಗೋಪಾಲ ಬುಟ್ಟಿಹಿಡಿಯುವದಕ್ಕೆ ಭೂಪತಿಯಂತೆ ಗರ್ವಿಸುತಿದ್ದೆ ॥ ಆಪತ್ತಿಕುಲ ಸಾವಿರವಾಗಲು ॥ ಗೋಪಾಲ ಬುಟ್ಟಿಹಿಡಿಸಿದಳಯ್ಯಾ ॥ ೨ ॥ ತುಳಸಿಮಾಲೆಯ ಹಾಕುವುದಕ್ಕೆ॥ ಅರಸನಾಗಿ ನಾಚುತಿದ್ದೆ॥ ಸರಸಿಜಾಕ್ಷ ಪುರಂದರ ವಿಠಲನ ॥ ದಾಸಗೆ ಮಾಲೆ ಹಾಕಿಸಿದಳು ॥ ೩ ॥

ರಾಗ—ಧನಾಸಿ ಆದಿತಾಳ.

18. ಕರುಣಿಸು ನರಹರಿ ಹರಿಗೋವಿಂದ ॥ ನರಜನರಿಗೆ ಮೆಚ್ಚಿಸಲಿಹೋ ಮುಕುಂದ ॥ ಪ ॥ ಮಾತುಗಳಾಡದೆ ಮೌನದಿಂದಿದ್ದರೇ ॥ ಭೂತಬಡದವನೆಂದು ಕರಿಯುವರೋ ॥ ಚಾತುರ್ಯದಿಂದಲಿ ಮಾತುಗಳಾಡಲು ॥ ಪಿತ್ತೇರಿ ಬಲುಬಾಯಿಬಡಕನೆಂಬುವರಯ್ಯಾ ॥೧॥ ಬಲುಚೆನ್ನಿಗತನವು ತಾನು ಮಾಡಲು ॥ ಬಲು ಹೆಮ್ಮಗನೆಂದು ಬೈಯುವರೋ ॥ ಸುಲಭದಿಂದ ನಿಗರ್ವಿಯಾಗಿದ್ದರೆ ॥ ಕಲಿಯುಗದಲಿ ಮಂದಮತಿಯೆಂಬುವರಯ್ಯಾ ॥ ೨ ॥ ಮಡಿಯೆಂದು ನೇಮವ ಮಾಡುತಲಿದ್ದರೆ ಮಡಿಯುವನೆಂದು ಬಯ್ಯುವರಯ್ಯಾ ॥ ಮಡಿನೇಮ ಜಪತಪ ಬಿಟ್ಟು ತಿರುಗಲಾಗಿ । ನಡತೆ ಹೀನನೆಂದು ನಿಂದಿಸುತಿಹರೋ ॥ ೩ ॥ ನಿಷ್ಟೆಲಿ ಒಪ್ಪೊತ್ತೂಟವನುಂಡರೆ ನಿಷ್ಟೆಯುತನ ಸುಟ್ಟಿತೆಂಬೋರು । ಘಟ್ಯಾಗಿ ಎರಡುಮೂರು ಭಾರಿಉಂಡರೆ। ಹೊಟ್ಟೆಹೊರಕನೆಂದು ಬೈಯ್ಯುವರಯ್ಯಾ ॥ ೪ ॥ ನರಲೋಕದೊಳಗಿನ್ನು ಪುಟ್ಟಸದಿರು ನಿನ್ನ ॥

ಮರೆಯ ಹೊಕ್ಕೆನೋ ಮೋಕ್ಷದಾಯಕನೇ ॥ ಅರವಿಂದನಯನ ಶ್ರೀ ಪುರಂದರ ವಿಠಲ ಕರುಣದಿಂದಲಿ ನೀ ರಕ್ಷಿಸೋ ಎನ್ನಾ ॥ ೫ ॥

ರಾಗ—ಕಾಂಬೋಧಿ—ಝಂಪೆತಾಳ.

I9. ಗತಿಯಾವದೆನಗೆ ಶ್ರೀ ಪತಿಯೇ ಪೇಳೋ ॥ ಮತಿಗೆಟ್ಟು ಪ್ರತಿದಿನದಿ ಸತಿಯರನು ಬಯಸುವೆನು ॥ ಪ ॥ ಮರುಳು ಬುದ್ಧಿಗಳಿಂದ ಕರಸೂಚನೆಯ ಮಾಡಿ ತರುಣಿಯರ ತಕ್ಕೈಸಿ ಸರಸವಾಡಿ ॥ ಇರುಳು ಹಗಲು ಹೀಗೆ ದುರುಳುತನದಲಿತಿರುಗಿ ಧರೆಯೊಳಗೆ ನಾನೊಬ್ಬ ಹರಿದಾಸನೆನಿಸುವೆನು ॥೧॥ ನಾಚಿಕಿಲ್ಲದಲೆ ಬಲು ನೀಚರಲ್ಲಿಗೆ ಪೋಗಿ ಯಾಚಿಸುವೆ ಸನ್ಮಾರ್ಗ ಯೋಚಿಸದಲೇ ॥ ಆಚತುರ್ದಶದವರು ಪದಾರಭ್ಯ ಈ ವಿಧದಿ ಆಚರಿಪೆನೈ ಸವ್ಯಸಾಚಿ ಸಖ ಶ್ರೀ ಕೃಷ್ಣ ॥ ೨ ॥ ನಾನು ನನ್ನದು ಎಂಬ ಹೀನಬುದ್ಧಿಗಳಿಂದ ಜ್ಞಾನ ಶೂನ್ಯನಾದೆ ದಿನಬಂಧೋ ॥ ಸಾನುರಾಗದಿ ಒಲಿದು ನಾನಾ ಪ್ರಕಾರದಲಿ ನೀನೆ ಕರುಣಿಸು ಹರಿಯೆ ಜ್ಞಾನಪರಿಪೂರ್ಣ ॥ ೩ ॥ ಅಂಬುಜಾಕ್ಷನೆ ನಿನ್ನ ನಂಬಿ ಭಜಿಸುವರ ಪಾದಾಂಬುರುಹಕೆರಗದಲೆ ಸಂಭ್ರಮದಲೀ ॥ ತಂಬೂರಿಯನು ಪಿಡಿದು ಡಂಭತನದಲಿ ನಾನು ಶಂಬರಾರಿಗೆ ಸಿಲ್ಕಿ ಬೆಂಬಿಡದೆ ಚಾಲ್ವರಿದೇ ॥ ೪ ॥ ಪರಮೇಷ್ಠಿಯಾರಭ್ಯ ತೃಣಜೀವಪರಿಯಂತ ತರತಮ ತಿಳಿದು ತರುವಾಯದಲಿ ಗುರುಹಿರಿಯರಲಿ ಭಕುತಿ ವೈರಾಗ್ಯವನು ಕೊಟ್ಟು ಗುರು ಜಗನ್ನಾಥ ವಿಠಲನಿರುತ ಪೊರೆಯದಿರೇ ॥ ೫ ॥

10. ಮೃತ್ಯು.

॥ ಪದ ॥

1. ಡಿಂಬದಲ್ಲಿ ಇರುವ ಜೀವ । ಕಾಂಭ ಸೂತ್ರದ ಗೊಂಬೆಯಂತೆ ॥ ಎಂದಿಗಾದರೊಂದು ದಿನ ಸಾವು ತಪ್ಪದು ॥ ಪ ॥ ಹುಟ್ಟುತೇನು ತರಲಿಲ್ಲಾ ॥ ಸಾವುತೇನೊಂದೊಯ್ಯೊದಿಲ್ಲಾ ಸುಟ್ಟು ಸುಟ್ಟು ಸುಣ್ಣದ್ದರಳು ಆಯಿತೀ ದೇಹಾ ॥ ೧ ॥ ಹೊಟ್ಟೆ ಬಹು ಕೆಟ್ಟದೆಂದು ಎಷ್ಟು ಕಷ್ಟ ಮಾಡಿ ಪ್ರಾಣ । ಬಿಟ್ಟು ಹೋಗುವಾಗ ಗೇಣು । ಬಟ್ಟೆ ದೊರೆಯದು ॥ ೨ ॥ ಹತ್ತು ಎಂಟು

ಲಕ್ಷ ಘಳಿಸಿ । ಮತ್ತೆ ಸಾಲದೆಂದು ಪರರ ॥ ಅರ್ಥಕಾಗಿ ಆಸೆ ಮಾಡಿ ಅನ್ಯಾಯ ಮಾಡಿದಿ ॥ ಬಿತ್ತಿ ಬೆಳಸಿದಂತೆಂಬೋದು ವ್ಯರ್ಥ ಚಿಂತೆಗಳನೆ ಮಾಡಿ । ಬಿಟ್ಟು ಹೋಗುವಾಗ ಅರ್ಥ ಯಾರಿಗಾಗುವದೋ ॥ ೩ ॥ ಹೆಣ್ಣು ಹೊನ್ನು ಮಣ್ಣು ಮೂರು । ತನ್ನೊಳಿಟ್ಟು ಉಣ್ಣಲಿಲ್ಲ ॥ ಅಣ್ಣ ತಮ್ಮ ತಾಯಿ ತಂದೆ ಬಯಸಲ್ಯಾತಕೇ ॥ ೪ ॥ ಅನ್ನ ವಸ್ತ್ರ ಭೋಗಕಾಂಕ್ಷೆ । ತನ್ನ ಸುಖವ ಕಾಣಲಿಲ್ಲಾ ॥ ಮಣ್ಣುಪಾಲು ಆದವ್ಯಾಲೆ ಯಾರಿಗಾಗುವದೋ ॥ ೫ ॥ ಬೆಳ್ಳಿಭಂಗಾರ ಇಟ್ಟುಕೊಂಡು । ಒಳ್ಳೆ ವಸ್ತ್ರ ಹೊದ್ದುಕೊಂಡು । ಚಳ್ಳಪಿಳ್ಳಿ ಗೊಂಬೆಯಂತೆ ಆಡುತಿಹುದು ॥ ೬ ॥ ಹಳ್ಳ ಹರಿದು ಹೋಗುವಾಗ । ಗುಳ್ಳೆ ಬಂದು ಒಡಿಯುವಂತೆ ॥ ಉಳ್ಳಪರಿಯ ತೆರವು ಕಾಣೋ ಸಂಸಾರದ ಆಟಾ ॥ ೭ ॥ ವಾರ್ತೆ ಕೀರ್ತಿ ಎಂಬೊದೆರಡು ಸತ್ತವ್ಯಾಲೆ ಬಂದವಯ್ಯಾ ॥ ವಸ್ತು ಪ್ರಾಣ ನಾಯಕನು ದೊರಕಲಲ್ಲಿಗೆ ॥ ೮ ॥ ಕರ್ತೃಕಾಗಿ ನೆಲೆಯಾದಿ ಶ್ರೀ ಕೇಶವನ್ನ ಚರಣಕಮಲ ನಿತ್ಯದಲ್ಲಿ ನೆನೆದು ನೆನೆದು ಸುಖಿಯಾಗಿರೋ ॥ ೯ ॥

॥ ಮೋಹನ ॥

2. ಯಾರೂ ಸಂಗಡ ಬಾಹೋರಿಲ್ಲಾ ॥ ನಾರಾಯಣನ ನಾಮ ನೆರೆ ಬಾಹೋದಲ್ಲದೆ ॥ ಪ ॥ ಹೊತ್ತು ನವಮಾಸ ಪರ್ಯಂತರವು ಗರ್ಭದಲಿ ॥ ಹೆತ್ತು ಬಲು ನೋವು ಬೇನೆಗಳಿಂದಲಿ ॥ ತುತ್ತು ಬುತ್ತಿಯ ಕೊಟ್ಟು ಸಲಹಿದಂಥಾ ತಾಯಿ ॥ ಅತ್ತು ಕಳುಹುವಳಲ್ಲದೆ ನೆರೆ ಬಹಳೆ ॥ ೧ ॥ ದೇವ ವಿಪ್ರರು ಅಗ್ನಿ ಸಾಕ್ಷಿಯಿಂದಲಿ ಭಾವಶುದ್ಧದಿ ಧಾರೆಯೆರೆದುಕೊಂಡ ॥ ದೇವಿ ತನ್ನಪತಿ ತಲೆಗೆ ಕೈಯಿಟ್ಟುಕೊಂಡು ॥ ಇನ್ಯಾವ ಗತಿಯೊ ಎಂದು ಅಳುತುಳಿವಳಲ್ಲದೆ ॥ ೨ ॥ ಮತ್ತೆ ಪ್ರಾಣನು ತನುವು ಬಿಟ್ಟು ಹೋಗುವಾಗ । ಎತ್ತಿವನ ಹೊರಗೊಯ್ದು ಹಾಕೆಂಬರು ॥ ಎತ್ತಿ ಹಾಕಿದ ಕಸದಂತೆ ಆಯ್ತು ದೇಹ ॥ ವಿತ್ತವೆಷ್ಟಿದ್ದರೂ ಫಲವಿಲ್ಲ ಪ್ರಾಣೀ ॥ ೩ ॥ ಪುತ್ರ ಮಿತ್ರರು ಸಕಲ ಬಂಧುಗಳು ಸತಿಯರು ॥ ಹತ್ರದೊಳ್ನಿಂತು ನೋಡುವರಲ್ಲದೆ ॥ ಮೃತ್ಯುದೇವಿಯು ಬಂದು ಪ್ರಾಣವನು ಸೆಳೆವಾಗ ॥ ಜಾತ್ರೆಜನರಿದ್ದು ಏನು ಮಾಡುವರು ॥ ೪ ॥ ಯಮನ ದೂತರು ಬಂದು ಪಾಶವನು ತಗಲ್ಹಾಕಿ । ಮಮತೆಯಿಲ್ಲದೆ ಪ್ರಾಣ ಎಳೆಯುತಿರಲು ವಿಮುಖನಾಗಿ ತಾನು ವ್ಯಥೆಯಿಂದ ಪೋಪಾಗ ॥ ಕಮಲಾಕ್ಷ ಪುರಂದರ ವಿಠಲನೆ ಕಾಯೋ ॥ ೫ ॥

3. ಮತ್ತಾರು ಬರುವರು ನಿನ್ನ ಹಿಂದೆ ॥ ಇತ್ತ ಬಾರೆಂದು ಯಮ ಭಟರು ಸೆಳೆದೊಯ್ಯುವಾಗ ॥ ಪ ॥ ಸತಿಸುತರುಗಳು ಬರುವದಿಲ್ಲಾ ॥ ನಿನ್ನ ಹಿತವಾದ ಬಂಧು ಸ್ನೇಹಿತರು ಬರುವದಿಲ್ಲಾ ॥ ಕ್ಷಿತಿಮಾನ್ಯ ಕ್ಷೇತ್ರ ಬರುವದಿಲ್ಲಾ ॥ ಲಕ್ಷ್ಮಿಪತಿಯೆಂಬನಲ್ಲದೆ ಗತಿಯೊಬ್ಬರಿಲ್ಲಾ ॥ ೧ ॥ ತುರಗ ಗಜಗಳು ಬರುವದಿಲ್ಲಾ ॥ ನಿನ್ನ ಮೆರವಣಿಗೆ ಮಾಡೊ ತನು ನಿನ್ನದಲ್ಲಾ ॥ ನರಪತಿಯ ಸೇವೆ ಸ್ಥಿರವಲ್ಲಾ ॥ ನರಹರಿಯೊಬ್ಬನಲ್ಲದೆ ಪರಗತಿಯಿಲ್ಲಾ ॥ ೨ ॥ ಧನಧಾನ್ಯಗಳು ಬರುವದಿಲ್ಲಾ ॥ ನಿನ್ನ ಅನುವಾದ ಕನಕಸಾಧನಗಳು ಬರುವದಿಲ್ಲಾ ॥ ಜನನೀ ಜನಕರು ಬರುವದಿಲ್ಲಾ ॥ ಜಾನಕೀಪತಿ ಹೊರ್ತು ಬೇರೆ ಗತಿ ಇಲ್ಲಾ ॥ ೩ ॥ ಈ ದೇಹ ನೀ ಬಿಟ್ಟ ಬಳಿಕ ಅವರ ಬಾಧೆಗೋಸುಗ ಬೆಂಕಿಲಿ ಸುಡುತಿಹರೋ ॥ ಬೂದಿ ನೀರೊಳು ಚೆಲ್ಲುತಿಹರೋ ಬಂದು ॥ ಬೀದಿಯಲ್ಲಿ ನಿಂತು ಬೊಬ್ಬೆ ಮಾಡುವರೊ ॥ ೪ ॥ ಇನ್ನಾದರೂ ತಿಳಕೊಂಡು ॥ ಮತ್ತೆ ಇನ್ನಾದರೂ ಅನ್ಯ ಗತಿ ಇಲ್ಲವೆಂದು ॥ ಎನ್ನೊಡೆಯ ನೀನೆ ಗತಿ ಎಂದು ॥ ಈಗ ಮನ್ನಿಸೋ ಪುರಂದರ ವಿಠಲ ಸಲಹೆಂದು ॥ ೫ ॥

4. ಅಂತಕನ ದೂತರಿಗೆ ಕಿಂಚಿತ್ತು ದಯೆವಿಲ್ಲ । ಚಿಂತೆಯನು ಬಿಟ್ಟು ಶ್ರೀ ಹರಿಯ ನೆನೆ ಮನವೇ ॥ ಪ ॥ ದಿವ ರಾತ್ರಿಯೆನ್ನದೆ ವಿಶಯಲಂಪಟನಾಗಿ ಸವಿಯೂಟಗಳನುಂಡು ಭ್ರಮಿಸಬ್ಯಾಡಾ ॥ ಅವನ ಕೊಂದಿವನಕೊಂದರ್ಥವನು ಘಳಿಸುವದೆ ಜವನ ದೂತರು ಬರುವ ಹೊತ್ತು ನೀನರಿಯೇ॥ ೧ ॥ ನೊನ್ನೆ ಮದಿವ್ಯಾದೆನ್ನೈ ಕರೆವದೊಂದೆರಡೆನ್ಮೆ ॥ ನಿನ್ನೆ ಕೊಂಡೆನು ಕ್ಷೇತ್ರ ಫಲವುಬಹುದೂ ॥ ಹೊನ್ನುಹಣ ಉಂಟಿನಗೆ ಸಾಯಲಾರೆನು ಯನಲು ॥ ಬೆನ್ನಬಿಡುವಳೇ ಮೃತ್ಯು ವ್ಯರ್ಥ ಜೀವಾತ್ಮಾ ॥ ೨॥ ಹೊಸಮನೆಯ ಕಟ್ಟಿದೆನು ॥ ಗೃಹಶಾಂತಿ ಮನೆಯೊಳಗೆ ॥ ಬಸುರು ಹೆಂಡತಿ ಮಗಗೆ ॥ ಮದಿವೆ ನಾಳೇ ॥ ಹಸನಾಗಿಯದೆ ಬದುಕು ಸಾಯಲಾರೆನು ಯೆನಲು ॥ ಕುಸುರಿದರಿಯದೆ ಬಿಡರು ಯಮನವರು ಆಗ ॥ ೩ ॥ ಪುತ್ರಹುಟ್ಟಿದ ದಿವಸ ಹಾಲು ಊಟದ ಹಬ್ಬ ॥ ಮತ್ತೊಬ್ಬ ಮಗನ ಉಪನಯನ ನಾಳೇ ॥ ಅರ್ತಿಯಾಗಿದೆ ಬದುಕು ॥ ಸಾಯಲಾರೆನು ಎನಲು ॥ ಮೃತ್ಯು ಎಡೆ ತಲೆಯೆಲ್ಲಿ ನಗುತಿಪ್ಪಳಯ್ಯಾ ॥ ೪ ॥ ಅಟ್ಟಡುಗೆಯುಣಲಿಲ್ಲಾ ॥ ಇಷ್ಟ ದರುಷನವಿಲ್ಲಾ ॥ ಕೊಟ್ಟ

ಸಾಲವ ಕೇಳ್ವ ಹೊತ್ತನರಿಯೇ ॥ ಕಟ್ಟಿ ತುಂಬಿದ ಮೇಲೆ ॥ ಕ್ಷಣಮಾತ್ರ ಇರಲಿಲ್ಲಾ ॥ ಅಷ್ಟರೊಳು ಪುರಂದರ ವಿಠಲನ್ನ ಮನವೇ ॥ ೫ ॥

5. ಆಗಲೇ ಕಾಯಬೇಕೋ । ಅಂಬುಜನಯನಾ ॥ ಆಗಲೇ ಕಾಯಬೇಕೋ ॥ ಈಗ ನೀ ಕಾಯ್ದರೇನೋ । ಕಾಯದಿದ್ದರೆ ಏನೋ ॥ ಅಂಬುಜನಯನಾ ಆಗಲೇ ಕಾಯಬೇಕೋ ॥ ೧ ॥ ಅನುಜ ತನುಜರುಂಟು । ಬಹು ಹಣ ಒಳಗುಂಟು । ಚಿನಚಿನಾಂಬರ ಉಂಟು ಭಾಗ್ಯಉಂಟು ಎನಗೆ ॥ ಮೊನ್ನೆ ಪುಟ್ಟಿದ ಗಂಡುಮಗ ನೊಬ್ಬನೆನಗುಂಟು ॥ ಸನ್ನೆಸಂಜ್ಞೆಗುಂದಿದಾಗಸಂಗಡೊಬ್ಬರಕಾಣೆ ॥ ೨ ॥ ನೆಂಟರಿಷ್ಟರು ಉಂಟು ನೆರೆಹೊರೆ ಎನಗುಂಟು ॥ ಬಂಧು ಬಳಗ ಉಂಟು ಭಾಗ್ಯ ಉಂಟೆನಗೆ ॥ ಕಂಠದಲಿ ಬದ್ಧರಾದ ಕಾಂತೆಯರೆನಗುಂಟು । ಒಂಟಿಯಾಗಿ ಪೋಗುವಾಗ ಸಂಗಡೊಬ್ಬರಕಾಣೆ ॥ ೩ ॥ ಒಂದು ಕ್ಷಣದಲ್ಲಿ ವಾತ ಪಿತ್ಥಕಫ ಮೊದಲಾದ ಸಂಧಿವ್ಯಾಧಿಗಳಿಷ್ಟು ಬಾಧಿಸುತಿಹವೋಲ್ ॥ ಇಂದಿರೇಶ ನಿನ್ನ ನಾಮ ಒಂದೇ ಕಾಯುವುದಕೆ ಬಂದೆನ್ನ ಸಲಹಯ್ಯ ಪುರಂದರ ವಿಠಲಾ ॥ ೪ ॥

6. ಸಿಕ್ಕಿದೆಯೋ ಎಲೋ ಜೀವಾ । ಕುಕ್ಕಿಕೊಲ್ಲದೆ ಬಿಡರೂ ॥ ಸೊಕ್ಕಿದ ಹೆಣ್ಣಿಗೆ ನೀ ಮರುಳಾಗಿ। ಉಕ್ಕಿನ ಕಂಭಕೆ ನೀ ಗುರಿಯಾದಿ ॥ ಪ ॥ ಮನೆ ಮನೆ ತಪ್ಪದೆ ಶುನಕನಂದದಿ ಪೋಗಿ । ಘನವಾದ ಕೂಳನೆ ತಿಂದು । ತನುವು ಕೊಬ್ಬಿ ಇಲ್ಲಿಗೆ ಬಂದಿ ॥ ೧ ॥ ಹಾಳೂರನೋಲಕ್ಕೆ ಕಾಲು ಚಾಚಿದ ಹಾಗೆ । ಮೂಳೆ ಸಂಸಾರಕೆ ನೀ ಗುರಿಯಾದಿ ॥ ತೇಲುತ್ತ ಮುಳುಗುತ್ತ ಇಲ್ಲಿಗೆ ಬಂದಿ ॥ ೨ ॥ ಸುಣ್ಣವ ತಿಂದ ತಿಮ್ಮಣ್ಣನಂದದಿ ಬೆದರಿ । ಕಣ್ಣು ಕಾಣದೆ ನೀ ಕುಣಿದಾಡಿ ದೊಣ್ಣೆಪೆಟ್ಟಗೆ ಇಲ್ಲಿಗೆ ಬಂದಿ ॥ ೩ ॥ ಕಂಡವರ ಒಡವೆಯನು ಬಡ್ಡಿಯ ಧನವನ್ನೂ ॥ ಕಂಡು ಕಾಣದೆ ನೀ ತಿಂದೆಲ್ಲೋ ಮಿಂಡೆರ ಒಡನೆ ಮುಂಡೆಯ ಮಗನೇ ॥ ೪ ॥ ಸತಿಸುತರೆಂಬುವರೇ ಗತಿಯೆಂದು ನಂಬಿದೆಲೊ.॥ ಯತಿಗಳು ಬಂದರತಿಥಿಗಳು ಬಂದರೆ ಗತಿ ಇಲ್ಲವೆಂದು ಖತಿಗೊಂಬೆಲ್ಲೋ ॥ ೫ ॥ ಬಣ್ಣಿಸಲೆನ್ನಳವೆ ಅನುದಿನ ಪಾಪವ ಮಾಡಿ ॥ ಬೆಣ್ಣೆತಿಂದ ಬೆಕ್ಕಿನಹಾಗೆ । ಕಣ್ಣುಬಿಡುತ ನೀ ಇಲ್ಲಿಗೆ ಬಂದಿ ॥ ೬ ॥ ಗೋಪಾಲಕೃಷ್ಣಯ್ಯ ತಾಪತ್ರಯಂಗಳಕಳೆವ ಆಪತ್ತೆಲ್ಲಾ ಪರಿಹಾರ ಮಾಡುವ ಶ್ರೀಪತಿ ಪುರಂದರವಿಠಲನ ಭಜಿಸೆಲೋ ॥

ರಾಗ— ॥ ಪೂರ್ವಿ ಅಟತಾಳ ॥

7. ಯಮರಾಯ ಪೇಳ್ದ ದೂತರಿಗೆ ॥ ಲಕ್ಷ್ಮೀ ॥ ರಮಣನ ದಾಸರಿದ್ದೆಡೆಗೆ ಪೋಗದಿರೆಂದು ॥ ಪ ॥ ವೇದ ವ್ಯಾಕರಣ ಶಾಸ್ತ್ರಗಳೋದಿ ॥ ಶ್ರಾದ್ಧವೇಕಾದಶೀ ದಿನದಿ ಮಾಡುತಲಿಪ್ಪರಾ ॥ ಭೇದಮತವ ಮಿಥ್ಯವೆನುತಲಿಪ್ಪ ಮಾಯವಾದಿಗಳೆಳ ॥ ತಂದು ನರಕದೊಳಿಡಿರೆಂದು ॥ ೧ ॥ ತಿರಿಯಕ್ಪುಂಡ್ರವನಿಟ್ಟು ಭಸ್ಮದೇಹಕೆ ಪಟ್ಟೆ ॥ ಕೊರಳಿಗೆ ರುದ್ರಾಕ್ಷಿಸರವ ಕಟ್ಟಿ ॥ ಕುರಿಗಳ ಕೊೖದು ಯಜ್ಞವ ಮಾಳ್ಪೆನೆನುತಲಿ ॥ ಹರಿಹರರೊಂದೆಬರೆಳದುತನ್ನಿರೆಂದು ॥ ೨ ॥ ಶಿವನೆ ತಾನೆಂದು ಜಾಹ್ನವಿ ತೀರದಲಿಪಾ । ಶಿವಲಿಂಗ ಪೂಜಿಪ ಅವಿವೇಕರಾ ॥ ಶಿವರಾತ್ರಿಗಳಲಿ ತದ್ದಿವಸ ಬಿಡುವವರಉ । ರವನರಕದೊಳ್ಪಣಿ ಬಿಡಿಸಿರೆಂದು ॥ ೩ ॥ ಮಳೆಛಳಿ ಬಿಸಿಲುಕತ್ತಲೆಯೊಳು ಬರಲು ನ ॥ ಮ್ಮಾಳಯದೊಳು ಸ್ಥಳವಿಲ್ಲ ಪೋಗಂಬ್ಯಾರ ॥ ಕಳವಿಲವರ ದ್ರವ್ಯಗಳನಪಹರಿಸುವ ॥ ಲಲನೆಯರ ಕಾಲ್ಪಿಡಿದೆಳದುತನ್ನಿರೋಯೆಂದು ॥ ೪ ॥ ಶ್ರೀ ತುಳಸಿಯ ಬಿಟ್ಟು ಹಲವು ಪುಷ್ಪದಿ ಜಗ । ನ್ನಾಥವಿಠಲನ ಪೂಜಿಸುತಿಪ್ಪರಾ ॥ ಮಾತನಾಡಿ ವೇದಮಂತ್ರ ಬಿಡುವರ ಯಾತನ ದೇಹವಕೊಟ್ಟು ಬಾಧಿಸಿರೆಂದು ॥ ೫ ॥

11. ನೀತಿಬೋಧೆ.

(ಸಾಕು ಸಾಕಿನ್ನು ಸಂಸಾರ) ಎಂಬಂತೆ.

1. ಮರೆಯದಿರು ಮರೆಯದಿರು ಎಲೆ ಮಾನವಾ ॥ ಗರ್ವವ್ಯಾತಕೆ ನಿನಗೆ ಎಲೆ ಮಂಕು ಜೀವವೇ ॥ ಅ ॥ ರೂಪದಲಿ ಮನ್ಮಥನೇ ॥ ಶಾಪದಲಿ ಗೌತುಮನೇ । ಕೋಪದಲಿ ದುರ್ವಾಸಮುನಿಯೋ ನೀನು ತಪದಲ್ಲಿ ವ್ಯಾಸನೆ ॥ ಕೃಪೆಯಲ್ಲಿ ಬಲೀಂದ್ರನೆ ॥ ನಿಪುಣತ್ವದಲಿ ನಾರದಮುನಿಯೆ ನೀನು ॥ ೧ ॥ ಯತಿಯಲಿ ಅಗಸ್ತ್ಯನೆ ॥ ಕ್ಷಿತಿಪರಲಿ ಜನಮೇಜಯನೆ ॥ ಗೀತದಲಿ ಗಂಧರ್ವನೆ ನೀನು ॥ ವ್ರತದಲ್ಲಿ ಲಕ್ಷ್ಮಣನೆ ॥ ಮತಿಯಲ್ಲಿ ಕಶ್ಯಪನೆ ॥ ವಿತರಣೆ ವಾಕ್ಯದಲಿ ಯಮಧರ್ಮನೇ ನೀನು ॥ ೨ ॥ ನ್ಯಾಯದಲಿ ಭರತನೆ ಉಪಾಯದಲಿ ಕೃಷ್ಣನೆ ॥ ಕಾಯಶುದ್ಧಿಯಲಿ ಅಂಬರೀಷನೆ ನೀನು॥ ಮಾಯದಲಿ ಕಾವ್ಯನೆ ॥ ದಾಯದಲಿ ಶಕುನಿಯೋ ॥ ಯಾರ ಹೋಲುವೆ

ನೀ ಎಲೆ ಮಾನವಾ ॥ ೩ ॥ ಕೊಡುವುದಕೆ ಕರ್ಣನೇ ॥ ನಡತೆಯಲಿ ಧರ್ಮ ಜನೇ ॥ ಧೃಡಮನಸ್ಸಿನಲಿ ರುಕ್ಮಾಂಗದನೇ ನೀನು ॥ ಘಡೆಯಲ್ಲಿ ಕೌರವನೆ॥ ನುಡಿಯಲ್ಲಿ ಗಾಂಗೇಯನೇ ॥ ಮಡದಿಯರ ಭೋಗಕ್ಕೆ ಸುರಪತಿಯೆ ನೀನು ॥ ೪ ॥ ಬಾಣದಲಿ ರಾಮನೆ ॥ ತ್ರಾಣದಲಿ ಭೀಮನೆ ॥ ಜಾಣದಲಿ ಶಿಶುಪಾಲ ನೇನೋ ॥ ಗುಣವಲ್ಲಿ ಸುಧರ್ಮನೆ ॥ ರಣದಲ್ಲಿ ಶಲ್ಯನೆ ॥ ಅನುಗುಣ್ಯವಾದ ದಲಿ ನರಪತಿಯೋ ನೀನು ॥ ೫ ॥ ಛಲದಲ್ಲಿ ರಾವಣನೆ ॥ ಬಲದಲ್ಲಿ ವಾಲಿಯೆ ॥ ನಿಲಕಡೆಯ ಮನದಲಿ ನೀ ದ್ರೋಣನೇ ॥ ಕುಲದಲಿ ವಸಿಷ್ಟನೇ ॥ ಗೆಲುವಿನಲಿ ಪಾರ್ಥನೇ ॥ ಬಲುವಿದ್ಯೆಯಲಿ ಪರಶುರಾಮನೇ ನೀನು ॥ ೬ ॥ ಶಕ್ತಿಯಲಿ ಹನುಮನೆ ಭಕ್ತಿಯಲಿ ವಿಭೀಶಣನೇ ॥ ಕೀರ್ತಿಯಲಿ ಹರಿಶ್ಚಂದ್ರ ರಾಯನೆ ನೀನು ॥ ಆರ್ತಿಯಲಿ ಶುಕಮುನಿಯೆ ॥ ಸ್ಫೂರ್ತಿಯಲಿ ಸೂರ್ಯ ನೆ ॥ ಮುಕ್ತಿಸಾಧನಕೆ ಪ್ರಹ್ಲಾದನೇ ನೀನು ॥ ೭ ॥ ಗೋತ್ರದಲಿ ಬ್ರಹ್ಮನೆ ಸೂತ್ರದಲಿ ಕೌಶಿಕನೆ ॥ ಪಾತ್ರದಲಿ ವಾಲ್ಮೀಕ ಋಷಿಯೆ ನೀನು। ಮಾತಿನಲಿ ಗುರುಸುತನೆ ಜ್ಯೋತಿಯಲಿ ಬೃಹಸ್ಪತಿಯೋ ॥ ನೀತಿಮಾರ್ಗದಲಿ ಸಹದೇವ ನೇ ನೀನು ॥ ೮ ॥ ಅಂಗದಲಿ ಅಜಮಿಳನೆ ॥ ಶೃಂಗದಲಿ ಮಾರುತನೆ ॥ ಕೆಂಗೆ ಡಕುತನದಲ್ಲಿ ಕಾಮಸುತನೇ ನೀನು ॥ ಅಂಗನೆಯರರಸನೆಲೆ ಆದಿಕೇಶವನ ಹಿಂಗದೆ ಭಜಿಸಿ ಪಾವನನಾಗು ಮನುಜಾ ॥ ೯ ॥

2. ಉಬ್ಬದಿರು ಉಬ್ಬದಿರು ಎಲೊ ಮಾನವಾ ॥ ಹೆಬ್ಬುಲಿಯಂತೆ ಯಮ ಬೊಬ್ಬಿಕಾದಿರುವಾ ॥ ಪ ॥ ಸಾಗರತರಂಗದಂತೆ ॥ ಸಾವು ಹುಟ್ಟ ರಲಾಗಿ ಭೋಗಭಾಗ್ಯಗಳೆಂದು ಬಳಲಿದ್ಯಾಕೋ ॥ ನಾಗ ಹೆಡೆನೆರಳಲ್ಲಿ । ಇರುವ ಕಪ್ಪೆಯ ರೀತಿ ॥ ಕೂಗಿ ಚೀರಿದರೆ ನೀ । ನಾಗ ಕೇಳುವನೇ ॥ ೧ ॥ ಮಾಳಿಗೆಮನೆಯೆಂದು ಮತ್ತೆ ಸತಿಸುತರೆಂದು ಜಾಳಿಗೆ ಧನಧಾನ್ಯ ಪಶುಗ ಳೆಂದೂ ॥ ವೇಳತಪ್ಪದೆ ತಿಂಬೊ ಕೂಳು ತನಗುಂಟೆನಲು ॥ ಗಾಳಿಗಿಕ್ಕಿದ ದೀಪ । ಬಾಳುಬದುಕೆಲ್ಲಾ ॥ ೨ ॥ ಅಸ್ತಿರದ ಭವದೊಳಗೆ । ಅತಿಶಯಗಳೆ ಣಿಸದೆ ॥ ವಸ್ತುವಿದರಲಿ ಕೇಳೋ ವೈರಾಗ್ಯವೂ ॥ ವಿಸ್ತಾರಮಹಿಮ ಶ್ರೀ ಪುರಂದರವಿಠಲನ್ನ ॥ ಸ್ವಸ್ಥಚಿತ್ತದಿ ನೆನೆದು ಮುಕ್ತಿಪಡು ಮನುಜಾ ॥ ೩ ॥

॥ ರಾಗ — ತಾಳ ॥

3. ಯಾವಾಗಲೂ ಹೇಳಬಾರದೇ ॥ ವಾಸುದೇವ ಕೈಬಿಡಬೇಡೆನು

ತಲಿ ॥ ಪ ॥ ಇಕ್ಕಿ ಎರೆವರಿಲ್ಲಾ ॥ಇಷ್ಟಬಂಧುಗಳಿಲ್ಲಾ ॥ ಅಕ್ಕತಂಗಿಯರ ಣ್ಣತಮ್ಮರಿಲ್ಲಾ ॥ ಒಕ್ಕುಂಡಿಯಾಗಿ ನಾ ಆಡುತಿರುವೆ ಸದಾ ॥ ದುಃಖಪಡುವೆನೆಂದು ರಕ್ಕಸಾಂತಕನೊಳು ॥ ೧ ॥ ಮಡದಿಮಕ್ಕಳು ಇಲ್ಲಾ ॥ ಒಡವೆ ವಸ್ತುಗಳಿಲ್ಲಾ ॥ ಪಡೆದ ತಾಯ್ತಂದೆಗಳೊಬ್ಬರಿಲ್ಲಾ ॥ ಎಡವುತಿದ್ದರೆ । ಬಿದ್ದು ಎತ್ತಿಕೊಂಬುವರಿಲ್ಲಾ ॥ ಒಡೆಯ ನೀನೆನ್ನ ಕೈಬಿಡಬೇಡೆಂದೆನುತಲಿ ॥ ೨ ॥ ಮಾಡಿದ್ದ ಮನೆಯಲ್ಲಿ ಬೇಡಿರ್ದ ಧನವಿಲ್ಲ ॥ ಆಡಿಸಿಕೊಳ್ಳುವ ಮಕ್ಕಳಿಲ್ಲಾ ॥ ಆಡುವಾಗಲು ಸ್ತುತಿ ಮಾಡುವೆನೆಂದರೆ ॥ ಮೂಢರೊಳಗೆ ಬರಿ ಮೂಢನಾಗಿಹೆನೆಂದು ॥ ೩ ॥ ಇಷ್ಟಾದಮೇಲೆ ಕೈಬಿಟ್ಟೆಯಾದರೆ ಎನ್ನ ಕಟ್ಟಾದೆಂದಿಗೂ ಬಿಡೆ ನಿನ್ನನು ॥ ಇಷ್ಟಾರ್ಥಕೊಡುವಂಥ ದೇವನಲ್ಲೆಂದು ಈ ಸೃಷ್ಟಿಯೊಳಪಕೀರ್ತಿ ಬರುವದು ನಿನಗೊಂದು ॥ ೪ ॥ ಮೋಕ್ಷದಾಯಕ ವಿಶ್ವರೂಪ ವಿಶ್ವಾತ್ಮಕ ಸಾಕ್ಷಿಸ್ವರೂಪ ನರೇಶ್ವರನೇ ॥ ಸಾಕ್ಷಾತು ಶ್ರೀ ಗುರು ಪುರಂದರ ವಿಠಲನೆ ರಕ್ಷಿಸಬೇಕೆಂದು ಲಕ್ಷ್ಮಿವಲ್ಲಭನೊಳು ॥೫॥

4. ಉದರವೈರಾಗ್ಯವಿದು ॥ ನಮ್ಮ ಪದುಮನಾಭನಲ್ಲಿ ಲೇಶ ಭಕುತಿ ಇಲ್ಲಾ ॥ ಉದಯಕಾಲದಲೆದ್ದು ॥ ಗಡಗಡ ನಡುಗುತ್ತ ॥ ನದಿಯೊಳು ಮಿಂದೇವೇದ್ಧೇಳುತಲೀ ॥ ಮದಮತ್ಸರ ಕ್ರೋಧ ಒಳಗೆ ತುಂಬಿಟ್ಟುಕೊಂಡು ಬದಿಯಲ್ಲಿದ್ದವರಿಗಾಶ್ಚರ್ಯತೋರುವಂತೆ ॥ ೧ ॥ ಕಂಚುಗಾರರ ಬಿಡಾರ ದಂದದಲಿ ॥ ಕಂಚು ಹಿತ್ತಾಳಿ ಪ್ರತಿಮೆನೆರಹಿ ॥ ಮಿಂಚಲೆನುತ ಬಹು ಜ್ಯೋತಿಗಳನೆ ಹಚ್ಚಿ ॥ ವಂಚನೆಯಲಿ ಘನ ಪೂಜೆಮಾಡುವದು ॥ ೨ ॥ ಕರದಲ್ಲಿ ಜಪಮಣಿ ಬಾಯಲ್ಲಿ ಮಂತ್ರವು ॥ ಅರಿವೆಯ ಮುಸುಕು ಮೋರೆಗೆ ಹಾಕಿ ॥ ಪರಸತಿಯಳ ಗುಣ ಸ್ಮರಿಸುತ ಅನುದಿನ ॥ ಪರಮ ವೈರಾಗ್ಯ ಶಾಲಿ ಎಂದೆನಿಸುವಂಥಾ ॥ ೩ ॥ ಬೂಟಕತನದಲ್ಲಿ ಬಹಳ ಭಕುತಿ ಮಾಡಿ॥ ದಿಟನಿತಸರಿಯಾರಿಲ್ಲೆನಿಸಿ ॥ ನಾಟಕಸ್ತ್ರೀಯಂತೆ ಬಯಲಾಡಂಬರವತೋರಿ ॥ ಊಟದ ಮಾರ್ಗದ ಜ್ಞಾನವಿಲ್ಲದೆ ॥ ೪ ॥ ನಾನು ಎಂಬುವದು ಬಿಟ್ಟು ಜ್ಞಾನಿಗಳೊಡಗೂಡಿ ॥ ಏನಾದರೂ ಹರಿ ಪ್ರೇರಣೆಯೆಂದು ॥ ಧ್ಯಾನಿಸಿ ಮೌನದಿ ಪುರಂದರವಿಠಲನ ಕಾಣದೆ ಮಾಡಿದ ಕಾರ್ಯಗಳೆಲ್ಲಾ ॥ ೫ ॥

5. ಕೈಮೀರಿಹೋದ ಮಾತಿಗೆ ಹುಡುಕಾಡಬಾರದು ॥ ಮಾತುಕೇಳದ ಮಕ್ಕಳ ಹೆಸರು ತೆಗೆಯಬಾರದು ॥ ಪ ॥ ತನ್ನ ಪ್ರೀತಿಇಲ್ಲದ ಪತಿಯ

ಕಂಡು ಹಿಗ್ಗಬಾರದು ॥ ಅ । ಪ ॥ ಜಾರತ್ವಮಾಡೊ ಪತ್ನಿಯಕೂಡಿ ಆಳಬಾರದು ॥ ವೈರತ್ವಮಾಡುವವರ ಸೊಲ್ಲು ಕೇಳಬಾರದು ॥ ೧ ॥ ದುಷ್ಟೆ ಕರ್ಕಶ ಸ್ತ್ರೀಯಳ ಹೆಸರು ತೆಗೆಯಬಾರದು ॥ ಹೆತ್ತುಮಂದಿಗಂಜದವನ ಸ್ನೇಹಿಸಬಾರದು ॥ ೨ ॥ ಪಂಕ್ತ್ಯಾಗೆ ಪರಪಂಕ್ತಿಯನ್ನು ಮಾಡಬಾರದು ಮಂಕುಜೀವನಾಗಿ ಮುಕ್ತಿ ಬೇಡಬಾರದು ॥ ೩ ॥ ಆಚಾರಹೀನಮನೆಯೊಳೂಟ ಮಾಡಬಾರದು ॥ ವಿಚಾರ ಇಲ್ಲದ ಸಭೆಯೊಳು ಕೂಡ್ರಬಾರದು ॥ ೪ ॥ ಪರಪುರುಷರಿದ್ದೆಡೆಯೊಳೊಬ್ಬಳಿರಲುಬಾರದು ॥ ಸ್ವಾಮಿ ಪುರಂದರ ವಿಠಲನ ಧ್ಯಾನ ಮರೆಯಬಾರದು ॥ ೫ ॥

6. ಭಾರಿಗೆ ನಿನ್ನ ಬಾಳ್ವೆದಾರಿಗೆ ॥ ಪ ॥ ಬರ್ತೇನು ತಂದಿ ಬರಿಗೈಲಿ ಬಂದಿ ॥ ಪರನಿಂದೆಗಳಕಟ್ಟೆ ಹರಕೊಂಡೆನಂದಿ ॥ ೧ ॥ ಇರುಯೆಲೋಶಾಂತಿ ಈಡ್ಯಾಡೆಭ್ರಾಂತಿ ॥ ಮೂರುದಿನದ ಶಾಂತಿ ನಿನಗ್ಯಾಕೊ ಚಿಂತೆ ॥ ೨ ॥ ಅನುಗಾಲಕಿಚ್ಚು ಭವದೊಳಗಚ್ಚು । ಅನುಭವದಚ್ಚು ಸವಿನೋಡೋ ಹುಚ್ಚು ॥ ೨ ॥ ಶ್ರೀಕೃಷ್ಣಧ್ಯಾನ ಮರೆಯದಿರು ಶ್ವಾನ ॥ ಪರಿಪರಿ ದಿನದಲ್ಲಿ ತಿಳಿಯೊ ನೀ ಜ್ಞಾನ ॥ ೩ ॥ ಸಿರಿವರಕೃಷ್ಣ ಭವಭಯಭಂಗ ॥ ಪುರಂದರ ವಿಠಲನ ವಲಿಸಿಕೊ ಮಂಗ ॥ ೪ ॥

7. ಗುರುವಿನ ಗುಲಾಮನಾಗುವತನಕಾ ದೊರೆಯದಣ್ಣ ಮುಕುತಿ ॥ ಪ ॥ ಪರಿಪರಿ ಅನೇಕ ಶಾಸ್ತ್ರವನೋದಿ । ವ್ಯರ್ಥವಾಯಿತು ಭಕುತಿ ॥ ಅ.ಪ ॥ ಆರು ಶಾಸ್ತ್ರವ ಓದಿದರಿಲ್ಲಾ । ಮೂರಾರ್ಪುರಾಣವ ಮುಗಿಸಿದರಿಲ್ಲಾ ॥ ಸಾರನ್ಯಾಯ ಕಥೆಗಳ ಕೇಳಿದರಿಲ್ಲಾ ॥ ಧೀರನಾಗಿ ತಾ ಪೇಳಿದರಿಲ್ಲಾ ॥ ೧ ॥ ಕೊರಳೊಳು ಮಾಲೆ ಧರಿಸಿದರಿಲ್ಲಾ । ಬೆರಳೊಳು ಜಪಮಣಿ ಯೆಣಿಸಿದರಿಲ್ಲಾ ॥ ಮರುಳನಾಗಿ ತಾ ಶರೀರಕೆ ಬೂದಿ ವರಿಸಿಕೊಂಡು ತಾನು ತಿರುಗಿದರಿಲ್ಲ ॥ ೨ ॥ ನಾರಿಯ ಭೋಗವ ಅಳಿಸಿದರಿಲ್ಲಾ । ಶರೀರದ ಸುಖವು ಬಿಡಿಸಿದರಿಲ್ಲ ॥ ನಾರದವರದ ಶ್ರೀ ಪುರಂದರವಿಠಲ ಸೇರಿಕೊಂಡು ತಾ ಪಡೆಯುವತನಕಾ ॥ ೩ ॥

8. ರಮಣನಿಲ್ಲದ ನಾರಿ ಕಣ್ಣಿಗೆ ಮಾರಿ ॥ ಹಡದವಳ ಎದೆಗೊರಳ ಕೊಯ್ವಂಥ ಚೂರಿ ॥ ಅ ॥ ಮಾತುಕಲಿತರೆ ಏನು । ಬಹುಜಾಣೆಯಾದ

ರೇನು । ಚಾತುರ್ಯವಿದ್ದರೇನು । ಚಲುವೆಯಾದರೇನು । ರಾಶಿಹಣ ಇದ್ದ ರೇನು । ಏನು ಪೇಳಿದರೇನು । ರೀತಿಕೆಟ್ಟ ಜನ್ಮ ಪೊರೆಯಬೇಕಲ್ಲಾ ॥ ೧ ॥ ಹೊರಗೆಬರಲಿಕೆ ಸಲ್ಲ । ಇದಿರಾಗಿ ಇರಸಲ್ಲ । ಅಡಿಗೆಗೆ ಯೋಗ್ಯಳಲ್ಲ ಹರಿ ತಾನೆ ಬಲ್ಲ । ಮರಿಯಾದೆಗಳು ಇಲ್ಲ ಒಲುಹಗುರ ರಾಜ್ಯಕ್ಕೆಲ್ಲಾ । ಸರ್ವ ರೀತಿಲಿ ಕೆಟ್ಟ ಜನ್ಮ ಪೊರೆನಲ್ಲ ॥ ೨ ॥ ಅತ್ತೆ ತನ್ನಯ ಮಗಗೆ ಮೃತ್ಯು ಎಂತೆಂಬುವಳು । ಹುಟ್ಟಿದಾ ಮನೆಯವರು ದೂಷಿಸುವರು ॥ ಎಷ್ಟುಹೇಳಲಿ ಬಹಳ ತುಚ್ಛವನೆ ಮಾಡುವರು ಅಕ್ಕತಂಗಿಯರಿಗೆ ದಿಕ್ಕು ಎಂಬುವರೂ ॥ ೩ ॥ ಉಪಕಾರ ಮಾಡಿದರೆ ಗತಿಯು ನೀನೆಂಬುವರು । ಅತಿಶ್ರಮವೆಂದ ರೂ ಆದರಿಸರೂ ॥ ವಿಪರೀತ ಹಣವಿದ್ದರಪಹರಿಸಿ ತಿಂಬುವರು । ಅತಿದೈನ್ಯ ದಿಂದ ಬೇಡೆ ಬಾಯಬಡಿಸುವರೂ ॥ ೪ ॥ ಚಾಕರಿಯ ಮಾಡಿದರೆ ಆಚೀಚಿ ಲಾಡುವರು । ರಾಶಿ ಅನ್ನವನುಂಡಳೆಂದು ದೂರುವರು ॥ ಈಸು ಸೈರಿಸಿ ಕೊಂಡು ಏಕಾಗ್ರದಲಿ ಕುಳಿತು ಶ್ರೀಶ ಪುರಂದರವಿಠಲನ್ನ ನೆನೆಯೆ ನಾರೀ ॥ ೫ ॥

॥ ಪದ ॥

9. ಆರು ಹಿತವರು ನಿನಗೆ ಮೂವ್ವರೊಳಗೆ । ನಾರಿಯೋ ಧಾರುಣಿ ಯೋ ಬಲುಧನದ ಸಿರಿಯೋ ॥ ಪ ॥ ಅನ್ಯರಲಿ ಜನಿಸಿರ್ದ ಅಂಗನೆಯ ಕರ ತಂದು । ನಿನ್ನ ಮನೆಗವಳ ಯಜಮಾನಿಯೆನಿಸಿ ॥ ಭಿನ್ನವಿಲ್ಲದ ಅರ್ಧ ದೇಹವೆನಿಸುವ ಸತಿಯು ಕಣ್ಣಿನಲಿ ನೋಡಲಂಜುವಳು ಕಾಲವಶದೀ ॥ ೧ ॥ ಮುನ್ನ ಶತಕೋಟಿ ರಾಯರುಗಳಾಳಿದ ನೆಲವ । ತನ್ನದೆಂದೆನುತ ಶಾಸನವ ಬರಿಸೀ ॥ ಬಿನ್ನಣದ ಮನೆಕಟ್ಟಿ ಕೋಟೆಕೊತ್ತಳವಿಕ್ಕಿ ಚನ್ನಿನವನಸುವಳಿಯೆ ಹೊರಗೆ ಹಾಕುವವರೂ ॥ ೨ ॥ ಉದ್ಯೋಗವ್ಯವಹಾರ ನೃಪಸೇವೆ ಕುಶಲ ಗತಿ । ಕ್ಷುದ್ರತನ ಕಳವು ಪರತಾಪದಿಂದಾ ॥ ಬುದ್ಧಿಯಿಂದಲೆ ಘಳಿಸಿ ಸಿಕ್ಕಿ ದಂತರ್ಥ ಸದ್ಯದಲ್ಲಾದರೂ ಉಂಬುವರೊಹೇಳೊ ಮನುಜಾ ॥೩॥ ಶೋಕಕ್ಕೆ ಆವರಿವರು ಸುಖವಿರಲು ಬಾಂಧವರು ಜೋಕೆತಪ್ಪಿದಬಳಿಕ ಅರ್ಥ ವ್ಯರ್ಥ ॥ ಲೋಕದೊಳು ಸ್ಥಿರವಾದ ಕೀರ್ತಿಅಪಕೀರ್ತಿಗಳು ಸಾಕಾರವಾಗಿ ಸಂಗಡ ಬಾಹೋದಲ್ಲದೇ ॥ ೪ ॥ ಅಸ್ಥಿರದ ದೇಹವಿದು ನೆಟ್ಟನಂಬಿರಬೇಡ । ಸ್ವಸ್ಥ ದಲಿ ನೆನೆ ಕಂಡ್ಯ ಹರಿಪಾದವಾ ॥ ಚಿತ್ತದೊಳು ಶುದ್ಧಿಯಿಂ ಪುರಂದರಾವಿಠ ಲನ ನಿತ್ಯದಲಿ ನೆನೆನೆನೆದು ಮುಕ್ತಿಪಡುಮನುಜಾ ॥ ೫ ॥

10. ಮಾನವಾಜನ್ಮ ದೊಡ್ಡದು । ಇದ ಹಾನಿಮಾಡಲುಬೇಡಿ ಹುಚ್ಚಪ್ಪಗಳಿರಾ ॥ ಪ ॥ ಕಣ್ಣು ಕೈಕಾಲ್ಕಿವಿ ನಾಲಿಗೆ ಇರಲಿಕೆ । ಮಣ್ಣುಮುಕ್ಕಿ ಹುಚ್ಚರಾಗುವರೇ ॥ ಹೆಣ್ಣು ಮಣ್ಣಿಗಾಗಿ ಹರಿನಾಮಾಮೃತ । ಉಣ್ಣದೆ ಉಪವಾಸ ಮಾಡುವರೆ ಖೋಡೀ ॥ ೧ ॥ ಕಾಲನ ದೂತರು ಕರಪಿಡಿದೆಳೆವಾಗ। ತಾಳು ತಾಳೆಂದರೆ ತಾಳುವರೇ ॥ ಧಾಳಿಬಾರದ ಮುನ್ನ ಧರ್ಮವ ಘಳಿಸಿರೊ । ಹಾಳು ಸಂಸಾರಸುಳಿಗೆ ಸಿಕ್ಕಲುಬೇಡಿ ॥ ೨ ॥ ಏನುಕಾರಣ ಯದುಪತಿಯನ್ನು ಮರೆತಿರಿ । ಧನಧಾನ್ಯಪುತ್ರರು ಕಾಯುವರೇ ॥ ಇನ್ನಾದರು ಏಕೋಭಾವದಿ ಭಜಿಸಿರೊ ॥ ಚೆನ್ನಾಗಿ ಭಜಿಸಿರೋ ಪುರಂದರವಿಠಲನ ॥ ೩ ॥

ರಾಗ ॥ ಧನಾಸಿ—ಅಟತಾಳ ॥

11. ಸುಮ್ಮನೆ ಬಾಹೋದೆ ಮುಕ್ತಿ ॥ ಮನುಜ ॥ ಸುಮ್ಮನೆ ಬಾಹೋದೆ ಮುಕ್ತಿ ॥ ಪ ॥ ಬಿನಗುವಿಷಯ ತೋರಿಸಬೇಕು । ಧೃಢಮನದಿ ಸಂಸಾರವ ನೀಡ್ಯಾಡಲುಬೇಕು ॥ ಅನುಮಾನವನು ಬಿಡಬೇಕು ॥ ತನ್ನ । ತನುಮನವನ್ನು ಧರ್ಮಕೊಪ್ಪಿಸಿಬಿಡಬೇಕು ॥ ೧ ॥ ಪಾಪಕೋಪವ ಬಿಡಬೇಕು ಸದಾ । ಗೋಪಾಲಕೃಷ್ಣನ ಸ್ಮರಿಸಲುಬೇಕು ॥ ತಾಪಕಂಜದೆ ಇರಬೇಕು ಭವ । ಕೂಪದಾಟಿಸುವ ಗುರುವ ನಂಬಬೇಕು ॥ ೨ ॥ ಶರೀರದಾಸೆಯ ಬಿಡಬೇಕು ॥ ತನ್ನ ॥ ಶರೀರವನಿತ್ಯವೆಂತೆನ್ನಲುಬೇಕು ॥ ಪರಕೆ ಸಾಧನಮಾಡಬೇಕು ॥ ಹರಿ ॥ ಪುರಂದರವಿಠಲನ ನಂಬಲುಬೇಕು ॥ ೩ ॥

ರಾಗ ॥ ಬೇಹಾಗ್ —ಏಕತಾಳ ॥

12. ಬೇವು ಬೆಲ್ಲದೊಳಿಡಲೇನು ಫಲ । ನಿತ್ಯ । ಹಾವಿಗೆ ಹಾಲೆರದೇನು ಫಲ ॥ ಪ ॥ ಕುಟಿಲವ ಬಿಡದಿಹ । ಕುಜನರು ಮಂತ್ರದ । ಪಠನೆಯ ಮಾಡಿದರೇನು ಫಲ ॥ ಸಟಿಯನ್ನಾಡುವ ಮನುಜರು ಮನದಲಿ । ವಿಠಲನ ನೆನೆದರೇನು ಫಲ ॥ ೧ ॥ ಕಪಟತನದಿ ವಂಚಿಸುವ ಮನುಜರು । ಜಪಗಳ ಮಾಡಿದರೇನು ಫಲ ॥ ಕುಪಿತಬುದ್ಧಿಯನು ತ್ಯಜಿಸದೆನಿತ್ಯದಿ ಉಪವಾಸವಿದ್ದರಿನ್ನೇನು ಫಲ ॥ ೨ ॥ ಮಾತಾಪಿತರನು ಬಳಿಸುವ ಮಗ ॥ ಯಾತ್ರೆಯ ಮಾಡಿದರೇನು ಫಲ ॥ ಘಾತಕತನವನು ಬಿಡದೆ ನಿರಂತರ ನೀತಿಯನೋದಿದ್ದರೇನು ಫಲ ॥ ೩ ॥ ಪತಿಯನು ನಿಂದಿಸಿ ಬೊಗಳುವ ಸತಿಯಳು ವ್ರತಗಳ

ಮಾಡಿದರೇನು ಫಲ ॥ ಅತಿಥಿಗಳೆಡೆಯಲಿ ಭೇದವ ಮಾಡುತ ॥ ಗತಿಯನು ಬಯಸಿದರೇನು ಫಲ ॥ ೪ ॥ ಹೀನಕೃತ್ಯಗಳ ಮಾಡುತ ನದಿಯಲಿ ॥ ಸ್ನಾನವ ಮಾಡಿದರೇನು ಫಲ ॥ ಶ್ರೀನಿಧಿ ಪುರಂದರವಿಠಲನ ನೆನೆಯದೆ । ಮೌನವ ಮಾಡಿದರೇನು ಫಲ ॥ ೫ ॥ ಬೇವು ಬೆಲ್ಲದೊಳಿಡಲೇನು ಫಲ ॥ ನಿತ್ಯ ಹಾವಿಗೆ ಹಾಲೆರೆದೇನು ಫಲ ॥

ರಾಗ—ಸೌರಾಷ್ಟ್ರ ॥ ಮಟ್ಟೆತಾಳ ॥

13. ಹರಿ ಸರ್ವೋತ್ತಮನೆಂದು ಸ್ಮರಿಸದ ಜನರ ಸಂಗ ಬೇಡ ॥ ಪ ॥ ಸಿರಿವಾಯುಮತ ಪೊಂದಿ ಹರುಷ ಪಡದವರ ಸಂಗ ಬೇಡ ॥ ಅ. ಪ ॥ ಮುಂದೆ ಭಲಾ ಎಂದು ಹಿಂದಾಡಿಕೊಂಬರ ಸಂಗ ಬೇಡ ॥ ಎಂದೆಂದಿಗು ಪರ ನಿಂದೆ ಮಾಡುವ ಪಾಪಿ ॥ ಸಂಗ ಬೇಡ ॥ ತಂದೆತಾಯಿಗೆ ಮನಬಂದಂತೆ ನುಡಿವರ ಸಂಗ ಬೇಡ ॥ ಇಂದುಮುಖಿಯ ಮಾತು ॥ ನಡಿಸಿ ಕುಣಿವವರ ಸಂಗ ಬೇಡ ॥ ೧ ॥ ತುದಿನಾಲಿಗೆ ಬೆಲ್ಲ ಹೃದಯ ವಿಷದವರ ಸಂಗ ಬೇಡ॥ ಬೆದರಿಸಿ ಮಾತುಗಳಾಡೊ ಜನಗಳ ಸಂಗ ಬೇಡ ॥ ಮದುವೆಯ ಕೆಡಿಸಿ ಮುದದಿ ನಲಿದಾಡೋರಸಂಗ ಬೇಡ ॥ ಉದರಗೋಸುಗವಾಗಿ ವಿಧಿಕರ್ಮ ತ್ಯಜಿಪರ ಸಂಗ ಬೇಡ ॥ ೨ ॥ ತುಂಟತನ ಮಾಡಿ ತೊಂಟನುಡಿವರ ಸಂಗ ಬೇಡ ॥ ಬಂಟರಾಗಿ ಧಣಿಯ ಗಂಟಲಮುರಿವರ ಸಂಗ ಬೇಡ ॥ ಉಂಟು ತನಗೆಂದು ಬಡವರ ಬೈವರ ಸಂಗ ಬೇಡ॥ ಬಂಟ್ಯಾಗಿ ಪುರಂದರವಿಠಲನೆನ್ನದವರ ಸಂಗ ಬೇಡ ॥ ೩ ॥

ರಾಗ—ನಾದನಾಮಕ್ರಿಯೆ ॥ ಝಂಪೆತಾಳ ॥

14. ರಾಗಿ ತಂದಿರ್ಯಾ । ಭಿಕ್ಷಕೆ । ರಾಗಿ ತಂದಿರ್ಯಾ ॥ ಪ ॥ ಯೋಗ್ಯರಾಗಿ ಭೋಗ್ಯರಾಗಿ ॥ ಭಾಗ್ಯವಂತರಾಗಿ ನೀವು ॥ ಅ ॥ ಪ ॥ ಅನ್ನದಾನ ಮಾಡುವರಾಗಿ ॥ ಅನ್ನಛತ್ರ ನಿಟ್ಟವರಾಗಿ ॥ ಅನ್ಯವಾರ್ತೆಯ ಬಿಟ್ಟವರಾಗಿ । ಅನುದಿನದಿ ಭಜನೆಯ ಮಾಡುವರಾಗಿ ॥ ೧ ॥ ಮಾತಾಪಿತೃಗಳ ಸೇವಿಪರಾಗಿ ॥ ಪಾಪಕಾರ್ಯವ ಬಿಟ್ಟವರಾಗಿ ॥ ಜಾತಿಯಲ್ಲಿ ಮಿಗಿಲಾದವರಾಗಿ ॥ ನೀತಿಮಾರ್ಗದಲಿ ಖ್ಯಾತರಾಗಿ ॥ ೨ ॥ ಗುರುಕಾರುಣ್ಯವ ಪಡೆದರಾಗಿ ॥ ಗುರುವಿನ ಮರ್ಮವ ತಿಳಿದವರಾಗಿ ॥ ಗುರುವಿನ ಪಾದವ ಸ್ಮರಿವರಾಗಿ ॥ ಪರಮಪುಣ್ಯವ ಮಾಡುವರಾಗಿ ॥ ೩ ॥ ಶ್ರೀನಿವಾಸನ ಸ್ಮರಿ

ರಾಗಿ ॥ ಪ್ರಾಣರಾಯನ ದಾಸರಾಗಿ ॥ ದಾನಕೆಂದು ಬಲು ಹೆದರಿ ಇಂಥ ॥ ದೀನವೃತ್ತಿಯಲಿ ಹೀನರಾಗಿ ॥ ೪ ॥ ಪಕ್ಷಮಾಸವೃತವಮಾಡುವರಾಗಿ । ಪಕ್ಷಿವಾಹನನಗೆ ಪ್ರಿಯರಾಗಿ ॥ ಕುಕ್ಷಿಲಿ ಕಲುಷ ಇಲ್ಲದವರಾಗಿ ॥ ಭಿಕ್ಷ ಕರು ಅತಿ ತುಚ್ಛರಾಗಿ ॥ ೫ ॥ ವೇದಪುರಾಣವ ತಿಳಿದವರಾಗಿ ॥ ಮೇದಿನಿ ಆಳುವರಂಥವರಾಗಿ ॥ ಸಾಧುಧರ್ಮಗಳಾಚರಿಸುವರಾಗಿ ॥ ಓದಿ ಗ್ರಂಥಗಳ ಪಂಡಿತರಾಗಿ ॥ ೬ ॥ ಆರುಮಾರ್ಗವ ಅರಿತವರಾಗಿ ॥ ಮೂರುಮಾರ್ಗವ ತಿಳಿದವರಾಗಿ ॥ ಭೂರಿತತ್ವವ ಬೆರದವರಾಗಿ ॥ ಕ್ರೂರರಾಸಂಘ ಬಿಟ್ಟವರಾಗಿ ॥ ೭ ॥ ಕಾಮಕ್ರೋಧ ಅಳಿದವರಾಗಿ ॥ ನೇಮನಿತ್ಯವ ಮಾಡುವರಾಗಿ ॥ ಆ ಮಹಾಪದವಿಯ ಸುಖಿಸುವರಾಗಿ ॥ ಪ್ರೇಮದಿ ಕುಣಿಕುಣಿದಾಡುವರಾಗಿ ॥ ೮ ॥ ಸಿರಿರಮಣನ ಸದಾ ಸ್ಮರಿಸುವರಾಗಿ । ಗುರುತಿಗೆ ಬಾಹೋರಂಥವ ರಾಗಿ ॥ ಕರಕರೆ ಸಂಸಾರವ ನೀಗುವರಾಗಿ ॥ ಪುರಂದರವಿಠಲನ ಸೇವಿಪ ರಾಗಿ ॥ ೯ ॥

ರಾಗ—ಸುರಟಿ ॥ ಆದಿತಾಳ ॥

15. ಕೊಡುವ ಕರ್ತು ಬ್ಯಾರೇ ॥ ಇರುತಿರೆ ಬಿಡುಬಿಡು ಚಿಂತೆಯನು ॥ ಪ ॥ ಒಡೆಯನಾಗಿ ಮೂಜಗವನು ಪಾಲಿಪ ॥ ಬಡವರುದ್ಧಾರಕ ಭಕ್ತರೊಡೆಯ ಹರಿ ॥ ಅ । ಪ ॥ ಕಲ್ಲಿನೊಳಗೆ ಇರುವ ॥ ಕಪ್ಪೆಗೆ ॥ ಅಲ್ಲಿ ಉದಕ ಕೊಡುವ ॥ ಎಲ್ಲ ಜೀವಿಗಳನೆ ಕಾವ ॥ ವಲ್ಲಭ ಶ್ರೀಹರಿ ಎಲ್ಲ ತುಂಬಿರುತಿರೆ ॥ ಕೊಡುವ ॥ ೧ ॥ ಆನೆಗೈದುಮಣದ ಆಹಾರವ । ತಾನೆ ನಿತ್ಯ ಈವ ॥ ದೀನರೊಡೆಯ ಶ್ರೀನಿವಾಸ ॥ ದಯಾನಿಧಿ ॥ ಮಾನದಿಂದ ಕಾವ ಭಾನುಕೋಟಿ ತೇಜಕೊಡುವ ॥ ೨ ॥ ಸರಸಿಜಾಕ್ಷ ತನ್ನ ಸೇರುವ ॥ ನರರ ಬಿಡನು ಘನ್ನ ॥ ಪರಮದಯಾನಿಧಿ ಭಕತರ ಸಲಹುವ ॥ ಪುರಂದರ ವಿಠಲ ಪುಷ್ಪಶರನಪಿತ ॥ ಕೊಡುವ ಕರ್ತು ಬ್ಯಾರೇ ॥

ರಾಗ—ಶಂಕರಾಭರಣ ॥ ಆದಿತಾಳ ॥

16. ಮಡಿಮಡಿಯೆಂದೂ ಅಡಿಗಡಿ ಹಾರುವಿ ॥ ಮಡಿಮಾಡುವಬಗೆ ಬ್ಯಾರುಂಟು ॥ ಪ ॥ ಪೊಡವಿಪಾಲಕನ ಪಾದಧ್ಯಾನವನು । ಬಿಡದೆಮಾಡು ವದು ಮಡಿಯೂ ॥ ಅ ॥ ಪ ॥ ಬಟ್ಟೆನೀರೊಳಗಿಟ್ಟು ॥ ಮುಣಾಗಿ ನೀ । ಟ್ಟರೆ ಅದು ಬೇರೆ ಮಡಿಯಲ್ಲ ॥ ಹೊಟ್ಟೆಯೊಳಗಿನ ಕಾಮಕ್ರೋಧಮದ

ಮತ್ಸರ । ಬಿಟ್ಟುಬಿಡುವದು ಅದು ಮಡಿಯೂ ॥ ೧ ॥ ದಶಮಿದ್ವಾದಶಿ ಪುಣ್ಯದಿನದಲಿ ॥ ವಾಸುದೇವನ ಪೂಜೆವಿಶೇಷ ಮಾಡದೆ ॥ ದೋಷಕಂಜದೆ ಪರರನ್ನ ಭುಂಜಿಸಿ ಯಮ । ಪಾಶಕೆ ಸಿಲುಕುವದದು ಮಡಿಯೆ ॥ ೨ ॥ ಭೂಸುರರು ಮಧ್ಯಾಹ್ನಕಾಲಕೆ । ಹಸಿದುಬಸಿದು ಮನೆಗೆ ಬಂದರೆ ॥ ಮಸಣಿಗೊಂಡು ಗತಿಯಿಲ್ಲವೆಂದು ತಾ ॥ ಹಸನಾಗಿ ಉಂಬೋದು ಹೊಲೆಮಡಿಯೂ ॥ ೩ ॥ ಇಚ್ಛೆಯಿಲ್ಲದ ಮಲಮೂತ್ರ ಶರೀರವ । ನೆಚ್ಚಿ ಕೆಡಲುಬೇಡ ಎಲೆ ಜೀವನೆ ॥ ಅಚ್ಯುತಾನಂತ ನಾಮಸ್ಮರಣೇಲಿ ॥ ಸಂಚಿತಕಳೆವದು ಅದು ಮಡಿಯೂ ॥ ೪ ॥ ಹಿರಿಯರುಗುರುಗಳು ಹರಿದಾಸರ ಕಂಡು ॥ ಚರಣಕ್ಕೆರಗಿ ಭಕ್ತಿಯಲಿ ತರಿಸು । ಹರಿವದೆ ಪುರಂದರ ವಿಠಲನ ಬಿಡದೆ ॥ ಸ್ಮರಿಸುವದದು ಮಡಿಯೂ ॥ ೫ ॥

ರಾಗ—ಪಂತುವರಾಳಿ ॥ ಅಟತಾಳ ॥

17. ಜಾಲಿಯಮರವಂತೆ ದುರ್ಜನರು ॥ ಜಾಲಿಯಮರವಂತೆ ॥ ಪ ॥ ಮೂಲಾಗ್ರಪರಿಯಂತ ಮುಳ್ಳು ॥ ಕೂಡಿಪ್ಪಂಥಾ ॥ ಅ. ಪ ॥ ಬಿಸಿಲಲ್ಲಿ ಬಂದವರಿಗೆ ನೆರಳಿಲ್ಲ ॥ ಹಸಿದುಬಂದವರಿಗೆ ಹಣ್ಣೂ ಇಲ್ಲ ॥ ಕುಸುಮವಾಸನೆ ಇಲ್ಲ ॥ ಕುಡಿಯುಲು ನೀರಿಲ್ಲ ॥ ರಸದಲಿ ಸ್ವಾದವು ವಿಷದಂತೆ ಇರುತಿಹ ॥ ೧ ॥ ಊರಹಂದಿಗೆ ಷಡ್ರಸಾನ್ನವನ್ನಿಕ್ಕಲು ನಾರುವ ದುರ್ಗಂಧ ಬಿಡುವದುಂಟೇ ॥ ಘೋರಪಾಪಿಗೆ ತತ್ವಜ್ಞಾನಹೇಳಿದರೆ ॥ ಕ್ರೂರಬುದ್ಧಿಯ ಬಿಟ್ಟು ಸಜ್ಜನಾಗುವನೇ ॥ ೨ ॥ ತನ್ನಿಂದ ಉಪಕಾರ ತಟುಕಾದರೂ ಇಲ್ಲಾ ॥ ಬಿನ್ನಹೆಮಾಡುವ ಮನುಜರಲ್ಲಿ ॥ ಅನ್ನಕ್ಕೆ ಸೇರಿದವರ ಪ್ರಯೋಜನದಷ್ಟು ॥ ಇನ್ನಿವರಕಾರ್ಯವು ಪುರಂದರವಿಠಲ ॥ ೩ ॥

ರಾಗ—ಧನಾಶಿ ॥ ಆದಿತಾಳ ॥

18. ಹರಿಕೃಪೆಯಲಿತಾನೊಲಿದದ್ದಾದರೆ । ಉರುತರಮೋಕ್ಷವೆ ಸಾಕ್ಷಿ ॥ ಪ ॥ ಹರಿಚರಣವ ಸೇವಿಸುವ ನರರಿಗೆ॥ ಧರೆಯಸೌಖ್ಯವೇ ಸಾಕ್ಷಿ ॥ಅ.ಪ॥ ಮಡದಿಮಕ್ಕಳ ಸಾಕದೇ ಬಿಡುವಗೆ ॥ ಕಡುದಾರಿದ್ರ್ಯವೇ ಸಾಕ್ಷಿ ॥ ಕಡುಬಡವಗೆ ಧರ್ಮವಮಾಡಿದಗೆ ದಿವ್ಯ । ಅನ್ನಉಂಬುವದೆ ಸಾಕ್ಷಿ ॥ ಹೊನ್ನುದಾನವಮಾಡದವಗೆ ಪರರಿಗೆ । ದೈನಬಡುವದೇ ಸಾಕ್ಷಿ ॥ ೧ ॥ ಕನ್ಯಾದಾನವು ಮಾಡಿದವಗೆ ದಿವ್ಯ ಹೆಣ್ಣಿನಭೋಗವೇ ಸಾಕ್ಷಿ ॥ ಕನ್ಯಾದಾನವ

ಮಾಡದವನಿಗೆ॥ ಹೆಣ್ಣಿನಹೋರಾಟವೇ ಸಾಕ್ಷಿ ॥ ೨ ॥ ಕಂಡಪುರುಷರಿಗೆ ಕಣ್ಣಿ ಕ್ಕುವಳಿಗೆ ಗಂಡನಕಳಿವೊದೆ ಸಾಕ್ಷಿ ॥ ಬಂಡತನವಿ ಪರಸ್ತ್ರೀಯಮೆಚ್ಚುವಗೆ ॥ ಹೆಂಡರಕಳೆವದೆ ಸಾಕ್ಷಿ ॥ ೩ ॥ ಕ್ಷೇತ್ರದಾನವ ಮಾಡಿದವನಗೆ ॥ ಏಕಛತ್ರ ರಾಜ್ಯವೇ ಸಾಕ್ಷಿ ॥ ಪಾತ್ರಾಪಾತ್ರವರಿತುಮಾಡಿದವನಗೆ ॥ ಪುತ್ರರಪಡೆವದೆ ಸಾಕ್ಷಿ ॥ ೪ ॥ ಪರಿಪರಿತಾನುಂಡು ॥ ಪರರಿಗೊಂದಿಕ್ಕದ । ನರಗೆ ಗುಲ್ಮ ರೋಗವೇ ಸಾಕ್ಷಿ ॥ ಪರಿಪರಿಯಿಂದಲಿ ಹಿರಿಯರರದೂಷಿಪೆ। ತಿರಿದುಂಬೋದೆ ಬಲುಸಾಕ್ಷಿ ॥ ೫ ॥ ಭಕ್ತಿಯಿಲ್ಲದ ಅಧಮಂಗೊಂದು । ಕತ್ತಲೆಮನೆಯೆ ಸಾಕ್ಷಿ ॥ ಮುಕ್ತಿಪಡೆವುದಕೆ ಶ್ರೀ ಪುರಂದರವಿಠಲನ ಭಕ್ತನಾಗಿ ಇರುವದೆ ಸಾಕ್ಷಿ ॥ ೬ ॥

ರಾಗ—ಪಂತುವರಾಳಿ ॥ ಅಟತಾಳ ॥

19. ಸಾರಿದಡಂಗುರ ಯಮನು । ಪಾಪಿ । ನಾರಿಯರೆಳೆತಂದು ನರಕ ದೊಳಿಡಿರೆಂದು ॥ ಪ ॥ ಹೊತ್ತಾರೆದ್ದು ಪತಿಗೆರಗದವಳ । ಮೃತ್ತಿಕೆಶೌಚ ಮಾಡದಿಪ್ಪಳಾ ॥ ಬತ್ತಲೆಕುಳಿತು ಮೈತೊಳೆವಳ ನಾದಿನಿ ಅತ್ತೆಮಾವನ ಬೈವಳೆಳತನ್ನಿರೋಯೆಂದು ॥ ೧ ॥ ತಿಲಕಾಯುಧವಬಿಟ್ಟು ಕುಂಕುಮನಿಡು ವಳ ಬೆಳಗಾದಕಾಲಕ್ಕು ಮಲಗಿಪ್ಪಳಾ ॥ ಮಲಿನವಸ್ತ್ರದಿ ಪತಿಬಳಿಗೆ ಪೋಗು ವ ಕಲಹಕಾರಿಯ ಪಿಡಿದೆಳತನ್ನಿರೋಯೆಂದು ॥ ೨ ॥ ಉತ್ತುಮ ಗುರುಹಿರಿ ಯರ ನಿಂದಿಸುವಳ ಹೆತ್ತಮಕ್ಕಳ ಮಾರಿಬದುಕುವಳಾ ॥ ಪ್ರತ್ಯೇಕಶಯ್ಯದಿ ಮಲಗಿಪ್ಪವಳಾ ಪಿಡಿದೊತ್ತಿವದರಿ ಕೂಗಿ ಎಳದುತನ್ನಿರೋಯೆಂದು ॥ ೩ ॥ ಜಲಜಕ್ಕಿಸಾಳಿ ಕಂಬಳಿ ಬಾಳಿ ಬಾಕಿ ಗೊದಲಿ ಮೊದಲಾದಿಹದ್ಯೆವವೆಂದು । ತಿಳಿದು ಪಿಶಾಚಿಯೆಂಜಲ ಉಂಡುಹಿಗ್ಗುವ ಲಲನೇರನಾಲಸ್ಯಗೊಳದೆ ತನ್ನಿ ರೋಯೆಂದು ॥ ೪ ॥ ವಲಿವ ಅವುಷಧಮಾಡಿ ಪತಿವಲಿಸುವಳ ಮಲಮಕ್ಕ ಳೊಳು ಮತ್ಸರಿಸುತಿಪ್ಪಳಾ ॥ ಕಳವಿಲಿ ಕಾಂತನ ಧನವಂಚಿಸುವಳ ಗಳಕೆ ಪಾಶವಕಟ್ಟಿ ಎಳತನ್ನಿರೋಯೆಂದು ॥ ೫ ॥ ನಾಗೇಂದ್ರಶಯನನ ದಿನದಲಿ ಉಪವಾಸಜಾಗರ ಮಾಡದೆಮಲಗಿಪ್ಪಳಾ । ಭಾಗವತಾದಿ ಶಾಸ್ತ್ರವಕೇಳದೆ ಮತ್ತಳಾಗಿ ತಿರುಗುವಳ ಎಳದುತನ್ನಿರೋಯೆಂದು ॥ ೬ ॥ ಉಡಲಿಲ್ಲ ಉಣಲಿಲ್ಲ ಇಡಲಿಲ್ಲ ತೊಡಲಿಲ್ಲ ಸುಡಲಿಗಂಡನ ಒಗತನವೆನ್ನುತಾ ॥ ಹಡ ದವರ ನುಡಿನುಡಿಗೆ ಬೈಯುತಲಿಪ್ಪ ಕಡುಪಾಪಿಗಳೆಡಮುಡಿಕಟ್ಟಿತಾಯೆಂದು

॥ ೭ ॥ ಗಂತ ನಿರ್ಘನಿಕನೆಂದಸವಾನವಾಳ್ಪಳ ಉಂಡು ಶೇಷಾನ್ನವನುಣಿಸುವಳಾ ॥ ಕೊಂಡೆವಾತುಗಳಿಂದ ಕಳವಳಗೊಳಿಪಳ ಮಂಡೆಕೂದಲುಹಿಡಿದೆಳೆವುತನ್ನಿರೋಯೆಂದು ॥ ೮ ॥ ಸಾಲೆಶೆಗಳ ಭೇದವಾಡಿ ಬಡಿಸುವಳ 'ನೀಲಾಂಬರನುಟ್ಟು ಮಡಿಯೆಂಬಳಾ ॥ ಬಾಲಕರನ ಒಡಿದಳಿಸುತಿಹಳ ಹಿಂಗಾಲ ತೊಳೆಯದವಳೆಳತನ್ನಿರೋಯೆಂದು ॥ ೯ ॥ ವಿಾಸಲಮಡಿಯೆನ್ನದಲೆ ಭಕ್ಷಿಸುವಳ ಸಕೇಶಿಯೊಡನೆ ಗೆಳತನವಾಳ್ಪಳಾ ॥ ದಾಸೀರಿಂವಲಿ ಶಾಕಪಾತ್ರೆ ಮುಟ್ಟಿಸುವಳ ಪಾಶದಿಂದಲಿ ಬಿಗಿದೆಳದುತನ್ನಿರೋಯೆಂದು ॥ ೧೦ ॥ ಪತಿಗೆಬೇಕಾದವರೊಳು ಮತ್ಸರಿಸುವಳ ವೃತವತ್ಸಗೋವಿನಪಾಲುಂಬಳಾ॥ ಹುತವಹನನ ಪಾದತಳದಿ ನೋದಿರಿಸುವಳ ಮಿತಿಯಿಲ್ಲದೆ ಬಿಡದೆಳದುತನ್ನಿರೋಯೆಂದು ॥ ೧೧ ॥ ಮಿಥ್ಯಾವಾದಿಯು ಕೂಡತಿಸ್ನೇಹವಾಳ್ಪಳಾ ಸತ್ತವರ ನೆನದಳುತಿಪ್ಪಳಾ ॥ ದತ್ತಾಪಹಾರವಾಡುತಿಪ್ಪಳ ನೀಚವೃತ್ತಿಲಿ ಬದುಕುವಳೆಳತನ್ನಿರೋಯೆಂದು ॥ ೧೨ ॥ ಲಶುನವೃರಿತಾಕಾದಿಗಳ ಭಕ್ಷಿಸುವವಳ ಸೊಸೆಯೊಡನೆ ಮತ್ಸರಿಸುವವಳಾ ॥ ಹಸಿದು ಬಂದವರಿಗೆ ಅಶನವಿಲ್ಲೆಂಬಳ ಉಸುರುಬಿಡದಂತೆ ಎಳದುತನ್ನಿರೋ ಎಂದು ॥ ೧೩ ॥ ತುಳಸಿವೃಂದಾವನಕಭಿನಮಿಸವಳ ಜಲವಶೋಧಿಸದೆ ಪಾಕವಮಾಳ್ವಳಾ ॥ ಫಲಧಾನ್ಯಾದಿಗಳ ನೋಡದೆ ಪಾಕವಾಳ್ವಳಗಳಕೆ ಪಾಶವಹಾಕಿ ಎಳತನ್ನಿರೋ ಎಂದು॥ ೧೪ ॥ ಬಾಲಕರ ತೊಟ್ಟಿಲೊಳಗಿಟ್ಟು ತೂಗುತ ಹಾಲೆರವುತ ಬೀಸುತಕುಟ್ಟುತಾ ॥ ಆಲಯದೊಳು ಕೆಲಸಗಳವಾಡುತ ಲಕ್ಷ್ಮೀಲೋಲನ ಗುಣವಪಾಡುವರ ನೋಡದಿರೆಂದು ॥ ೧೫ ॥ ಅರಸಿನ ಕುಂಕುಮ ಪುಷ್ಪಾಂಜನ ವಸ್ತ್ರಾಭರಣಭೂಷಿತಳಾಗಿ ಪತಿಯೊಡನೆ ॥ ಸರಸವಾಡುವ ಸುಖಹರಿಗೆ ಸಮರ್ಪಿಸಿ ಹರುಷಬಡುತಲಿಪ್ಪವರ ಮುಟ್ಟದಿರಿ ಎಂದು ॥ ೧೬ ॥ ಅಗಣಿತ ಮಹಿಮ ಶ್ರೀ ಜಗನ್ನಾಥ ವಿಠಲನ ಹಗಲುಇರುಳು ಬಗೆ ಬಗೆಯಿಂದಲಿ ॥ ಪೊಗಳುವ ದಾಸರ ಬಗೆಯಚ್ಚರಿಕೆಯಲ್ಲಿಸುಗುಣೆರೆಂದಡಿಕ್ಕೈಮುಗಿದುಬನ್ನಿರೋ ಎಂದು ॥೧೭॥

॥ ರಾಗ — ಶಂಕರಾಭರಣ — ಆದಿತಾಳ. ॥

20. ಹರಿ ನಿನ್ನೊಲುಮೆಯು ಆಗುವ ತನಕ । ಅರಿತು ಸುಮ್ಮನಿರುವದು ಲೇಸು ॥ ಪ ॥ ಮರಳಿ ಮರಳಿತಾ ಪಡೆಯದ ಆಶೆಗೆ ಭ್ರಮಿಸಿದರೆ ಭವ ಹಿಂಗಿತೇ ॥ ಅ. ಪ ॥ ದೂರುಬಹ ನಂಬಿಗೆಯನು ಕೊಟ್ಟರೆ ದುರ್ಜನ ಬರು

ವದು ತಪ್ಪೀತೇ ॥ ದೂರದಲ್ಲಿ ನಿಂತು ನೋರೆಯಿಟ್ಟು ಕೂಗಲು ಜೋರಗೆ ದಯವು ಪುಟ್ಟೀತೇ ॥ ಜಾರೆಗೆ ನೀ ಪತಿವ್ರತೆಯೆನ್ನಲು ಜಾರನಿಗೆ ನಿಜವು ತೋರಿತೇ ॥ ಊರುಬಿಟ್ಟು ಬೇರೂರಿಗೆ ಹೋದರೆ ಪ್ರಾರಬ್ಧವು ಬೇರಾದಿತೇ॥ ಹರಿ ॥ ೧ ॥ ಪಟ್ಟೆಮಂಚತರಿಸಿಟ್ಟರೆ ಫಣೆಯೊಳು ಮೆಟ್ಟಿದ ಭ್ರಮಣೆಯು ಬಿಟ್ಟೀತೇ ॥ ಹೊಟ್ಟೆಯಲ್ಲಿ ಸುತರಿಲ್ಲೆಂದು ದೂರಲು ಹುಟ್ಟು ಬಂಜೆಗೆ ಫಲ ವಾದೀತೇ ॥ ಬೆಟ್ಟದ ನವಿಲಿಗೆ ಕಣ್ಣೀರು ಬಂದರೆ ಬೇಟೆಗಾರಗೆ ದಯಪುಟ್ಟೀ ತೇ ॥ ಕೆಟ್ಟಹಾವು ಕಚ್ಚಿದ ಘಾಯಕೆ ಹಳೆ ಬಟ್ಟೆಯೊಳೊರಸಿದಹೋದೀತೇ ಹರಿ ॥ ೨ ॥ ಧನಿಕನೊಡನೆ ತಾ ಪಾಡಿಪೊಗಳಲು ದಾರಿದ್ರ್ಯವು ಬೇರಾದೀತೇ॥ ದಿನದಿನ ನೊಸಲೊಳುತಿರುಮಣಿ ಇಟ್ಟರೆ ದೇವರ ದಯವು ಪುಟ್ಟಿತೇ ॥ ಎಣಿ ಸಿಕೊಂಡು ಹಂಚಿಗಳನೂತರೆ ಮಣಿಯದ ಸಾಲವು ತೀರೀತೇ ॥ ಅನುದಿನ ಪುರಂದರ ವಿಠಲನ ನಾಮವ ನೆನೆದಲ್ಲದೆ ಭವ ಹಿಂಗೀತೇ ॥ ಹರಿ ॥ ೩ ॥

॥ ರಾಗ=ಮುಖಾರಿ ಝಂಪೆತಾಳ ॥

21. ಮಾನ ಹೀನನಿಗಭಿಮಾನವೇಕೆ । ಜ್ಞಾನವಿಲ್ಲದವಗೆ ಗುರು ಬೋಧೆ ಏಕೇ ॥ಪ॥ ಅಂಬಿಲಿಯುಂಬುವಗೆ ಅಮೃತಾನ್ನ ಕೊಡಲೇಕೆ ॥ ಕಂಬ ಳಿಯ ಹೊದಿನವಗೆ ಶಾಲು ಯಾಕೆ। ಡಂಭಕನೆನಿಸುವಗೆ ಗಂಭೀರತನವೇಕೆ। ಹಂಬಲಿಸುವವಗೆ ವೈರಾಗ್ಯವೇಕೆ ॥ ೧ ॥ ಭೂಸುರರ ಕೊಲ್ಲುವಗೆ ದಾನ ಧರ್ಮಗಳೇಕೆ । ಭಾಷೆಗೆಡುಕನಿಗೆ ನಂಬಿಗೆಯಾತಕೇ । ಕ್ಲೇಶ ಒಡಲೊಳಗಿ ರಲು ತೀರ್ಥಯಾತ್ರೆಗಳೇಕೆ। ಆಶೆಬಿಡದಿರ್ಪಗೆ ಸನ್ಯಾಸವೇಕೆ ॥ ೨ ॥ ಕಾಡಿನಲಿ ತಿರುಗುವಗೆ ಕನಕಭೂಷಣವೇಕೆ । ಓಡಿನಲಿ ಉಂಬುವಗೆ ಹರಿವಾಣವೇಕೆ । ಬೇಡಿದರೆ ಕೊಡದ ಲೋಭಿಗೆ ಬಿಂಕತನವೇಕೆ । ಪಾಡದರಸನಿಗೆ ಜಾಣತನ ವೇಕೆ ॥ ೩ ॥ ಕ್ಷಿತಿಯೊಳಗೆ ಸತಿಯರಾಳದವಗೆ ಸುತರೇಕೆ । ಸತಿಗಳುಕುವಗೆ ನೋಡಿತಾನೇತಕೆ ॥ ಮಿತವರಿತು ನಡೆವವಗೆ ಮಂತ್ರತಂತ್ರಗಳೇಕೆ। ಸುತರಿಲ್ಲ ದವಗೆ ಪೂಜ್ಯತ್ವವೇಕೆ ॥ ೪ ॥ ಆಳು ಇಲ್ಲದವನಿಗೆ ಅರಸುತನ ತಾನೇಕೆ । ಕಾಲು ಇಲ್ಲದವರಿಗೆ ಕೃಷಿಯೇತಕೇ ॥ ತೋಳು ಇಲ್ಲದವನಿಗೆ ಭುಜಕೀರ್ತಿ ತಾನೇಕೆ । ಲೋಲ ಪುರಂದರ ವಿಠಲನೆನ್ನದವನೇಕೆ ॥ ೫ ॥

॥ ರಾಗ=ಕೇದಾರಗೌಳ=ಝಂಪೆ ತಾಳ ॥

22. ದುರ್ಜನರ ಸಂಗ ಎಂದಿಗೊಲ್ಲೆನು ಹರಿಯೇ । ಸಜ್ಜನರ ಸಂಗ

ದೊರೆಗಿರಿಸಿದ್ದ ರಂಗಾ ॥ಪ॥ ನಂಬಿದಾ ಠಾವಿನಲಿ ಕೇಡನೆಣಿಸನ ಸಂಗ ॥ ಸಂ
ಭ್ರಮದಿ ಜಗಳಕಾಯುವನ ಸಂಗಾ ॥ ಹಂಬಲಿಸಿ ಭವದಸುಖ ಮೆಚ್ಚಿದಾತನ
ಸಂಗ ॥ ರಂಬೆ ಸ್ತ್ರೀಯರ ನೋಡಿ ಮೋಹಿಸುವನ ಸಂಗ ॥ ೧ ॥ ಕುಳಿತಿಹ ಸಭೆ
ಯೊಳು ಕುಹಕ ಮಾತ್ವನ ಸಂಗ। ಬಲು ಬೇಡೆ ಕೊಡದಿಹಾ ಲೋಭಿಸಂಗ ॥
ಕೂಲಹೀನನಾ ಕೂಡೆ ಸ್ನೇಹಬೆಳಿಸುವ ಸಂಗ । ಹಲವು ಮಾತಾಡಿ ಆಚರಿಸ
ದವನ ಸಂಗ ॥ ೨ ॥ ಆಗ ಮಹಾತ್ಮೆಯನು ಅರಿಯದಾತನ ಸಂಗ । ಯೋ
ಗಿಜನ ಗುರುಗಳ ನಿಂದಿಸುವ ಸಂಗ ॥ ರಾಗದ್ವೇಷಾದಿಯಲಿ ಮುಣುಗೇಳುವನ
ಸಂಗ ॥ ಕಾಗಿನೆಲೆಯಾದಿಕೇಶವ ಬಿಡಿಸೀ ಭಂಗ ॥ ೩ ॥

ರಾಗ—ರೇಗುಪ್ತಿ ॥ ಆದಿತಾಳ ॥

23. ಸಾರಿಮೂರಿ ಹೇಳುತ್ತೇನೆ । ಕೆಟ್ಟಕಂಡ್ಯ ಬುದ್ಧಿಮನವೆ ॥ ದುರ್ಬು
ದ್ಧಿಮಾಡಬೇಡ ಕೈಯೊಳಿಕೊಕತ್ತಿ ನಿನ್ನ ಕೈಯೊಳಿಕೊಕತ್ತಿ ॥ ಪ ॥ ಕೋ
ಪವನ್ನೇ ಮಾಡದಿರು ॥ ಪಾಪಕೆ ಗುರಿಯಾಗದಿರು ॥ ಶ್ರೀಪತಿಯು ನಾನು
ವನ್ನು ॥ ನೀಪಠಿಸುತಲಿರು ಮನವೇ ॥ ೧ ॥ ಅಪ್ಪನುದದಿ ಮೆರೆಯದಿರು ।
ನಷ್ಟಕೆ ಗುರಿಯಾಗದಿರು ॥ ದುಷ್ಟಸಂಗವನ್ನುಮಾಡಿ ॥ ಭ್ರಷ್ಟನಾಗಬೇಡ
ಮನವೆ ॥ ೨ ॥ ಸಿರಿಯನೆಚ್ಚಿ ಮೆರೆಯದಿರು ॥ ಬರಿದೆ ಹೊತ್ತು ಕಳೆಯದಿರು ॥
ಪರರನಿಂದೆಯನ್ನು ಮಾಡಿ ॥ ನರಕಿಯಾಗಬೇಡ ಮನವೇ ॥ ೩ ॥ ಕಾಯವನು
ನಂಬದಿರು ॥ ಮಾಯಕೆ ಮರುಳಾಗದಿರು ॥ ಸ್ತ್ರೀಯರನ್ನು ಕಂಡುನೀನು
ಬಯಸದಿರು ಮರುಳು ಮನವೇ ॥ ೪ ॥ ನಿನ್ನ ನಿಜವ ನಂಬದಿರು । ಉನ್ನ
ತಾಶೆ ಮಾಡದಿರು ॥ ಚೆನ್ನಾದಿಕೇಶವನಪಾದ । ವನ್ನು ನೀನು ನಂಬು
ಮನವೇ ॥ ೫ ॥

ರಾಗ—ಶಂಕರಾಭರಣ ॥ ಅಟತಾಳ ॥

24. ಕೇಶವನೊಲುಮೆ ಯಾಗುವತನಕ ಹರಿ । ದಾಸರೊಳಿರು ಸದಾ
ಹೇ ಮನುಜಾ ॥ ಪ ॥ ಕ್ಲೇಶಪಾಶಂಗಳ ಹರಿದುವಿಲಾಸದಿ ॥ ಶ್ರೀಶನ ನುತಿ
ಗಳ ಪೊಗಳುತ ಮನದೊಳು ॥ ಅ॥ಪ ॥ ಮೋಸದಿಜೀವರ ಘಾಸಿಮಾಡಿದ
ಪಾಪ ॥ ಕಾಶಿಗೆ ಹೋದರೆ ಹೋದೀತೇ ॥ ಶ್ರೀಶನ ಭಕತರ ದೂಷಿಸಿದಾ ಫಲ
ಕ್ಲೇಶಗೊಳಿಸದೆ ಇದ್ದೀತೇ ॥ ಭೂಸುರರನ್ನನ ಹ್ರಾಸಮಾಡಿದ ಫಲ ॥ ಏಸೇ
ಸು ಜನುಮಕೂ ಬಿಟ್ಟೀತೇ ॥ ೧ ॥ ದೀನನವಶದೊಳು ನಾನಾದ್ರವ್ಯವಿರೆ ॥

ದಾನಧರ್ಮಕೆ ಮನಸಾದೀತೇ ॥ ಹೀನ ಮನುಜನಿಗೆ ಜ್ಞಾನವ ಬೋಧಿಸೆ । ಹೀನವಿಷಯಾ ಅಳಿದ್ಹೋದೀತೆ ॥ ಮಾನಿನಿಮನಸು ನಿಧಾನವು ಇರದಿರೆ ॥ ಮಾನಾಭಿಮಾನವು ಉಳಿದಿತೇ ॥ ಭಾನುವಿಕಾಸ ಶ್ರೀಹರಿಯ ಭಜಿಸದಲೆ ॥ ಹೀನಭವಭವಣೆ ಅಳದೀತೇ ॥ ೨ ॥ ಸತ್ಯದಧರ್ಮವ ನಿತ್ಯದಿಬೋಧಿಸೆ ತೊತ್ತಿನಮನಸಿಗೆ ಸೊಗಸೀತೇ ॥ ತತ್ವದಅರ್ಥ ವಿಚಿತ್ರದಿಪೇಳಲು । ಕತ್ತೆಯಚಿತ್ತಕೆ ತಿಳಿದೀತೇ ॥ ಪುತ್ಥಳಿಬೊಂಬೆಯ ಚಿತ್ರದಿ ಬರೆದಿರೆ ॥ ಮುತ್ತನುಕೊಟ್ಟರೆ ನುಡಿದೀತೇ ॥ ಕಸ್ತೂರಿತಿಲಕವನೊತ್ತಿ ಫಣೆಯೊಳಿಡೆ । ಅರ್ತಿಯು ತೋರದೆ ಇದ್ದೀತೇ ॥ ೩ ॥ ನ್ಯಾಯವಬಿಟ್ಟನ್ಯಾಯವ ಪೇಳುವ । ಅನ್ಯಾಯಿಗೆ ನರಕವು ತಪ್ಪೀತೇ ॥ ತಾಯಿತಂದೆಗಳ ನೋಯಿಸಿದ ನ್ಯಾಯಿಗೆ । ಮುಕುತಿಯು ದೊರಕೀತೇ ॥ ಬಾಯಿಕೊಬ್ಬಿ ಜೈಯುವ ಮನುಜಗೆ ॥ ಘಾಯವು ಆಗದೆ ಬಿಟ್ಟೀತೇ ॥ ಮಾಯವಾದಗಳ ಬೋಧಿಪ ಮನುಜಗೆ । ಹೇಯನರಕವು ತಪ್ಪೀತೇ ॥ ೪ ॥ ಸಾಧುಸಜ್ಜನರ ಬಂಧಿಸುತಲಿಬಲು ॥ ವೋದಿಸನಿಗೆ ದೋಶ ತಪ್ಪೀತೇ ॥ ಬಾಧಿಸಿಬಡವರ ಅರ್ಥವನೊಯ್ವಗೆ ॥ ವ್ಯಾಧಿರೋಗವು ಬಿಟ್ಟೀತೇ ಮೇದಿನಿಯೊಳುಬಹು ಕ್ಷುದ್ರವ ಕಲಿತರೆ ॥ ನೋದವೆಂದಿಗೂ ಆದೀತೇ ॥ ಓದಿಕುತರ್ಕವ ವಾದಿಸಿಸಭೆಯುಲಿ ॥ ವೋದಿಸುವಗೆ ಸುಖವಾದೀತೇ ॥ ೫ ॥ ಅಂಗಜವಿಶಯುಗಳನು ತೊರೆದಾತಗೆ ॥ ಅಂಗನೆಯರ ರತಿ ಸೊಗಸೀತೇ ॥ ಸಂಗದುಖಃಗಳ ಹಿಂಗಿದಮನುಜಗೆ ॥ ಶೃಂಗಾರದಬಗೆ ಸೊಗಸೀತೇ ॥ ಇಂಗಿತವರಿಯುವ ಸಂಗಿಶರೀರವ ॥ ಜ್ರಾಂಗಿಯಾಗದೆ ತಾನಿದ್ದೀತೇ ॥ ಮಂಗಳಮಹಿಮ ನಾಂಘ್ರಿಯಕಾಣದ ॥ ಭಂಗಗೆಮುಕುತಿಯು ದೊರಕೀತೇ ॥ ೬ ॥ ಕರುಣಾಮೃತದಾಭರಣವ ಧರಿಸಿದ ॥ ಪರಮಗೆ ಸರಗಳದಿರಾದೀತೇ ॥ ಕರುಣಪಾಶ ದುರವಹಿತೊರದಾತಗೆ ॥ ಶರಣಸದ್ಗತಿ ತಪ್ಪೀತೇ ॥ ಅರಿತು ಶಾಸ್ತ್ರವನಾಚರಿಪ ಯೋಗಿಗೆ ॥ ಗುರು ಉಪದೇಶವು ತಪ್ಪೀತೇ ॥ ವರದ ವೇಲಾಪುರ ಚನ್ನಕೇಶವನ ॥ ಸ್ಮರಿಸುವವನಿಗೆ ಮೋಕ್ಷತಪ್ಪೀತೇ ॥ ೭ ॥

ರಾಗ— ಕೇದಾರ ಗೌಳ ಅಟತಾಳ.

25. ನೀಚನಲ್ಲವೇ ಇವನು ನೀಚನಲ್ಲವೇ ॥ ಕೀಚಕಾರಿ ಪ್ರಿಯನ ಗುಣವ ಯೋಚಿಸದಲೆ ಇಪ್ಪನರನು ॥ಪ॥ ಶ್ರೀಕಳತ್ರ ನಂಘ್ರಿಕಮಲ ಲೋಕಚಿತ್ತದಲಿಮನೋವ್ಯಾ ॥ ಕುಲಗಳಬಿಟ್ಟು ಸುಖೋದ್ರೇಕದಿಂದ ಸ್ಮರಿಸದವನು ॥ ೧ ॥ ಲೋಕವಾರ್ತೆಗಳಲ್ಲಿ ಎಡಮೂಕನೆನ್ನಿಸಿ ವಿಶಯುಗಳವ ॥ ಲೋಕಿಸ

ದಲೆ ಶ್ರೀಶನಿವುಪ್ರತೀಕವೆಂದು ತಿಳಿಯದವನೂ ॥ ೨ ॥ ಹರಿಕಥಾಮೃತವನು ಬಿಟ್ಟು ನರಚರಿತೆಯಿಂದಪಾ॥ ದುರ್ಗರಗಳಂತೆ ಹರಟೆ ದಿವಸ ಬರಿದೆಗಳವುತಿಪ್ಪ ಮನುಜ ॥ ೩ ॥ ಜನನಿಜನಿಕರಂತೆ ಜನಾರ್ಧನನು ಸಲಹುತಿರಲು ಬಿಟ್ಟು ॥ ಧನಿಕರ ಮನೆಗಳಲ್ಲಿ ಶುನಕನಂತೆ ತಿರುಗುವನು ॥ ೪ ॥ ವಿಹಿತಧರ್ಮ ತೊರೆದು ಪರರ ಗೃಹಗಳಲ್ಲಿ ಸಂಚರಿಸುತ್ತ ॥ ಕುಹಕಯುಕ್ತಿಯಿಂದ ಲೋಕ ಮಹಿತರನ್ನು ನಿಂದಿಸುವವನು ॥ ೫ ॥ ಬಹಳದ್ರವ್ಯದಿಂದ ಗರುಡವಾಹನ ನಂಘ್ರಿ ಭಜಿಸಿ ಅನು ॥ ಗ್ರಹವ ಮಾಡುಯೆಂದು ಸ್ಮರಿಸದಹಿಕಸುಖವ ಬಯಸುವವನು ॥ ೬ ॥ ಕರಣಜನ್ಯ ಪುಣ್ಯಪಾಪ ಎರಡು ಹರಿಯ ಆಧೀನ ವೆಂದು ॥ ಸ್ಮರಿಸುತಲತಿ ಭಕುತಿಯಿಂದ ಹರುಷಪಡದಲಿಪ್ಪ ಮನುಜ ॥ ೭ ॥ ಜೀವನಕರ್ತೃತ್ವ ಮರದು ದೇವನೆಂಬ ಕರ್ತರವಾ ॥ ದೇವಿವಿನೊಡಲು ಗೊಂಡು ಹರಿಯ ಸೇವಕರೆಂದರಿಯದವನು ॥ ೮ ॥ ವಾತಜನಕನೆನಿಪ ಜಗನ್ನಾಥ ವಿಠಲನ ಪಾದಾಬ್ಜ ॥ ಪೋತವಾಶ್ರೈಸಿ ಭವಕುವ್ಯೈತರಣಿಯ ದಾಟದವನು ॥ ೯ ॥

ರಾಗ—ಶಂಕರಾಭರಣ ॥ ರೂಪಕತಾಳ ॥

26. ಮುಕ್ತನಲ್ಲವೇ ಭವದಿ ಮುಕ್ತನಲ್ಲವೆ ॥ ಶಕ್ತನಾದ ಹರಿಯ ಪರಮ ಭಕ್ತಿಯಿಂದ ಭಜಿಸ ನರನು ॥ ಪ ॥ ಉದಯ ಝಾಮದಲ್ಲಿಯೆದ್ದು ಮಧುವಿರೋಧಿವಿಮಲಗುಣವ ಹೃದಯದಲ್ಲಿ ನೆನೆದು ಪರಮ ಮುದದಿ ನಲಿದು ಮಾಡುವವನು ॥ ೧ ॥ ಕೇಶವಗೆ ರಮಾಬ್ಜ ಭವಸದಾಶಿವ ಶಕ್ರಾದಿ ಸುರರು ॥ ದಾಸರು ಎಣೆಯಿಡುವ ಶಕ್ತಿ ಲೇಶವಿಲ್ಲೆಂಬ ನರನು ॥ ೨ ॥ ಒಂದಧಿಕ ದಶೇಂದ್ರಿಯಂಗಳಿಂದಿರೇಶವಿಶಯವಸಂ ॥ ಬಂಧಗೈಸಿ ವೈಷಯಿಕಸುಖ ತಂದುಕೊಡುವನೆಂಬ ನರನು ॥ ೩ ॥ ಈ ಪರಿಯಲಿ ತಿಳಿದು ಪುಣ್ಯ ಪಾಪ ಕರ್ಮ ದುಃಖಸುಖ ಜ ॥ ಯಾಪಜಯ ಮಾನಾವಮಾನ ಶ್ರೀಪಕೊಟ್ಟ ನರನು ॥ ೪ ॥ ವೇದಶಾಸ್ತ್ರಗಳಲಿ ಇಹವಿರೋಧವಾಕ್ಯಗಳನು ಶ್ರೀಪ ॥ ವೋಧತೀರ್ಥ ರುಕ್ತಿಯಿಂದ ಶೋಧಿಸುತಲಿ ವೋದಿಸುವವನು ॥ ೫ ॥ ಮಹಿತರಾಚರಿಪ ಧರ್ಮವಿಹಿತನೇ ಅಸಜ್ಜನರುಮಾಳ್ಪ ವಿಹಿತವಾದರು ಸರಿಯೆ ಅದು ಅಹಿತವೆಂದು ತಿಳಿಯುವ ನರನು ॥ ೬ ॥ ಪರಮಸೂಕ್ಷ್ಮಜೀವರೊಂದಡಿರ ಗೊಡದಲೆ ಸ್ವರ್ಗ ಭೂಮಿ ॥ ನರಕಫಲಗಳುಣಿಸಿ ಕರ್ಮ ಪರಿಹರಿಪವಹರಿ

ಯೆಂಬ ನರನು ॥ ೭ ॥ ಗುರುಹಿರಿಯರ ಮಾತುಗಳನು ಅನುಸರಿಸಿ ನಡೆದು
ಅವರೊಳಿದ್ದ ॥ ಪರಮಪೂರುಷಗರ್ಪಿಸುತಲಿ ಹರುಷಬಡುತಲಿಪ್ಪ ನರನು ॥೮॥
ಈ ಶರೀರದರಸು ಶ್ರೀನಿವಾಸವಾಕ್ಯಪ್ರಾಣ ಪಾರ್ವ ॥ ತೀಶರಿಹರೆಂದು ದೇಹ
ಪೋಶಿಸುತಲಿ ತೋಷಿಸುವನು ॥ ೯ ॥ ಪ್ರಿಯವಸ್ತುಗಳೊಳಗೆ ಅನ್ನ ಮಯನೆ
ಎನಗೆ ಎಂದು ॥ ಅನ್ಯಬಯಕೆಗಳನ.ಜರಿದು ಹರಿಯದಯವ ಬಯಸುತಿಪ್ಪ
ನರನು ॥ ೧೦ ॥ ಶತ್ರುತಾಪಕನುಳಿದು ಅನ್ಯಮಿತ್ರರಿಲ್ಲವೆಂದು ಅಹೋ ॥
ರಾತ್ರಿಯಲಿ ಬಿಡದೆ ಜಗದ್ಧಾತ್ರನ ಗುಣತುತಿಪ ನರನು ॥೧೧॥ ಬಿಂಬನೆನಿಸಿ
ಸರ್ವರ ಹೃದಯಾಂಬರದೊಳಗಿದ್ದು ಜನವಿ । ಡಂಬನಾರ್ಥಕರ್ಮಗಳ ಆ
ರಂಭಮಾಳ್ಪನೆಂಬ ನರನು ॥೧೨॥ ಅಕ್ಷರೇಡ್ಯ ಬ್ರಹ್ಮವಾಯುತ್ರ್ಯಕ್ಷಸುರಪರ
ಸುರರೊಳಗೆ ॥ ಧ್ಯಕ್ಷಶರ್ಮಕರ್ಮಗಳಲಿ ಸಾಕ್ಷಿಯೆಂದು ಸ್ಮರಿಸುವವನು
॥೧೩॥ ಶಂಬರಜಭವಾಂಡದೊಳು ಮಹಂಬರವಿಪ್ಪಂತೆ ಶ್ರೀನಿ ॥ ತಂಬನಿಸಹ
ಸರ್ವರೊಳಗೆ ತುಂಬಿಹನೆಂದರಿತ ನರನು ॥ ೧೪ ॥ ಅದ್ವಿತೀಯನಪೇಕ್ಷ ಭಕ್ತ
ಹೃದ್ವನಜನಿವಾಸಿಯೆನಿಸಿ ॥ ಕದ್ರ್ವ್ಯದವರಘವನುಣಿಪ ಅದ್ವೈತರಿಗೆಂಬ
ನರನು ॥ ೧೫ ॥ ಜಾಂಬವತಿರಮಣವಿಶಯ ಹಂಬಲವನು ಬಿಡಿಸಿ ತನ್ನ ॥
ಕಾಂಬುವ ಸುಖವಿತ್ತು ನಿಜಕುಟುಂಬದೊಳಿಡೋನೆಂಬ ನರನು ॥೧೬॥ ಅಣು
ಮಹತ್ಪದಾರ್ಥ ವಿಲಕ್ಷಣವಿಶೋಕಜೀವರೊಡನೆ ॥ ಜನಿಸಿ ಪುಣ್ಯಪಾಪಫಲ
ಗಳುಣದೆ ಉಣಿಸನೆಂಬ ನರನು ॥ ೧೭ ॥ ವಿಧಿನೀಪದವೆರಡು ಕರ್ಮಸುದತಿ
ಯರೊಡಗೂಡಿ ಸಮ ॥ ಭ್ಯಧಿಕಶೂನ್ಯಮಾಳ್ಪನೆಂದು ಪದೇಪದೇಗೆ ಸ್ಮರಿಸು
ವವನು ॥ ೧೮ ॥ ಸ್ವಾತಿವರುಷವಾರಿಕಣವ ಜಾತಕಹಾರೈಸುವಂತೆ ॥ ಶ್ವೇತ
ವಾಹನಸಖನಕಥೆಯ ಪ್ರೀತಿಯಿಂದ ಕೇಳ್ವ ನರನು ॥ ೧೯ ॥ ಲೋಕಬಂಧು
ಲೋಕನಾಥ ಲೋಕಮಿತ್ರ ಲೋಕರೂಪ ॥ ಲೋಕರಂತೆ ಲೋಕದೊಳು
ವಿಶೋಕಮಾಳ್ಪನೆಂಬ ನರನು ॥ ೨೦ ॥ ಶ್ಯಾತಕುಂಭವರ್ಣ ಜಗನ್ನಾಥವಿಠಲ
ನೆಂಬ ಮಹ॥ ದ್ಭೂತಬಡಕರಾವು ಇವನ ಭೀತಿಬಿಡದುಯೆಂಬ ನರನು ॥೨೧॥

12. ಈಗಿನ ಕಾಲ.

॥ ಪೂರ್ವಿ ॥

1. ಧರ್ಮಕ್ಕೆ ಕೈಬಾರದೀಕಾಲಾ ॥ ಪಾಪಕರ್ಮಕ್ಕೆ ಮನಸೋಲೋ
ದೀಕಾಲಾ॥ ಅ.ಪ॥ ದಂಡದ್ರೋಹಕೆಉಂಟು॥ ಪುಂಡುಪೋಕರಿಗುಂಟು॥ ಹೆಂಡತಿ

ಮಕ್ಕಳಿಗಿಲ್ಲೀಕಾಲಾ ॥ ದಿಂಡೆರಿಗುಂಟು ಜಗ ಭಂಡರಿಗುಂಟು । ಅಂಡೊಲಿ ವರಿಗಿಲ್ಲ ಈ ಕಾಲಾ ॥ ೧ ॥ ಮತ್ತೆ ಸುಳ್ಳರಿಗುಂಟು ನಿತ್ಯ ಹಾದರಕುಂಟು ಉತ್ತಮರೀಗಿಲ್ಲ ಈ ಕಾಲಾ ॥ ತೊತ್ತೆರಿಗುಂಟು ತಾಟಕಿಗುಂಟು ಹೆತ್ತ ತಾಯಿಗಿಲ್ಲ ಈ ಕಾಲಾ ॥ ೨ ॥ ಹುಸಿದಿಟವಾಯಿತು ರಸಕಸವಾಯಿತು । ಸೊಸೆಅತ್ತೆ ದಂಡಿಸೋದೀಕಾಲಾ ॥ ಬಿಸಜಾಕ್ಷ ಪುರಂದರ ವಿಠಲನ ಮನದಲ್ಲಿ ಸ್ತುತಿಸುವವರಿಗಿಲ್ಲದೀಕಾಲಾ ॥ ೩ ॥

ರಾಗ—ಪೂರ್ವಿ ॥ ಏಕತಾಳ ॥

2. ಹರಿಹರಿಯೆನಲಿಕ್ಕೆ ಹೊತ್ತಿಲ್ಲಾ ॥ ಈ ನರಜನ್ಮ ವ್ಯರ್ಥವಾಗಿ ಹೋಗುತ್ತದಲ್ಲಾ ॥ ಪ ॥ ಹರಿಜಾಗರಣೆಯಲ್ಲಿ ಪಾರಣೆಚಿಂತೆ ॥ ನಿರುತ ರಾತ್ರೆಯಲ್ಲಿ ಶಾಕದ ಚಿಂತೆ । ಸರುವ ಸತ್ಕಾರ್ಯದಿ ಧನದಮೇಲಿನ ಚಿಂತೆ । ಪುರಾಣ ಕೇಳ್ವಾಗ ಗೃಹದಚಿಂತೆ ॥ ೧ ॥ ಕರ್ಮದಿ ಒಂದು ಚಿಂತೆ ಧರ್ಮದಿ ಒಂದು ಚಿಂತೆ ॥ ಪೆರ್ಮನಮಾಡಲು ಬಲುಚಿಂತೆ ॥ ವರ್ಮವೈರದಿ ಚಿಂತೆ ॥ ಈರ್ಮನಸ್ಸಾಗೆ ಚಿಂತೆ ॥ ದುರ್ಮದದಿ ನಡಿಯೆ ಪ್ರಾಣದಚಿಂತೆ ॥ ೨ ॥ ಗಂಗೆ ಮುಳುಗುವಾಗ ಚೆಂಬುಮೇಲಿನಚಿಂತೆ ॥ ಸಂಗಡದವರು ಪೋಗುವ ಚಿಂತೆ ॥ ಪನ್ನಂಗಶಯನ ಶ್ರೀ ಪುರಂದರ ವಿಠಲನ್ನ ಹಿಂಗದೆಭಜಿಸಲು ಸತತ ನಿಶ್ಚಿಂತೆ ॥ ೩ ॥

ರಾಗ—ನಾದನಾಮಕ್ರಿಯೆ ॥ ಏಕತಾಳ ॥

3. ನಗೆಯು ಬರುತಿದೆ । ಎನಗೆ । ನಗೆಯು ಬರುತಿದೆ ॥ ಜಗದೊಳಿ ರುವ ಮನುಜರೆಲ್ಲ ಹಗರಣಮಾಡುವದು ಕಂಡು ॥ ಪ ॥ ಪರರ ವನಿತೆ ಯೊಲುಮೆಗೊಲಿದು ॥ ಹರುಷದಿಂದ ಆವಳ ನೆರೆದು ॥ ಹರಿವ ನೀರಿನೊಳಗೆ ಮುಳುಗಿ । ಬೆರಳ ಎಣಿಸುವವರ ಕಂಡು ॥ ೧ ॥ ಪತಿಯಸೇವೆ ಬಿಟ್ಟು ಪರ। ಪತಿಯಕೂಡೆ ಸರಸವಾಗಿ ॥ ಸತತ ಮೈಯ ತೊಳೆದು ಹಲವು ವೃತವ ಮಾಡ್ವ ಸತಿಯಕಂಡು ॥ ಕಾಮಕ್ರೋಧ ಮನದೊಳಿಟ್ಟು । ತಾನು ವಿಷದ ಪುಂಜನಾಗಿ ॥ ಸ್ವಾಮಿ ಪುರಂದರ ವಿಠಲನ । ನಾಮ ನೆನೆಯುವವರ ಕಂಡು ॥ ೩ ॥ ನಗೆಯು ಬರುತಿದೆ ॥ ಎನಗೆ ॥

ರಾಗ—ಪಂತುವರಾಳಿ ॥ ಅಟತಾಳ ।

4. ಹಿಂದಿಲ್ಲಾ ಸ್ವಾಮಿ ಮುಂದಿಲ್ಲಾ ॥ ಗೋವಿಂದನಲ್ಲದಲೆ । ಇಹಪರ

ವಿಲ್ಲ ॥ ಪ ॥ ಪರರಬೇಡಿಪ್ಪಂತೆ ಆಯ್ತು ಆಯಿತಲ್ಲ ॥ ನರರ ಪಾಡೆನಾಲಿಗೆ ಬಿದ್ದಿಲ್ಲ ॥ ಪರವಿಲ್ಲ ಇಹವಿಲ್ಲ ನರಜನ್ಮ ಸ್ಥಿರವಲ್ಲ ನರಗೆ ಪಾಮರಗೆ ಪಾಪದ ಪಂಜರಗೆ ॥ ೧ ॥ ತನುವು ತನ್ನದಲ್ಲ ತನ್ನವರು ತನಗಿಲ್ಲ ॥ ಅನುಕೂಲಾಗಿರೆ ಸರ್ವ ಸತಿಸುತರು ॥ ಅನುವುತಪ್ಪಿ ಮನ ತಲ್ಲಣಿಸುವಾಗ ॥ ತನುವಿಗಾಪ್ತರ್ಯಾರಿಲ್ಲವು ದೇವ ॥ ೨ ॥ ಮಾತಾಪಿತೃ ಬಂಧುಗಳು ಮುಂತಾಗಿ ಸಂ । ಪ್ರೀತಿಯೊಳಿರಲು ಮನ್ನಿಪರ್ಯೆ ಎಲ್ಲ ॥ ಕಾತುರನಾಗಿ ಯಮನು ಒಯ್ಯುವಾಗ ॥ ಸಂಗಾತ ಬರುವದಿಲ್ಲ ಪುರಂದರವಿಠಲ ॥

ರಾಗ—ಕಾಂಬೋದಿ || ಝಂಪೆತಾಳ ||

5. ಕಲಿಯುಗದ ಮಹಿಮೆಯು ಕಾಣಬಂತೀಗ ॥ ಜಲಜಾಕ್ಷ ॥ ಮೇಲ್ಗಿರಿಯ ಶ್ರೀ ವೆಂಕಟೇಶ ॥ ಪ ॥ ಹರಿಕಥೆಯನೇ ಬಿಟ್ಟು ॥ ಹೀನನುಡಿ ಕೇಳುವರು ॥ ಗುರುಹಿರಿಯರುಗಳ ದೂಷಿಸಿ ಬಾಳ್ವರು ॥ ಪೊರೆದ ತಾಯ್ತಂದೆಗಳ ॥ ಮಾತುಗಳ ಮನ್ನಿಸದೆ ॥ ತರುಣಿಯರಆಜ್ಞೆ ಪಾಲಿಸಿಸುಖಿಪರು ॥ ೧ ॥ ಪಟ್ಟದರಸಿಯ ಬಿಟ್ಟು ॥ ಪರಸತಿಯ ಬಯಸುವರು । ಕೊಟ್ಟಸಾಲವ ನುಂಗಿಕೊಳಲೆನಿಪರು ॥ ಮುಟ್ಟಭಾಷೆಯ ಕೊಟ್ಟು ಮೋಸವನೆಮಾಡುವರು ॥ ಬಿಟ್ಟು ಪರದೈವವನು ಮಾರಿಗೆರಗುವರು ॥ ೨ ॥ ಕಂಡದನು ಹೇಳರು ॥ ಕಾಣದನೆ ಪೇಳುವರು । ಉಂಡಮನೆಗೆರಡನ್ನು ಬಗೆಯುತಿಹರು ॥ ಕೊಂಡಾಡಿ ಬೇಡಿದರೆ ಕೊಡರೊಂದು ರುವ್ವಿಯನು ॥ ದಂಡಿಸಿಕೇಳುವರಿಗೆ ಧನವ ಕೊಡುತಿಹರು ॥ ೩ ॥ ಕಳ್ಳರೊಳು ಅತಿಸ್ನೇಹ ಸುಳ್ಳರೊಳು ಸೋಲುವರು ॥ ಒಳ್ಳೆಯವರೊಡನೆ ವಂಚನೆಮಾಳ್ಪರು॥ ಇಲ್ಲದ ಅನಾಥರಿಗೆ ಇಷ್ಟೊಂದನಿಕ್ಕರು । ಬಲ್ಲಿದವರಿಗೆ ಬಾಯಸವಿಯನುಣಿಸುವರು ॥೪॥ ಮಾಡಿದುಪಕಾರವನು ಮರೆತುಕೊಂಬರು ॥ ಮತ್ತೆ ॥ ಕೂಡಲೇ ಕಾಡುವರು ಕಪಟದಿಂದ ॥ ರೂಢಿಯೊಳಗೆ ನಮ್ಮ ಪುರಂದರ ವಿಠಲನ್ನ ಪಾಡಿಪೊಗಳದೆ ನಾಡವಾರ್ತೆಯಾಡುವರು ॥ ೫ ॥

ರಾಗ—ನಾದನಾಮಕ್ರಿಯೆ. ಅಟತಾಳ.

6. ಜನರನಡತೆ ಕೇಳಿರಯ್ಯಾ ॥ಪ॥ ಜನರನೋಡಿನೀವು ನಂಬದಿರಯ್ಯಾ ॥ಅ.ಪ॥ ತಾಯಿಗನ್ನವನಿಕ್ಕರಯ್ಯ । ಬಲು ॥ ಮಾಯ ಮಾತಿಗೆ ಮರುಳಾಗ್ವರಯ್ಯ ॥ ನ್ಯಾಯವೆಂಬುದು ಇಲ್ಲವಯ್ಯ ॥ ಅ ॥ ನ್ಯಾಯವೇ ಗತಿಯೆಂದು

ಸಾಧಿಪರಯ್ಯ ॥ ೧ ॥ ಉತ್ತಮ ಸ್ತ್ರೀಯಳಬಿಟ್ಟು । ತನ್ನ ॥ ವೃತ್ತಿಗಳೆಲ್ಲ ಸೂಳೆಗೆಕೊಟ್ಟು ॥ ಉನ್ಮತ್ತದ ಜನಗಳು ಕೆಟ್ಟು ॥ ಉತ್ತಮ ಪುರುಷ ಜಗ ದಲ್ಲಿ ಮುಟ್ಟು ॥ ೨ ॥ ಗಂಡನ್ನ ತಾ ಜಿಡುತಿಹಳು । ಪರ ॥ ಮಿಂಡನಕೂಡಿ ಲೋಲ್ಯಾಡುತಿಹಳು ॥ ಮುಂಡೇರು ಹೆಚ್ಚುಜಗದೊಳು । ಭೂ ॥ ಮಂಡಲ ದೊಳಗಿಂಥ॥ ನಡತೆಲ್ಲಾ ಬಹಳಾ ॥೩॥ ಹೊನ್ನುಳ್ಳ ಹೊಲೆಯ ಉತ್ತಮರು। ಅವರ॥ ಬಣ್ಣಿಸಿ ಬಾರೆಂದು ಮನೆಗೆಕರೆವರು । ಕನ್ನಕಾಂಬರವ ಕೊಡು ವರು । ಅವರಿಗೆ ॥ ಬಿನ್ನಣದಲಿ ಬಹುಉಪಚರಿಸುವರೂ ॥ ೪ ॥ ಬಡವನ ಬಾರೆನ್ನರಯ್ಯ । ಏನು ॥ ನಡತೆಯಿದ್ದರೆ ಪ್ರಯೋಜನವಿಲ್ಲವಯ್ಯ ॥ ಕಡು ಮೂರ್ಖರಿಗೆ ಕಾಲವಯ್ಯ॥ ಎನ್ನೊಡೆಯ ಪುರಂದರವಿಠಲ ಕೇಳಯ್ಯ ॥ ೫ ॥

ರಾಗ—ಮುಖಾರಿ ಝಂಪೆತಾಳ.

7. ಸತ್ಯವಂತರಿಗಿದುಕಾಲವಲ್ಲ ॥ಪ॥ ದುಷ್ಟಜನರಿಗೆ ಸುಭಿಕ್ಷೆಕಾಲ ॥ಅ.ಪ॥ ಹರಿಸ್ಮರಣೆ ಮಾಡುವಗೆ ಕ್ಷಯವಾಗುವಕಾಲ ॥ ಪರಮಪಾಪಿಗ ಳಿಗೆ ಸುಭಿಕ್ಷೆಕಾಲ ॥ ಸ್ಥಿರವಾದ ಪತಿವ್ರತೆಯ ಪರರು ನಿಂದಿಪಕಾಲ ॥ ಧರೆಗೆ ಜಾರೆಯಳ ಕೊಂಡಾಡುವಕಾಲ ॥ ೧ ॥ ಉಪಕಾರವಮಾಡಿದರೆ ಅಪಕರಿಸುವ ಕಾಲ । ಸಕಲವೃತಿಳಿದವನೆ ದುರ್ಭಿಕ್ಷಕಾಲ ॥ ಪತಿಸುತರು ಎಂಬವರ ನಂಬ ಲರಿಯದಕಾಲ । ಸಟೆಯುಳ್ಳವಿವೆ ವಿಪರೀತಕಾಲ ॥ ೨ ॥ ಧರ್ಮವ ಮಾಡು ವಗೆ ನಿರ್ಮೂಲವಾಗುವಕಾಲ । ಕರ್ಮಪಾತಕರಿಗೆ ಬಹುಸೌಖ್ಯಕಾಲ ॥ ನಿರ್ಮಲಾತ್ಮಕಸಿರಿ ಪುರಂದರವಿಠಲನ । ಮರ್ಮದೊಳು ಭಜಿಸಲರಿಯದ ಕಾಲವಯ್ಯ ॥ ೩ ॥

13. ಕರ್ಮ.

(ಸಾಕುಸಾಕು ಸಂಸಾರ) ಎಂಬಂತೆ.

1. ಆರಿಗಾದರು ಪೂರ್ವಕರ್ಮ ಬಿಡದು ॥ ಅಜಸುರಮುನಿಗಳಂಕಾಡು ತಿಹುದು ॥ಅ.ಪ॥ ವೀರಭೈರವನಂತೆ॥ ತಾನು ಬತ್ತಲೆಯಂತೆ॥ ಮಾರಿಮಸಣಿ ಗಳಂತೆ॥ ತಿರಿತಿಂಬರಂತೆ॥ ಸೂರ್ಯಚಂದ್ರಮರಂತೆ ರಾಹುವಟ್ಟುಳಿಯಂತೆ ॥

ಮೂರೆರಡುತಲೆ ಹರಗೆ ಕೈಲಿಕರ್ಪರವಂತೆ ॥ ೧ ॥ ಶಿಷ್ಟ ಹರಿಶ್ಚಂದ್ರನಿಗೆ । ಮಸಣವಡಿಗೆಯಂತೆ ॥ ಸೃಷ್ಟಿಸುವ ಬೊಮ್ಮನಿಗೆ ಶಿರಹೋಯಿತಂತೆ । ಅಷ್ಟ ದಿಕ್ಪಾಲಕರು ಶಿರೆಯಾಗಿರೋರಂತೆ ॥ ಕಟ್ಟುಗ್ರನಿಂದ್ರನಿಗೆ ಮೈಯೆಲ್ಲಾ ಕಣ್ಣಂತೆ । ೨ ॥ ಹನ್ನೊಂದಕ್ಷೋಹಿಣಿ ॥ ಬಲವುಳ್ಳ ಕೌರವನು ರಣದೊಳಗೆ ತೊಡೆಮುರಿದು ತಾನಿರ್ದನಂತೆ ॥ ವನಜಾಕ್ಷ ಸಿರಿಯರಸ ಬಲಿಯು ಬೇಡಿದನಂತೆ ॥ ವನಿತೆ ಧರ್ಮಜನ । ತಾಯ್ತಿರಿದುಂಡಳಂತೆ । ೩ ॥ ಧರೆಗೆ ಧರ್ಮಜಅಂತೆ ಕಂಕಭಟ್ಟನುಅಂತೆ॥ ಶೂರ ಭೀಮನು ಬಾಣಸಿಗನಾದನಂತೆ ॥ ವೀರಫಲ್ಗುಣನಂತೆ ॥ ಕೈಯೊಳಗೆ ಬಳೆಯಂತೆ ॥ ಸಿರಿನಕುಲಸಹದೇವ ॥ ತುರುಕಾಯ್ದರಂತೆ ॥ ೪ ॥ ಹರನ ವಾಹನವಂತೆ ಹುಲ್ಲುತಿಂಬುವನಂತೆ ॥ ವಿರಿಂಚಿವಾಹನವಂತೆ ಕಮಲ ಭಕ್ಷಿಪನಂತೆ ॥ ಹರಿಯ ಹೊತ್ತಿಹನಂತೆ ಹಾವು ಭಕ್ಷಿಸನಂತೆ ॥ ನೆಲೆಯಾದಿಕೇಶವನು ತಾ ಬೆಣ್ಣೆಗಳ್ಳನಂತೆ ॥ ೫ ॥

॥ ಸಾಕುಸಾಕಿನ್ನು ಸಂಸಾರ ॥ (ಎಂಬಂತೆ)

2. ಋಣವೆಂಬ ಸೂತಕವು ಬಹುಬಾಧಿಸುತಿದೆ ॥ಪ॥ ಗುಣನಿಧಿಯೆ ನೀ ಎನ್ನ ಋಣವಪರಿಹರಿಸೋ ॥ಅ.ಪ॥ ಕೊಟ್ಟ ಧನಿಕರುಬಂದು ನಿಷ್ಟುರದ ಮಾತಾಡಿ । ಕೆಟ್ಟಬೈಯುವರು ತಮ್ಮ ಮನದಣಿಯುಲು ॥ ದಿಟ್ಟತನದಿಂದ ಕಿವಿಗೊಟ್ಟುಕೇಳಿವೆನಯ್ಯ ॥ ಸೃಷ್ಟಿಗೊಡೆಯನೆಯೆನ್ನ ಕಷ್ಟ ಪರಿಹರಿಸೋ ॥ ೧ ॥ ಅವನ ಒಡವೆಯುತಂದು ದಾನಧರ್ಮವಮಾಡೆ । ಅವಗಲ್ಲದೆ ಪುಣ್ಯ ಇವಗ್ಯಾವದು । ಅವನ ಒಡವೆಗಳಿಂದ ತೀರ್ಥಯಾತ್ರೆಯಮಾಳ್ಪ । ಇವನ ಜೀವನ ಬಾಡಿಗೆತ್ತಿನಂದದಲೀ ॥ ೨ ॥ ಆಳಿದೊಡೆಯನಮಾತು । ಕೇಳಿ ನುಡಿಯಲುಬಹುದು । ಊಳಿಗವುಮಾಡಿ ಮನದಣಿಯುಬಹುದು । ಕಾಳಗದಿ ಪೊಕ್ಕು ಕಡಿದಾಡಿಜೈಸಲುಬಹುದು । ಪೇಳಲಳವಲ್ಲ ಋಣದವಗೊಂದು ಸೊಲ್ಲು ॥ ೩ ॥ ಹೆತ್ತಸೂತಕವು ಹತ್ತುದಿನಗಳಿಗೆ ಪರಿಹಾರ । ಮೃತ್ಯು ಸೂತಕವು ಹನ್ನೊಂದು ದಿನಕೆ । ಮತ್ತೆ ಋಣಸೂತಕವು ಜನ್ಮಜನ್ಮಾಂತರಕೆ ಎತ್ತೆತ್ತಹೋಗೆ ಬೆನ್ನ ಹತ್ತಿಕೊಂಡಿಹುದು ॥ ೪ ॥ ಬಂಧುಬಳಗದ ಮುಂದೆ । ಬಹುಮಾನವು ಹೋಗಿ । ಅಂದು ಬಾಳಿದೆನೊ ಈವಿಧಋಣದೊಳು । ಇಂದಿರಾರಮಣನೆ ಸಿರಿಪುರಂದರ ವಿಠಲನೇ ॥ ಬಂದೆನ್ನ ಋಣವನ್ನು ಪರಿಹರಿಸೋ ಹರಿಯೇ ॥ ೫ ॥

3. ನಾ ಮಾಡಿದಕರ್ಮ ಬಲವಂತವಾದರೆ । ನೀ ಮಾಡುವದೇನೋ ದೇವಾ ॥ ಸಾಮಾನ್ಯವಲ್ಲವಿದು ಬ್ರಹ್ಮ ಬರದ ಬರಹ ನೇಮದಿಂದಲಿ ಎನ್ನ ಹಣೆಯಲ್ಲಿಹೋದಕೆ ॥ ಪ ॥ ಅತಿಥಿಗಳಿಗೆ ಅನ್ನ ಕೊಟ್ಟವನಲ್ಲಾ ಪರ ಸತಿಯರ ಸಂಘವ ಘಳಿಗೆ ಬಿಟ್ಟವನಲ್ಲಾ ॥ ಮತಿಹೀನನಾನಾಗಿ ಮರುಳಾಗಿದೆನಯ್ಯಾ ॥ ಗತಿಯಾವದೆನಗೊಂದು ಗರುಡವಾಹನ ದೇವಾ ॥ ೧ ॥ ಅನ್ನ ಪಾನಂಗಳಿಗೆ ಅಗ್ರಗಣ್ಯನಾದೆ ಸ್ನಾನ ದಾನಧರ್ಮದ ಮಾರ್ಗಬಿಟ್ಟು ॥ ದಾನವಾಂತಕ ನಿನ್ನ ಧ್ಯಾನವಮಾಡದೆ ॥ ಶ್ವಾನನಂದದಿ ಮನೆಮನೆ ತಿರುಗುವೆ ದೇವಾ ॥ ೨ ॥ ಇನ್ನಾದರೂ ನಿನ್ನ ದಾಸರ ಸಂಘವಿತ್ತು । ಮನ್ನಿಸಿ ಸಲಹಯ್ಯಾ ॥ ಮನ್ಮಥಜನಕಾ ॥ ಅನ್ಯರೊಬ್ಬರಕಾಣೆ ಆಧಾರವೆನಗಿಲ್ಲ ಪನ್ನಗ ಶಯನ ಶ್ರೀ ಪುರಂದರ ವಿಠಲಾ ॥ ೩ ॥

ರಾಗ—ಪಂತುವರಾಳಿ ಛಾಪುತಾಳ.

4. ನೀನೇನುಮಾಡಲಾಪಿ ನಾನು ಮುನ್ನ ಜನ್ಮ ಪಡದಲ್ಲದೆ ರಂಗಾ ॥ಪ॥ ನಾನಾಜನ್ಮದಿ ಬಹು ಯೋನಿಮುಖದಿಬಾಹೋ । ಹೀನತ್ವವನುನೀನು ಕಳೆಯಲಾಪಿಯಾ ॥ ನಾನು ನನ್ನದು ಎಂಬ ಅಹಂಕಾರವಿರೆ ನಿನ್ನ । ಧ್ಯಾನಿಸಲು ಬುದ್ಧಿಯ ಕೊಡಲಾಪೆಯಾ ॥ ೧ ॥ ಸಂಚಿತವಾಗಿಹ ಪ್ರಾರಬ್ಧದೊಳಗೊಂದು । ಕಿಂಚಿತಾದರು ನೀನು ಕಳೆಯಲಾಪೆಯಾ ॥ ಪಂಚೇಂದ್ರಿಯಂಗಳು ದೆಸೆದೆಸೆಗೆ ಎಳೆವಾಗ ॥ ವಂಚನಿಲ್ಲದೇ ನೀನಡ್ಡಬರಲಾಪೆಯಾ ॥ ೨ ॥ ಸರಸಿಜೋದ್ಭವಗೆ ಬುದ್ಧಿಯಪೇಳಿ ಫಣೆಯೊಳು । ಬರೆದ ಬರಹವನು ನೀನು ॥ ತೊಡೆಯಲಾಪೆಯಾ ॥ ಪರಬ್ರಹ್ಮಕಾಗಿ ನೆಲೆಯಾದಿಕೇಶವ ನಿನ್ನ ಸ್ಮರಣೆಗೈಯಲು ಕಾಯದಿರಲಾಪೆಯಾ ॥ ೩ ॥

ರಾಗ—ಕೇದಾರಗೌಳ । ಅಟತಾಳ ।

5. ಬಂದದೇ ದೂರು ಬರಿದೆ ಪಾಂಡವರಿಗೇ ॥ ಕೊಂದವರಿವರು ಕೌರವರೆಂಬ ಅಪಕೀರ್ತಿ ॥ ಬಂದದೇ ದೂರು ॥ ಪ ॥ ಮುನ್ನಿನ ವೈರದಿ ಕಡು ಸ್ನೇಹನ ಮಾಡಿ । ಉನ್ನಂತಲೆತ್ತ ಪಗಡೆಯಾಡಿಸೀ ॥ ತನ್ನ ಕುಹಕದಿಂದ ಕುರುಬಲವನೆ ಕೊಂದ । ಘನ್ನಘಾತುಕ ಶಕುನಿಯೋ ಪಾಂಡವರೋ ॥ ೧ ॥ ಮರಣ ತನ್ನಿಚ್ಛೆಲೀ ॥ ಆದ ಗಂಗಾಸೂನು ಧುರದೊಳು ಷಂಡನ ನೆವದಿಂದಲೀ ॥ ಸರಳಮಂಚದಮೇಲೆ ಮಲಗಿ । ಮೊಮ್ಮಗನ ಕೊರಳಕೊಯ್ದವನು

ಭೀಷ್ಮನೋ ಪಾಂಡವರೋ ॥ ೨ ॥ ಮಗನನೆವದಿ ಕಾಳಗವಬಿಟ್ಟು ಸುರ । ನಗರಿಗೆಗೈಯಲು ವೈರಾಗ್ಯದಲೀ ॥ ಜಗವರಿಯಲು ಕುರುವಂಶಕ್ಕೆ ಕೇಡನು। ಬಗೆದುಕೊಂಡವನು ದ್ರೋಣನೋ ಪಾಂಡವರೋ ॥ ೩ ॥ ತೊಟ್ಟಬಾಣವ ತೊಡಲೊಲ್ಲದೆ ಮಾತೆಗೆ ಕೊಟ್ಟಭಾಷೆಗೆ ಐವರ ಕೊಲ್ಲದೇ । ನೆಟ್ಟನೆ ರಣರಂಗದೊಳಗೆ । ತನ್ನಯ ಪ್ರಾಣ ಬಿಟ್ಟುಕೊಂಡವನು ಕರ್ಣನೋ ಪಾಂಡವರೋ ॥ ೪ ॥ ಮಥನಿಸಿ ಸೂತತನವಮಾಡಿ ರಣದೊಳು ॥ ಅತಿ ಹೀನಗಳನಾಡಿ । ರವಿಸುತನಾ ॥ ಹಿತದಿಂದಪೋಗಿ ॥ ಕೌರವಬಲವನೆ ಕೂಡಿ । ಹತವಮಾಡಿದನ ಶಲ್ಯನೋ ಪಾಂಡವರೋ ॥ ೫ ॥ ಜಲವೊಳು ಮುಳುಗಿ ತಪಮಾಡಿ ಬಲವನ್ನು । ಛಲದಿಂದೆಬ್ಬಿಸಿ ॥ ಕಾದುವೆನೆನ್ನುತಾ ॥ ಕಲಿ ಭೀಮಸೇನನ ನುಡಿಕೇಳಿ ಹೊರವಂಟು ॥ ಕುಲಸಕೊಂದವನು ಕೌರವನೋ ಪಾಂಡವರೋ ॥ ೬ ॥ ಕಂಸಮರ್ಧನ ಸಿರಿಕೃಷ್ಣ ಪಾಂಡವರೊಳು । ತಾನ್ಯಾವಿಲ್ಲದೆ ಕಾಯುವೆನೆನ್ನುತಾ ॥ ಸಂಶಯವಿಲ್ಲದೆ ಕುರುಬಲವನೆ ॥ ಕೊಂದ । ಹಿಂಸಕನಾದಿಕೇಶವನೋ ಪಾಂಡವರೋ ॥ ೭ ॥

ರಾಗ—ಮುಖಾರಿ ॥ ಝಂಪೆತಾಳ ॥

6. ಪೂರ್ವಜನ್ಮದಿ ನಾನು ಮಾಡಿದಾ ಕರ್ಮದಿಂ । ಊರ್ವಿಯೊಳು ಜನಿಸಿದೆನೋ ಕೃಷ್ಣಾ ॥ಪ॥ ಕಾರುಣ್ಯನಿಧಿ ಎನ್ನ ಕಾಯಬೇಕಯ್ಯ ಹರಿ । ವಾರಿಜನಾಭನೆ ಮುದ್ದುಕೃಷ್ಣಾ ॥ಅ.ಪ॥ ಹುಟ್ಟಿಬಂದಾಮೇಲೆ ಸುಖವೆಂಬುದನುಕಾಣೆ । ಕಷ್ಟಪಟ್ಟೇನು ಕೇಳೂ ಕೃಷ್ಣಾ ॥ ತೊಟ್ಟಿಲೊಳುಶಿಶುವು ಬಾಯಿಬಿಟ್ಟತೆರದಲಿ ಕಂ । ಗೆಟ್ಟು ಕುಳಿತಿಹೆನು ಕೃಷ್ಣಾ ॥ ಪುಟ್ಟಲೆಂಬರು ಎನ್ನ ಬಾಧುಜನಗಳೆಲ್ಲ ॥ ಅಟ್ಟಿಬಡಿಯುತಲಿಹರೊ ಕೃಷ್ಣಾ ॥ ಕಷ್ಟದಾರಿದ್ರ್ಯವನು ಬಿಡಿಸದಿದ್ದರೆ ಯಾರು । ಮುಟ್ಟುವರಯ್ಯ ಮುದ್ದು ಕೃಷ್ಣಾ ॥ ೧ ॥ ಕಾಸಿನ ಆಸೆಯಲಿ ಬಯಸಿ ಅನುದಿನದಲಿ । ಆಸೆಯಾಗಿ ಇದ್ದೆನಯ್ಯಕೃಷ್ಣಾ॥ ಹೇಸಿಗೆಯ ಸಂಸಾರದಲಿ ಬದ್ಧನಾಗಿಲು । ಘಾಸಿಪಡಲಾರೆನಯ್ಯಕೃಷ್ಣಾ ಘಾಸಿಮಾಡದೆ ಎನ್ನ ಪಾಪವನು ಪರಿಹರಿಸೊ । ಸಾಸಿರನಾಮದ ಕೃಷ್ಣಾ ॥ ಕಂಸಮರ್ಧನ ಎನ್ನ ಕಾಯಬೇಕಯ್ಯ ಹರಿ । ವಾಸುದೇವನೆ ಎನ್ನ ಮುದ್ದುಕೃಷ್ಣಾ ॥ ೨ ॥ ಲೋಕದೊಳು ಎನ್ನ ಪೋಲುವ ಪಾಪಿಗಳಿಲ್ಲ । ನೀ ಕಂಡು ಬಲ್ಲೆಯ ಕೃಷ್ಣಾ ॥ ರಾಕೇಂದು ಮುಖಿ ದ್ರೌಪದಿದೇವಿ ಮೊರೆಯಿಡಲು । ಆಕೆಗಕ್ಷಯವಿತ್ತೆ ಕೃಷ್ಣಾ ॥ ಸಾಕಿನ್ನು ಎನಗೊಂದು ಗತಿಯು ತೋರಿಸಿ

ಸದ್ವಿ। ವೇಕಿಯನೆ ಮಾಡಯ್ಯ ಕೃಷ್ಣಾ ॥ ಶ್ರೀ ಕಾಗಿನೆಲೆಯಾದಿ ಕೇಶವ ರಾಯ ನಿನ್ನ ॥ ಸುಕಥಾಮೃತ ನುಣಿಸಯ್ಯ ಮುದ್ದುಕೃಷ್ಣಾ ॥ ೩ ॥

14. ಹಣ.

ರಾಗ—ಸುರುಟಿ ॥ ಅಟತಾಳ ॥

1. ಹಣವೆ ಹಣವೇ ನಿನ್ನ ಗುಣವತಿಶಯವು । ಹಣವಿಲ್ಲದವನೆ ಹೆಣವು ನಿಶ್ಚಯವು ॥ಅ.ಪ॥ ದಿಟವಾದುದನೆಲ್ಲ ಸಟೆಯುಮಾಡಿಸುವೆ। ಸಟೆಯಾದುದನೆಲ್ಲಾ ಸತ್ಯವೆಂದೆನಿಸುವೆ ॥ ಕುಟಿಲನಾದರು ಧರ್ಮ ಪಟುವೆಂದೆನಿಸುವೆ ಕಟುಕನಾದರೂ ದಯಾಕರನೆಂದೆನಿಸುವೆ ॥ ೧ ॥ ಜಾತಿಹೀನನ ಕುಲಜಾತನೆಂದೆನಿಪೆ ॥ ಪಾತಕಿಯಾದರೂ ಪಾವನನೆನಿಪೆ ॥ ಮಾತುಬ್ಬಾರದವನ ಮಹನೀಯನೆನಿಪೆ। ನೀತಿಬಾಹಿರಗೆ ವಿಖ್ಯಾತಿಯೆಸಗುವೆ ॥ ೨ ॥ ಅಂಧನಾದರು ಬಲು ಸುಂದರನೆನಿಪೆ । ಸುಂದರಿಯರ ಲೀಲೆ ಹೊಂದಿಸಿ ಕುಣಿಪೆ ॥ ನಿಂದ್ಯನಾದರೂ ಜನ ವಂದ್ಯನೆಂದಿನಿಪೆ । ಬಂಧನ ಬಿಡಿಸಿ ತಾನಂದವ ಕೊಡುವೆ ॥ ೩ ॥ ಗುಣವಿಲ್ಲದವನ ಸುದ್ಗುಣ ಶಾಲಿಯೆನಿಪೆ ॥ ತೃಣವನಾದರು । ಚಿಂತಾಮಣಿಯೆಂದೆನಿಪೆ ॥ ರಣಹೇಡಿಯನು ವೀರಾಗ್ರಣಿಯೆಂದೆನಿಪೆ ॥ ಹೆಣದಂತಿರುವಗೆ ಹೆಣ್ಣ ಕೊಡಿಸುವೆ ॥ ೪ ॥ ನಾರಿಯರನುಗೆಲ್ಪ ದಾರಿತೋರಿಸುವೆ ॥ ಸಾರಸೃಂಗಾರದೊಳೂರಿ ತೋರಿಸುವೆ ॥ ಮಾರಿಯು ನೀತಿ ವಿಶಾರದೆಯೆನಿಪೆ ನಾರಸಿಂಹನ ಪಾದಧ್ಯಾನವ ಮರೆಸುವೆ ॥ ೫ ॥

(ಯಾರು ಬರುವರು ನಿನ್ನ ಹಿಂದೆ) ಎಂಬಂತೆ.

2. ರೊಕ್ಕವೆರಡಕ್ಕು ದುಃಖ ಕಾಣಕ್ಕ ॥ ಪ ॥ ಮಕ್ಕಳ ಮರಿಗಳ ಮರಿಸೋದು ರೊಕ್ಕ । ಸಕ್ಕರೆ ತುಪ್ಪವು ಸವಿಸೋದು ರೊಕ್ಕ ಕಕ್ಕುಲತೆಯ ಬಹು ಬಿಡಿಸೋದು ರೊಕ್ಕ ॥ ಘಕ್ಕನೆ ಹೋದರೆ ಘಾತಕಾಣಕ್ಕ ॥ ೧ ॥ ನೆಂಟರ ಇಷ್ಟರ ಇರಿಸೋದು ರೊಕ್ಕ ॥ ಕಂಟಕಗಳ ಪರಿಹರಿಸೋದುರೊಕ್ಕ ॥ ಗಂಟ ಕಟ್ಟಲಿಕೆ ಕಲಿಸೋದು ರೊಕ್ಕ ॥ ತುಂಟತನಗಳನು ಬಲಿಸೋದು ರೊಕ್ಕ ॥ ೨ ॥ ಇಲ್ಲದ ಗುಣಗಳ ಬಲಿಸೋದು ರೊಕ್ಕ ॥ ಬಲ್ಲಿದನೆನಿವನಿಸೋದು

ರೊಕ್ಕ ॥ ಸಲ್ಲದ ಮಾತನು ಮರಿಸೋದು ರೊಕ್ಕ ॥ ಇಲ್ಲದಿರಲು ದುಃಖ ಕಾಣಕ್ಕ ॥ ೩ ॥ ಉಂಟಾದ ಗುಣಿಗಳ ಮರಿಸೋದು ರೊಕ್ಕ ॥ ಬಂಟರನೆ ಲ್ಲರ ಕರಿಸೋದು ರೊಕ್ಕ ॥ ಒಂಟಿ ಕುದುರೆ ಆನೆ ತರಿಸೋದು ರೊಕ್ಕ ॥ ಸೊಂಟಕಟ್ಟಿ ಮುಂದೆ ನಿಲಿಸೋದು ರೊಕ್ಕ ॥ ೪ ॥ ವಿದ್ಯದ ಮನುಜರ ತರಿ ಸೋದು ರೊಕ್ಕ ಪೊದ್ದಿದ ಜನರನು ಬಿಡಿಸೋದು ರೊಕ್ಕ ॥ ಮುದ್ದುಪುರಂ ದರ ವಿಠಲನ ಮರೆಸುವ ಬಿದ್ದೋಗೋ ರೊಕ್ಕನನು ಸುಡುನೀನಕ್ಕ ॥ ೫ ॥

15. ಲೋಕಕಲ್ಯಾಣ ಪ್ರಾರ್ಥನೆ.

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯಂತಾಮ್
ನ್ಯಾಯೇನ ಮಾರ್ಗೇಣ ಮಹಿಂ ಮಹೀಶಾಃ
ಗೋಬ್ರಾಹ್ಮಣೇಭ್ಯೋ ಶುಭಮಸ್ತು ನಿತ್ಯಂ
ಲೋಕಾ ನಮಸ್ತಾಸ್ಸುಖಿನೋ ಭವಂತು.

ಕಾಲೇ ವರ್ಷತು ಪರ್ಜನ್ಯಃ ಪೃಥ್ವಿ ಸಸ್ಯಶಾಲಿನಿ
ದೇಶೋऽಯಮ್ ಕ್ಷೋಭರಹಿತೊ ಸಜ್ಜನಾಸ್ಸಂತು ನಿರ್ಭಯಾಃ
ಅಪುತ್ರಾಃ ಪುತ್ರಣಸ್ಸಂತು ಪುತ್ರಿಣಸ್ಸಂತು ಪೌತ್ರಣಃ
ಅಧನಾಃ ಸಧನಾಸ್ಸಂತು ಜೀವಂತು ಶರದಾಮ ಶತಮ್.

16. ವಂದೇ ಮಾತರಂ.

ವಂದೇ ಮಾತರಂ ॥ ಸುಜಲಾಂ ಸುಫಲಾಂ ಮಲಯಜಶೀತಲಾಮ್ ಶಸ್ಯಶಾಮಲಾಂ ಮಾತರಂ । ಶುಭ್ರಜ್ಯೋತ್ಸ್ನಾ ಪುಲಕಿತ ಯಾಮಿನೀಮ್ ಫುಲ್ಲಕುಸುಮಿತ ದ್ರುಮದಲ ಶೋಭಿನೀಮ್ ಸುಹಾಸಿನೀಂ ಸುಮಧುರ ಭಾಷಿಣೀಮ್ ಸುಖದಾಂ ವರದಾಂ ಮಾತರಮ್ ॥ ೧ ॥ ತ್ರಿಂಶತ್ಕೋಟಿ ಕಂಠಕಲಕಲ ನಿನಾದಕರಾಲೆ ದ್ವಿತ್ರಿಂಶತ್ಕೋಟಿ ಭುಜೈ ರ್ಧೃತ ಖರ ಕರವಾಲೆ

ಕೇಬಲೆ ಮಾ ತುಮಿ ಅಬಲೆ ಬಹುಬಲಧಾರಿಣೀಂ ನಮಾಮಿ ತಾರಿಣೀಂ ರಿಪುದಲವಾರಿಣೀಂ ಮಾತರಂ ॥ ೨ ॥ ತುಮಿ ವಿದ್ಯಾ, ತುಮಿ ಧರ್ಮ, ತುಮಿ ಹೃದಿ, ತುಮಿ ಮರ್ಮ, ತ್ವಂ ಹಿ ಪ್ರಾಣಾಃ ಶರೀರೆ । ಬಾಹುತೆ ತುಮಿ ಮಾಶಕ್ತಿ, ಹೃದಯೆ ತುಮಿ ಮಾ ಭಕ್ತಿ, ತೊಮಾರ ಪ್ರತಿಮಾ ಗಡೀ ಮಂದಿರೆ ಮಂದಿರೆ ॥ ೩ ॥ ತ್ವಂ ಹಿ ದುರ್ಗಾ ದಶಪ್ರಹರಣ ಧಾರಿಣೀ ಕಮಲಾ ಕಮಲದಲ ವಿಹಾರಿಣೀ ವಾಣೀ ವಿದ್ಯಾದಾಯಿನೀ ನಮಾಮಿ ತ್ವಾಂ ವಂದೇ ಮಾತರಂ ॥ ೪ ॥ ತಮಾಮಿ ಕಮಲಾಂ, ಅಮಲಾಂ, ಅತುಲಾಂ ಸುಜಲಾಂ ಸುಫಲಾಂ ಮಾತರಂ ಶ್ಯಾಮಲಾಂ ಸರಲಾಂ ಸುಸ್ಮಿತಾಂ ಭೂಷಿತಾಂ ಧರಣೀಂ ಭರಣೀಂ ಮಾತರಂ ॥ ೫ ॥ ವಂದೇ ಮಾತರಂ ।

॥ ಸಂಪೂರ್ಣಂ ॥

ಮಾರುತಿ ಪ್ರೆಸ್, ಕಾರ್ಕಳ, ದ. ಕ.

ಭಾರತಮಾತೆಗಾಗಿ

